# ಮುನ್ನುಡಿ

‘ದೇವಪೂಜೆ’ ಪುರುಷಾರ್ಥಸಾಧನೆಗೆ ಶಾಸ್ತ್ರಗಳು ವಿಧಿಸಿರುವ ಅಸಾಧಾರಣವಾದ ಸಾಧನ; ಭಗವಂತನ ಅತ್ಯರ್ಥಪ್ರಸಾದದಿಂದಲೇ ಮೋಕ್ಷ; ಪರಮಭಕ್ತಿ ಅತ್ಯರ್ಥಪ್ರಸಾದಕ್ಕೆ ಸಾಧನ; ಅಪರೋಕ್ಷಜ್ಞಾನದಿಂದಲೇ ಪರಮಭಕ್ತಿ; ಅಂತಹ ಅಪರೋಕ್ಷಜ್ಞಾನಕ್ಕೆ ವಿಹಿತವಾದ ಸಾಧನವೇ ಕರ್ಮಯೋಗ; ಸ್ವವಿಹಿತ ಕರ್ಮಗಳನ್ನು ಭಗವದಾರಾಧನಪೂರ್ವಕವಾಗಿ ನಿಷ್ಕಾಮನೆಯಿಂದ ಆಚರಿಸುವುದೇ ಕರ್ಮಯೋಗದ ತಿರುಳು. ದೇವಪೂಜೆ ‘ಕರ್ಮಯೋಗ’ಕ್ಕೆ ಪ್ರತೀಕದಂತಿರುವ ದಿವ್ಯ ಸಾಧನ. ದೇವಪೂಜೆಯನ್ನು ಬಿಟ್ಟು ಎಂತಹ ಸಾಧನೆಯೂ ವ್ಯರ್ಥವೇ ಸರಿ. ಉಪನೀತವಿಪ್ರರಿಗೆ ಸಂಧ್ಯಾವಂದನೆಯಷ್ಟೇ ಕಡ್ಡಾಯವಾಗಿರುವ ನಿತ್ಯಕರ್ಮಗಳಲ್ಲಿ ದೇವಪೂಜೆಗೇ ಅಗ್ರಸ್ಥಾನ—‘ಪೂಜ್ಯಶ್ಚ ಭಗವಾನ್ನಿತ್ಯಂ ಚಕ್ರಾಬ್ಜಾದಿಕಮಂಡಲೇ’—ತಂತ್ರಸಾರಸಂಗ್ರಹ. ಧ್ರುವಾದಿ ಮಹನೀಯರು ಮತ್ತು ಬ್ರಹ್ಮಾದಿದೇವತೆಗಳು ಗಳಿಸಿರುವ ಪೂಜ್ಯತೆಗೆ ಅವರ ಭಗವದಾರಾಧನೆಯೇ ಮುಖ್ಯ ಸಾಧನ ಎಂದು ಭಾಗವತಾದಿ ಪುರಾಣಗಳು ಸಾರುತ್ತಿವೆ. ದೇವಪೂಜೆಯ ಮಹತ್ವವನ್ನು ಶ್ರೀಮದಾಚಾರ್ಯರು ತಮ್ಮ ಕೃಷ್ಣಾಮೃತಮಹಾರ್ಣವ, ಸದಾಚಾರಸ್ಮೃತಿ, ತಂತ್ರಸಾರಸಂಗ್ರಹ ಮೊದಲಾದ ಗ್ರಂಥಗಳಲ್ಲಿ ವಿಶೇಷವಾಗಿ ಪ್ರತಿಪಾದಿಸಿದ್ದಾರೆ.

ದೇವಪೂಜೆಯ ವಿಧಿವಿಧಾನಗಳನ್ನೆಲ್ಲ ವಿವರವಾಗಿ ನಿರೂಪಿಸುವ ಮುಖ್ಯಕೃತಿ ಶ್ರೀವಿಷ್ಣುಕೃತ ‘ತಂತ್ರಸಾರ’; ಅದರ ಸಾರಸರ್ವಸ್ವವನ್ನು ಸಂಗ್ರಹಿಸುವ ಅಪೂರ್ವ ಕೃತಿ ಶ್ರೀಮದಾಚಾರ್ಯರ ‘ತಂತ್ರಸಾರಸಂಗ್ರಹ’. ತಂತ್ರಸಾರೋಕ್ತ ಪೂಜಾವಿಧಾನದ ಶ್ಲೋಕರೂಪವಿವರಣೆಯೇ ಶ್ರೀ ಟೀಕಾಕೃತ್ಪಾದರ ‘ಪದ್ಯಮಾಲಾ’. ‘ತಂತ್ರಸಾರ—ಪದ್ಯಮಾಲಾನುಸಾರಿಣೀ’ ಎಂದೇ ವೈಷ್ಣವದೇವಪೂಜಾಪದ್ಧತಿಯು ಪ್ರಸಿದ್ಧವಾಗಿವೆ. ತಂತ್ರಸಾರಸಂಗ್ರಹ ಪದ್ಯಮಾಲೆಗಳ ಟೀಕೆಗಳಲ್ಲಿ ಶ್ರೀ ವೇದವ್ಯಾಸತೀರ್ಥರು, ಶ್ರೀ ಸುಮತೀಂದ್ರತೀರ್ಥರು ಮೊದಲಾದ ಮಹನೀಯರು ರಚಿಸಿರುವ ಪೂಜಾವಿಷಯಕ ಗ್ರಂಥಗಳಲ್ಲೂ ದೇವಪೂಜೆಯ ಬಗ್ಗೆ ಸಾಕಷ್ಟು ವಿವರಗಳು ದೊರೆಯುತ್ತವೆ. ಶ್ರೀ ವಿಷ್ಣುತೀರ್ಥರ ‘ಸಂನ್ಯಾಸಪದ್ಧತಿ’ ಮತ್ತು ಶ್ರೀ ನಾರಾಯಣಪಂಡಿತಾಚಾರ್ಯರ ‘ಯೋಗದೀಪಿಕಾ’ ಗ್ರಂಥಗಳಲ್ಲೂ ಇದರ ಬಗ್ಗೆ ಅನೇಕ ಅಪೂರ್ವ ವಿಷಯಗಳು ಉಂಟು. ಇವುಗಳಲ್ಲಿ ಶ್ರೀ ಜಯತೀರ್ಥರ ‘ಪದ್ಯಮಾಲೆ’ ಪೂಜೆಯ ವಿಧಿವಿಧಾನಗಳ ನಿರೂಪಣೆಗೆಂದೇ ಮೀಸಲಾಗಿರುವ ಅತ್ಯಂತ ಮಹತ್ವದ ಕೃತಿ.

ಶ್ರೀ ಸೀತಾರಾಮದಾಸರ 'ದೇವರ ಪೂಜೆ—ತಂತ್ರ-ಮಂತ್ರ-ಭಾವ ಪದ-ಮಾಲೆ' ಎಂಬ ಪ್ರಕೃತ ಕೃತಿ ದೇವರಪೂಜೆಯ ವಿವರಗಳನ್ನು ಪದ್ಯರೂಪದಲ್ಲಿ ವಿವರಿಸುವ ಕೃತಿ. ಪ್ರಧಾನವಾಗಿ 'ಪದ್ಯಮಾಲೆ'ಯ ಭಾವಾನುವಾದದಂತಿರುವ ಇದರಲ್ಲಿ ಪುರುಷಸೂಕ್ತ, ಶ್ರೀಸೂಕ್ತ, ಅಂಭೃಣೀಸೂಕ್ತ ಮೊದಲಾದವುಗಳ ಅನುವಾದವೂ ಸೇರಿದೆ. ಸಂಸ್ಕೃತದ ಶಾಸ್ತ್ರಗ್ರಂಥವೊಂದರ ಅನುವಾದಕಾರ್ಯ ಎಂದೂ ಸುಲಭಸಾಧ್ಯವಾದುದಲ್ಲ; ಆದರೆ ವಿಷಯಗ್ರಹಣಕ್ಕೆ ಪದ್ಯಮಾಧ್ಯಮವನ್ನೇ ಮೆಚ್ಚುವ ಜನಕ್ಕೆ ಇಂತಹ ಅನುವಾದಗಳ ಅವಶ್ಯಕತೆ ಇದ್ದೇ ಇರುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀ ಸೀತಾರಾಮದಾಸರ ಪ್ರಯತ್ನವು ಸ್ವಾಗತಾರ್ಹವಾದುದು. ಈಗಾಗಲೇ ತಮ್ಮ ಅನೇಕ ಕೃತಿಗಳಿಂದ ಪ್ರಸಿದ್ಧರಾಗಿರುವ ಶ್ರೀ ಸೀತಾರಾಮದಾಸರ ಈ ಕೃತಿ ದೇವಪೂಜೆಯ ವಿವರಗಳನ್ನು ತಿಳಿಯಬಯಸುವ ಜನಕ್ಕೆ ಉಪಯುಕ್ತವೆನ್ನಿಸುವುದರಲ್ಲಿ ಸಂಶಯವಿಲ್ಲ. ಅಡಿಟಿಪ್ಪಣಿಯಲ್ಲಿ ಸಂಬಂಧಿಸಿದ ಮಂತ್ರಗಳ ಪೂರ್ಣಪಾಠವನ್ನೂ, ಪರಿಶಿಷ್ಟದಲ್ಲಿ ಪುರುಷಸೂಕ್ತ, ಬ್ರಹ್ಮಪಾರಸ್ತೋತ್ರಾದಿ ಪೂಜೋಪಯೋಗಿ ಮಂತ್ರಸ್ತೋತ್ರಗಳನ್ನೂ ಕೊಟ್ಟಿರುವುದು ಇದರ ಉಪಯುಕ್ತತೆಯನ್ನು ಹೆಚ್ಚಿಸಿದೆ. ಇಂತಹ ಉಪಯುಕ್ತ ಗ್ರಂಥವನ್ನು ಸಿದ್ಧಪಡಿಸಿದ ಶ್ರೀ ಸೀತಾ-ರಾಮದಾಸರು ಅಭಿನಂದನಾರ್ಹರಾಗಿದ್ದಾರೆ.

ಪ್ರಭವ— ಮಕರಸಂಕ್ರಾಂತಿ　　　　ವ್ಯಾಸನಕೆರೆ ಪ್ರಭಂಜನಾಚಾರ್ಯ

# ಲೇಖಕನ ಎರಡು ಮಾತುಗಳು

ಸಂಸ್ಕೃತಭಾಷೆಯಲ್ಲಿರುವ ದೇವಪೂಜಾ ತಂತ್ರಮಂತ್ರಗಳ ಭಾವವನ್ನು ಸ್ವಲ್ಪವಾದರೂ ಅರಿತು ಪೂಜೆಯಲ್ಲಿ ತೊಡಗಿದರೆ ಅಂತಹ ಪೂಜೆಯು ಹೆಚ್ಚು ಸಂತೋಷಕರ ಹಾಗೂ ಫಲದಾಯಕವಾಗುವುದೆಂದು ನನಗೆನಿಸಿತು

ಸಂಸ್ಕೃತ ಬಾರದ ನಾನು ಕನ್ನಡಭಾಷೆಯಲ್ಲಿರುವ ಹಲವಾರು, ಅರ್ಥವಿವರಣಾ ಹೊತ್ತಿಗೆಗಳನ್ನು ನೋಡಿ ಸಿದ್ಧಪಡಿಸಿಕೊಂಡ ಭಾವಾನುವಾದವೇ ಈ ನನ್ನ ಪ್ರಸ್ತುತ ಪುಸ್ತಕದ ವಸ್ತು.

ಇದು ಸಜ್ಜನರಿಗೆ ಸರಿದೋರಿಬಂದರೆ ಹಾಗೂ, ಇತರ ಯಾರಿಗಾದರೂ ಕಿಂಚಿತ್ತಾದರೂ ಉಪಯೋಗವಾದಲ್ಲಿ ನಾನು ಧನ್ಯ.

ಏನಿಲ್ಲದಿದ್ದರೂ ಪುಸ್ತಕದಲ್ಲಿ ಒಂದೆಡೆ ಸಂಗ್ರಹವಾಗಿರುವ ಮೂಲ ಮಂತ್ರ-ಸೂಕ್ತ-ಸ್ತೋತ್ರಗಳಾದರೂ ಉಪಯುಕ್ತವೆನಿಸದಿರಲಾರವೆಂದು ನನ್ನ ಭಾವನೆ.

ಹಾಡಿನ ರೂಪದಲ್ಲಿ ಈ ಕೃತಿಯಿರುವ ಬಗೆಗೆ ಒಂದು ಮಾತು. ದಾಸರಾಯರೆಲ್ಲರ ಕೃತಿಗಳೆಲ್ಲವೂ ಹೆಚ್ಚಾಗಿ ಪದ-ಪದ್ಯ-ಸುಳಾದಿ ರೂಪಗಳಲ್ಲಿರುವುದು, ಅವನ್ನು ಹಾಡಿಕೊಂಡರೆ ಮತ್ತು ಬಾಯಿಪಾಠ ಮಾಡಿದರೆ ಅರ್ಥ—ಮನನ ಸುಲಭವಾಗುವುದು ಎಂಬ ದೃಷ್ಟಿಯಿಂದ. ಆದುದರಿಂದ ನಾನೂ ಈ ಜಾಡನ್ನೇ ಹಿಡಿದಿದ್ದೇನೆ.

ಈ ಸಣ್ಣ ಪ್ರಯತ್ನಕ್ಕೆ ಪಂಡಿತೋತ್ತಮರಾದ ಮ॥ಶಾ॥ಸಂ॥ ಪೂಜ್ಯ ಶ್ರೀ ವ್ಯಾಸನಕೆರೆ ಪ್ರಭಂಜನಾಚಾರ್ಯರು ಮುನ್ನುಡಿಯಿತ್ತು ಆಶೀರ್ವದಿಸಿರುವುದು ನನ್ನ ಸೌಭಾಗ್ಯ.

ಮೂಲ ತಂತ್ರ-ಮಂತ್ರಗಳ ಸಾಧ್ಯವಾದಷ್ಟು ಸ್ವಚ್ಛ-ಪರಿಶುದ್ಧ ಪಾಠಗಳನ್ನು ಮುದ್ರಕರ ಅನವರತ ಸಹಕಾರದಿಂದಲೇ ಕೊಡಲು ಸಾಧ್ಯವಾಗಿದೆ.

ಈ ಕೃತಿಯಲ್ಲಿನ ನಿತ್ಯಪೂಜೆಯ ನೈವೇದ್ಯ ಪ್ರಕರಣದ ಅನ್ವಯವು ಹರಿದಿನವಾದ ಏಕಾದಶಿಗೆ ಇರುವುದಿಲ್ಲ.

ಹರಿದಾಸರು ವರ್ಣಿಸಿರುವ ಷೋಡಶೋಪಚಾರ ಪೂಜಾವಿಧಾನದಲ್ಲಿ ವಸನದ ನಂತರ 'ಉಪವೀತ ಸಮರ್ಪಣಾ' ಎಂದು ಹೇಳಿರುವುದನ್ನೇ ಆಧಾರವಾಗಿಟ್ಟುಕೊಂಡು ಈ ಕೃತಿಯಲ್ಲಿ ವಸ್ತ್ರಸಮರ್ಪಣೆಯ ನಂತರ—ಆಭರಣಸಮರ್ಪಣೆಯ ಮೊದಲಿಗೆ—ಉಪವೀತಸಮರ್ಪಣೆಯನ್ನು ತೋರಿಸಲಾಗಿದೆ. ಹಲವಾರು ದೇವಪೂಜಾ ವರ್ಣನಾ ಗ್ರಂಥಗಳಲ್ಲಿ, ಶ್ರೀ ಜಯತೀರ್ಥರ 'ಪದ್ಯಮಾಲಾ' ಗ್ರಂಥದಲ್ಲಿ ಉಪವೀತ ಸಮರ್ಪಣೆ ಆಭರಣಸಮರ್ಪಣೆಯ ನಂತರವೆಂದು ಉಲ್ಲೇಖಿತವಾಗಿದೆ. ಬಲ್ಲವರು ಇದರಿಂದಾಗಿ ತಮಗೆ ಸೂಕ್ತ ತೋರಿದ ವಿಧಾನವನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

ಇತಿ ಸಜ್ಜನ-ಸದ್ಭಕ್ತಪಾದರೇಣು
ಸೀತಾರಾಮದಾಸ
(ವಿ. ಶ್ರೀನಿವಾಸಮೂರ್ತಿ)

## ಒಂದು ಗಮನಾರ್ಹ ಕೃತಿ

ಸಾಹಿತ್ಯ–ಸಂಗೀತ–ಎಂಬ ಕಲಾಯುಗ್ಮಗಳ ಮಧುರಮಿಲನವೇ ದಾಸಸಾಹಿತ್ಯ. ಆದುದರಿಂದಲೇ ಪುರಂದರದಾಸರನ್ನು "ಕರ್ಣಾಟಕ ಸಂಗೀತ ಪಿತಾಮಹ" ಎಂಬುದಾಗಿ ಕರೆದರು. ನಾದತನ್ಮಯತೆ, ತನ್ಮೂಲಕ ಪರಬ್ರಹ್ಮೋಪಾಸನೆ ದಾಸರ ಸಾಹಿತ್ಯದಲ್ಲಿ ಕಂಡುಬರುತ್ತದೆ. ನವವಿಧ ಭಕ್ತಿಭರನಿರ್ಭಯತೆಯಿಂದ ಭಗವಂತನ ಪ್ರೇಮ-ರೂಪದ ಸಾಕ್ಷಾತ್ಕಾರದಿಂದ ದಾಸವಾಙ್ಮಯ ತುಂಬಿ ತುಳುಕುತ್ತಿದೆ. ಮಾನವಜನ್ಮದ ಸಾಫಲ್ಯಕ್ಕೆ ಅಡ್ಡಿ ಬರುವ ವಿಚಾರಗಳತ್ತ ದಾಸರು ಕಟುಟೀಕೆಗೈದುದಿದೆ. "ಭಕ್ತಿರೇಕಾ ಗರೀಯಸೀ", "ಭಕ್ತಿಃ ಕಿಂ ನ ಕರೋತ್ಯಹೋ" ಎಂದಂತೆ ಮತ್ತು ಭಕ್ತಿಕಂಪಿತನಾದ ಭಗವಂತನ ಆರಾಧನೆಗೆ ನಾಮಸಂಕೀರ್ತನೆಯೇ ಕಲಿಯುಗದಲ್ಲಿ ಪರಮೋಚ್ಚ ಸಾಧನ ಎಂಬುದನ್ನು ಭಕ್ತರು ಸಾಧಿಸಿ ತೋರಿಸಿದ್ದಾರೆ. "ನಾಮಸಂಕೀರ್ತನೆ ಅನುದಿನ ಮಾಳ್ಪಗೆ ನರಕಭಯಗಳುಂಟೇ?" ಎಂಬುದೇ ಅವರ ಪ್ರಶ್ನೆ. "ಕಲಿಯುಗದಿ ಸ್ಮರಣೆ ಲೇಸು" ಎಂದಂತೆ, ಸ್ಮರಣೆ, ಭಜನೆ, ಸ್ತೋತ್ರಗಳು ಸರ್ವರಿಗೂ ಅಭೀಷ್ಟ-ಪ್ರದಗಳು. 'ನಾಲಗೆಗೆ ಭೂಷಣ ಹರಿನಾಮವು', 'ಭೂಷಣಕೆ ಭೂಷಣ ಇದು ಭೂಷಣ'—"ಹರಿನಾಮಸ್ಮರಣೆಯೇ ನವರತ್ನವಿಲ್ಲಿ" ಎನ್ನುವ ಸೀತಾರಾಮದಾಸರ ಮಾತು ದಾಸಸಾಹಿತ್ಯದ ಭೂಷಣಪ್ರಜ್ಞೆಯನ್ನು ಸಾರುತ್ತಿದೆ. ಕನಕದಾಸರು 'ಕೊಡವಾಲು ಪುಳಿವೆರೆದಳಿವುದಲ್ಲದೆ ಪಾಲ್ಗಡಲು ನಾಶವನೈದುವುದೆ, ಬಡವಂಗೆ ಕೃತಿದೋಷವಲ್ಲದೆ ಬೊಮ್ಮನ ಪಡೆದಾತಗೇತರ ದೋಷ" ಎಂದಿದ್ದಾರೆ.

"ಶ್ರೀಹರಿಗುರುಭಜನೆ—ತಾರತಮ್ಯೋಕ್ತ ಸ್ತೋತ್ರಪದಗಳು (ಪ್ರಥಮ ಭಾಗ—ದೇವತಾಕಕ್ಷ)" ಎಂಬ ಕಿರುಹೊತ್ತಗೆಯಲ್ಲಿ ೧೯ ಸ್ತೋತ್ರಪದಗಳಿವೆ. ಎಲ್ಲ ಪದಗಳಿಗೂ ರಾಗ ತಾಳ ನಿರ್ದೇಶನಗಳಿವೆ. ಪದ್ಯಗಳು ಸರಳ ಸುಂದರವಾಗಿವೆ. ಎಲ್ಲ ಪದ್ಯಗಳಲ್ಲೂ ದಾಸರ 'ಮುದ್ರೆ'ಯಾದ "ಸೀತಾರಾಮವಿಠಲ" ಎಂಬ ಅಂಕಿತವಿದೆ. ಖಂಡಪ್ರಾಸ ನಿಯತವಾಗಿಯೂ, ಬಹುತೇಕ ಅಂತ್ಯಪ್ರಾಸ ಘಟಿತವಾಗಿಯೂ ಹಾಡುವುದಕ್ಕೆ, ಭಜಿಸುವುದಕ್ಕೆ ತಕ್ಕವುಗಳಾಗಿಯೂ ಇವೆ. "ಪ್ರಾಸದಲ್ಲಿ ಲೋಪವಿಲ್ಲ. ಅಲಂಕಾರೋಕ್ತಿಗಳಲ್ಲಿ ಅಸಾಂಗತ್ಯವಿಲ್ಲ. ರಸಪುಷ್ಟಿಯಲ್ಲಿ ಕೊರತೆಯಿಲ್ಲ. ಹೃದಯಾಂತರಾಳದಿಂದ ಮಿಡಿಯುವ ಭಾವೋದ್ವೇಗಗಳು ಕೃತಿಗಳಲ್ಲಿ ಪ್ರತಿಸ್ಪಂದಿಸುತ್ತಿವೆ" ಎನ್ನುವ ತಂದೆ ವೆಂಕಟೇಶವಿಠಲದಾಸರ ಮಾತುಗಳಿಗೆ ನಾವೂ ಒಪ್ಪಿಗೆಯ ಸಹಿ ಹಾಕುತ್ತೇವೆ. ಹರಿದಾಸರ ಸಂಪ್ರದಾಯಬದ್ಧ ಜಾಡಿನಲ್ಲೇ ಮುನ್ನಡೆದು ಔಚಿತ್ಯ-ಪೂರ್ಣವಾದ ಅಭಿನವಾಭಿಪ್ರಾಯಗಳನ್ನು ಪ್ರಕಟಿಸಿ ತಮ್ಮ ಕಾರ್ಯದಲ್ಲಿ ಕೃತಾರ್ಥರಾದ ಸೀತಾರಾಮದಾಸರು ದಾಸಸಾಹಿತ್ಯಭೀಪ್ಸುಗಳಿಗೆ ವಂದ್ಯರಾಗಿದ್ದಾರೆ.



ಈ ಚಿಕ್ಕ ಕೃತಿಯಲ್ಲಿ—ದೇವತಾಕಕ್ಷದಲ್ಲಿ—ಶ್ರೀ ಗಣಪತಿದೇವ, ಶ್ರೀ ಪಾರ್ವತೀದೇವಿ, ಶ್ರೀ ತುಲಸೀದೇವಿ, ಶ್ರೀ ಮಹರುದ್ರದೇವ, ಶ್ರೀ ಶೇಷದೇವ, ಶ್ರೀ ಗರುಡದೇವ, ಶ್ರೀ ಭಾರತೀದೇವಿ, ಶ್ರೀ ಸರಸ್ವತೀದೇವಿ, ಶ್ರೀ ಮಾರುತಾತ್ಮಜ, ಶ್ರೀ ಮಹಾಲಕ್ಷ್ಮೀದೇವಿ, ಶ್ರೀಮನ್ನಾರಾಯಣ—ಶ್ರೀಹರಿ, ಶ್ರೀ ವೇಂಕಟೇಶ್ವರಸ್ತೋತ್ರಗಳೆಂಬ ಶೀರ್ಷಿಕೆಗಳಲ್ಲಿ ೪೯ ಕೀರ್ತನೆಗಳಿವೆ. ಮಾಧ್ವಸಂಪ್ರದಾಯದ ತತ್ವಗಳನ್ನಿಲ್ಲಿ ಚಿತ್ರಿಸಲಾಗಿದೆ. ವಾಯುವಿನ ಅವತಾರತ್ರಯವೆಂದು ನಂಬುವ ಹನುಮ, ಭೀಮ, ಮಧ್ವಾಚಾರ್ಯರ ಸ್ತುತಿಗಳು (೧೫, ೧೬) ವಿಶಿಷ್ಟವಾಗಿವೆ. ಇದು "ಹನುಮತ್-ಭೀಮಮಧ್ವಾಖ್ಯಾಸ್ತ್ರಯೋ ವಾಯೋಃ ಸುತಾ ಇಮೇ" (ಬ್ರಹ್ಮಾಂಡಪುರಾಣದ ಮುಖ ಕಾಂಡ, ಅ. ೨೮) ಎನ್ನುವ ಮಾತನ್ನು ಸಮರ್ಥಿಸುತ್ತದೆ. ಭಕ್ತನ ಆರ್ತ-ಭಾವನೆ 'ಬಾರೋ ಬೇಗನೆ ಸ್ವಾಮಿ ರಾಮಚಂದ್ರ' (೨೬), 'ನಿನ್ನನೇ ನಂಬಿರುವೆ ನಿನ್ನ ಭಜಿಸುವ ಭಾಗ್ಯ' (೩೨) ಎಂಬಲ್ಲಿನ ಅನ್ಯಥಾ ಶರಣಾಗತಿರ್ನಾಸ್ತಿ ಎನ್ನುವ ಮನೋಭಾವ ಸುಂದರವಾಗಿದೆ. 'ಸಂಕಟ ಬಂದಾಗ ವೆಂಕಟರಮಣ' ಎನ್ನುವ ಭಾವ ಪದ್ಯ ೪೨ರಲ್ಲಿ ಮೂಡಿಬಂದಿದೆ. 'ಶ್ರೀ ಭಾರತೀದೇವಿ' ಎನ್ನುವ ೮ನೆಯ ಪದ್ಯ ವಿಶಿಷ್ಟರೀತಿಯದ್ದಾಗಿದ್ದು ಹೃದ್ಯವಾಗಿದೆ. ಕೃತಿಯುದ್ದಕ್ಕೂ ಭಾವುಕಜನ ಮನೋ-ಹರಗಳಾದ ಪದ್ಯಗಳ ಶ್ರೇಣಿಯನ್ನು ಕಾಣಬಹುದಾಗಿದೆ. ೪೯ನೆಯ ಪದ್ಯದಾದಿಪದಗಳನ್ನು ಸೇರಿಸಿದರೆ "ಶುಭಮಂಗಳ ನಿತ್ಯ ಜಯಮಂಗಳ ಶ್ರೀಹರಿಗೆ ಸೀತಾರಾಮವಿಠಲ" ಎನ್ನುವ ಮಂಗಳವಾಚಕವು ಲಭಿಸುತ್ತದೆ. ಕೊನೆಗೆ ಕೃತಿ ಶ್ರೀಕೃಷ್ಣಾರ್ಪಣ-ಮಸ್ತು ಎಂಬ ಭಕ್ತಾಭೀಪ್ಸೆಯೂ ಇದೆ.

ಕೃತಿಯಲ್ಲಿ ಅರ್ಥೈಸಲು ತೊಡಕೆನಿಸುವ ಪದ್ಯ ೧೦ರಲ್ಲಿ 'ಶುದ್ಧ ನೀನಳಿರುಷ್ಟ', 'ಮನವು ಮಣಿಮಂತ ತನವು ತುಂಬಿದ ಭ್ರಾಂತ'; (ಪದ್ಯ ೨೩ರಲ್ಲಿ ೨ನೆಯ ಕೀರ್ತನೆ)ಗಳಿವೆ. ದೋಷಗಳೆನ್ನಿಸುವ—ವಸುಧಿಜೆಯನು ಗೆದ್ದ (ಪ ೨೭) (ಇದು 'ವಸುಧಾತ್ಮಜೆಯ ಗೆದ್ದ' ಎಂದಾದರೆ ಶುದ್ಧ) ಪದ್ಯ ೩೩ರಲ್ಲಿ ಎರಡು ಸಲ ಬಂದಿರುವ 'ಮುರುಳಿ' ಎಂಬ ಪದ 'ಮುರಳಿ' ಎಂದಾಗಬೇಕು. ಪದ್ಯ ೩೬–೨ರ ಎರಡನೆಯ ಸಾಲು 'ತುಂಬಿರುವ ರೋಗವನು ಕಳೆದು' ಎಂದಿದೆ; ಅದಕ್ಕೆ ರಾಗ ತಾಳ ಸೇರಲು 'ತನುವಿಂದ' ಎಂದು ಸೇರಿಸಿಕೊಳ್ಳಬೇಕು. ಪದ್ಯ ೧೦ರಲ್ಲಿ 'ರಸನ-ಕಮೃತವಾಗಿ' ಎಂಬುದು 'ರಸನೆಗಮೃತವಾಗಿ' ಎಂದಾಗಬೇಕು. ಪದ್ಯ ೪೨ರಲ್ಲಿ ೨ರ ಮೂರನೆ ಸಾಲು 'ಹಿತವಾಗುವುದು' ಎಂಬ ಪದದ ಬದಲು 'ಹಿತವಹುದು' ಎಂದಿದ್ದರೆ ಲಯ, ತಾಳ, ಶುದ್ಧ, ಹಾಡಲೂ ಅನುಕೂಲ. ಇನ್ನು ತಿದ್ದಿದರೂ ಉಳಿದ ಮುದ್ರಣದೋಷಗಳು ಸಣ್ಣವು ಕೆಲವು ಉಳಿದಿವೆ.

ದಾಸಸಾಹಿತ್ಯಶ್ರೇಣಿಗೆ ಇದೊಂದು ಗಮನಾರ್ಹ ಕೊಡುಗೆ. ಇತರ ಕಕ್ಷೆಗಳೂ ಶ್ರೀ ಸೀತಾರಾಮದಾಸರಿಂದ ರಚಿತವಾಗಿ ಬೆಳಕು ಕಾಣಲಿ ಕನ್ನಡ ಸಾಹಿತ್ಯ,

ಕರ್ಣಾಟಕ ಸಂಗೀತ ತನ್ಮೂಲಕ ಶ್ರೀಮಂತವಾಗಲಿ. "ಭಕ್ತಿವೃದ್ಧಿಂ ಕರ್ನಾಟಕೇ ಗತಾ" ಎಂಬ ಮಾತು ಸಾರ್ಥಕವಾಗಲಿ. "ಭಕ್ತಿಃ ಸರ್ವಾರ್ಥಸಾಧಿನೀ" ಆಗಿ ಚಿರಕಾಲ ಬಾಳುತ್ತಿರಲಿ. ಇತಿ ಶುಭಂ.

ಕೆ. ಸುಬ್ರಹ್ಮಣ್ಯಭಟ್ಟ
"ಸಪ್ತಗಿರಿ", ಜನವರಿ 1987

---

। ಶ್ರೀ ಸೀತಾರಾಮವಿಠಲ ಪ್ರಸೀದ ।

# ದೇವರ ಪೂಜೆ

## ತಂತ್ರ-ಮಂತ್ರ-ಭಾವ ಪದಮಾಲೆ

---

### ಜಾಗೃತಿ-ಪ್ರಾತರ್ವಿಧಿ

ಉದಯದಲೇಳುತ ಹರಿ ಹರಿ ಎನ್ನುತ ವಿದ್ಯುಕ್ತ ವಿಧಿಗಳ ಮುಗಿಸುತಲಿ
ಸದಮಲಮಾನನಾಗಿ ತೀರ್ಥಗಳರಸನ ಅಪ್ಪಣೆ ಸ್ನಾನಕೆ ಪಡೆಯುತಲಿ
ವಿಷ್ಣುಪಾದೋದ್ಭವೆ ಸಿಂಧು ಸರಸ್ವತಿ ಯಮುನೆ ಗೋದಾವರಿ ನರ್ಮದೆಯು
ಕೃಷ್ಣೆಯು ಮತ್ತಿನ್ನು ಭೀಮೆಯು ಫಲ್ಗುವು ಆ ಸರಯೂ ಗಂಡಕೀ ಗೋಮತಿಯು
ಕಾವೇರಿ ಕಪಿಲೆಯು ಪ್ರಯಾಗವಿನುತಾ ನೇತ್ರಾವತೀತ್ಯಾದಿ ತೀರ್ಥಗಳ
ಭಾವದಿಂ ನೆನೆಯುತ ಮಾಡುತ ಮಜ್ಜನ ಪರಿಶುದ್ಧ ತನುಮನದಿಂದಲಿನ್ನು
ದೇಗುಲವೀ ದೇಹ ಹರಿಗೆಂದು ಭಾವಿಸಿ ಶೃಂಗಾರ ಮಾಡಲು ಅದನೀಗ
ಶ್ರೀಗೋಪಿಚಂದನದ ಶೋಭನ ದ್ವಾದಶ ಶ್ರೀನಾಮಮುದ್ರೆಯ ಧರಿಸುವೆನು
ಹರಿಚಿಹ್ನೆ ತನುವಲ್ಲಿ ಹರುಷದಿ ತಳೆಯುತ್ತ ಹರಿಗುಣ ರೂಪ ಕ್ರಿಯೆಗಳನು
ಅರಿತಷ್ಟು ಮನದಲಿ ಚಿಂತಿಸಿ ನಲಿಯುತ ಸಂಧ್ಯಾದಿ ಜಪಗಳ ಮುಗಿಸುತಲಿ

### ತುಲಸೀ ಸಂಗ್ರಹ

ಬಿಡಿಸಲುಬಾರದು ತುಲಸಿಯ ಆದಿತ್ಯ ಮಂಗಳ ಆ ಶುಕ್ರವಾರದಲಿ
ಬಿಡಿಸಲುಬಾರದು ತುಲಸಿಯ ಆ ಪರ್ವಕಾಲದಿ ಭೋಜನಾನಂತರದಿ
ಪಾಲಿಸುತೀ ನೇಮ ದೇವನ ನಿತ್ಯದ ಪೂಜೆಯದಾಗಿರೆ ದ್ವಾದಶಿಯ
ಕಾಲದ ಹೊರತಿನ್ನು ತುಲಸಿಯ ತರಲಿಕೆ ಅವಕಾಶವಿರುವುದ ಗಮನಿಸುತ
ತರುತಲಿ ತುಲಸಿಯ ಸ್ನಾನವ ಮತ್ತೊಮ್ಮೆ ಪೂಜೆಯ ಪೂರ್ವದಿ ಮಾಡುತಲಿ
ಹರುಷದಿ ಪೂಜೆಯ ಕಾರ್ಯದಿ ತೊಡಗಲು ಬೇಗನೆ ನಾನೀಗ ಅನುವಾಗುವೆ

### ಪೂಜಾಸಾಧನಗಳ ಅಣಿಗೊಳಿಸುವಿಕೆ

ದೇವರ ಮನೆಯಲಿ ಅಣಿಮಾಡಿ ಇಡುವೆನು ಪೂಜೆಗೆ ಬೇಕಾದ ಕಲಶಗಳ
ಭಾವದಿಂ ಏಳಲ್ಲ ಐದಾದರಲ್ಲಿಟ್ಟು ಹೂ ತುಲಸಿ ಗರಿಕೆಯ ತಂದಿಡುವೆ

ಸರಿತಿಂದ ಆರೊಂದು ಬಾರಿಲಿ ಶೋಧಿಸಿ ಕಲಶದಲ್ತುಂಬುತ ತಂದಂತಹ
ಪರಿಶುದ್ಧ ಜಲವಿರೆ ಭಕ್ತಿಲಿ ಶ್ರದ್ಧೆಲಿ ಪೂಜೆಗೆ ಇಡುವೆನು ಅಗ್ರ್ಯೋದಕ
ಆಯಾಯಾ ಕಾಲದ ತೋಟದ ಕಾಡಿನ ಹೂಗಳ ಬಿಡಿಸಿ ನಾ ತಂದಿರುವೆ
ಶ್ರೀಯರಸನಾತನ ಪೂಜೆಗೆಂದಾಗದ ಅಣಿಮಾಡಲಿನ್ನೀಗ ಅನುವಾಗುವೆ
ಬೆಲೆಯಿತ್ತು ಕೊಳ್ಳದ ಇತರರ ಹಣದಿಂದ ತಂದಂಥ ಮತ್ತಿನ್ನು ಕದ್ದಂತಹ
ನೆಲದಲಿ ಬಿದ್ದಿದ್ದ ಆಳ್ಗಳು ತಂದಿದ್ದ ಹೂಗಳ ಪೂಜೆಗೆ ಉಪಯೋಗಿಸೆ
ಹರಳೆಲೆ ಎಕ್ಕದ ಎಲೆಯಲಿ ತಂದಂಥ–ಬರಿಗೈಲಿ ತಂದಂಥ ಹೂಗಳನು
ಇರಿಸೆನು ಬಟ್ಟೆಲಿ ಕಟ್ಟುತ ತಂದಂಥ ಹೂಗಳನೆಂದೆಂದೂ ಉಪಯೋಗಿಸೆ

## ದೇವರ ಮನೆಗೆ ಪ್ರವೇಶ

ದೇವಗೆಂದಾಗಿಯೇ ಅರ್ಘ್ಯಕೆ ಪಾದ್ಯಕೆ ಒದಗಿಸಿ ನೀರನು ಹರಿಮಂದಿರ
ಭಾವದಿಂ ಸಾರಲು ಕೈಕಾಲ ತೊಳೆಯುತ ಆಚಮನ ಮಾಡಿ ನಾ ಬರುವೆನಿದೋ
ಪರಿಶುದ್ಧ ಜಲ ತುಲಸಿ ಶ್ರೀಗಂಧ ಪುಷ್ಪವು ಇರಲೀಗ ಸಿರಿದೇವಿಗೊಂದಿಸುತ
ದ್ವಾರದಲಿರುವವರೆಲ್ಲರ ವಂದಿಸಿ ನೆನೆಯುತ ನಮಿಸುವೆ ಶ್ರೀಹರಿಯ
ಪರಿಪೂರ್ಣಗುಣಗಳ ಶರಧಿಯೆ ಹುಟ್ಟಿರವ ನಾಶವ ಜಗಕೀವ ನಾರಾಯಣ
ವರ ಜ್ಞಾನದಾತನೆ ಆ ಸುರ ಅಸುರರ ಸುಖದುಃಖಕಾರಣ ಸುವ್ಯಾಪ್ತನೆ[1]
ವಿಪರೀತಮತಿವಾದ ಅಪಲಾಪವೆನ್ನುತ ನಿಜತತ್ವ ಜಗದಲಿ ಬೀರುತಲಿ
ಸುಪವಿತ್ರ ಹರಿಯೊಬ್ಬ ಸರ್ವೇಶನೆಂದಂಥ ಆನಂದತೀರ್ಥರ್ಗೆ ವಂದಿಸುವೆ[2]
ಈ ರೀತಿಯರ್ಥದ 'ನಾರಾಯಣೇ'ತ್ಯಾದಿ ಮಂತ್ರವ ಭಕ್ತಿಲಿ ಪಠಿಸುತಲಿ
ದ್ವಾರವ ಸಾರುತ ದೇವನ ಮಂದಿರ ಕಾಯುವ ಭಟರನ್ನು ನಮಿಸುವೆನು
ಮೂಡಲ-ಬಡಗಲ ಪಡುವಲ ತೆಂಕಲ ಜಯ-ವಿಜಯ ಬಲ-ಪ್ರಬಲರನು
ಬಿಡದಂತಾ ನಂದ ಸುನಂದ ಕುಮುದ ಕುಮುದಾಕ್ಷರ್ಗೀಗ ನಾ ವಂದಿಸುವೆ

---

1 ನಾರಾಯಣಾಯ ಪರಿಪೂರ್ಣಗುಣಾರ್ಣವಾಯ
ವಿಶ್ವೋದಯಸ್ಥಿತಿಲಯೋನ್ನಿಯತಿಪ್ರದಾಯ
ಜ್ಞಾನಪ್ರದಾಯ ವಿಬುಧಾಸುರಸೌಖ್ಯದುಃಖ
ಸತ್ಕಾರಣಾಯ ವಿತತಾಯ ನಮೋ ನಮಸ್ತೇ

2 ಯೋ ವಿಪ್ರಲಂಭವಿಪರೀತಮತಿಪ್ರಭೂತ
ವಾದಾನ್ನಿರಸ್ಯ ಕೃತವಾನ್ ಭುವಿ ತತ್ತ್ವವಾದಮ್
ಸರ್ವೇಶ್ವರೋ ಹರಿರಿತಿ ಪ್ರತಿಪಾದಕಂ ತ-
ಮಾನಂದತೀರ್ಥಮುನಿವರ್ಯಮಹಂ ನಮಾಮಿ



ಆ ದ್ವಾರಪಾಲರ ಅಪ್ಪಣೆ ಪಡೆಯುತ ಆ ವಾಯುಮಂತ್ರವ[3] ಪಠಿಸುತಲಿ
ಆ ದ್ವಾರ ದಾಟಲು ಮೂರ್ತಾಳ ಬಾರಿಸಿ ಹೊಸ್ತಿಲ ತುಳಿಯದೆ ಒಳಹೊಗಲು
ಮುಂದಿಟ್ಟು ಬಲಗಾಲ ಅಗ್ನಿಯ ಮಂತ್ರವ[4] ಪಠಿಸುತ ಮಂದಿರ ಒಳಹೊಗುತ
ಮುಂದಿಹ ಅಲ್ಲಿನ ಚೆಂದದ ದೀಪದ ಬತ್ತಿಯ ಬೆಳಕನು ಹೆಚ್ಚಿಸುವೆ
ಎಲ್ಲೆಲ್ಲಿ ನೋಡಲು ಎಲ್ಲೆಲ್ಲಿ ಕೇಳಲು ಅಲ್ಲೆಲ್ಲ ಶ್ರೀಲಕ್ಷ್ಮೀನಾರಾಯಣ
ಎಲ್ಲೆಡೆ ಜಗವನು ಒಳಹೊರಗೆ ವ್ಯಾಪಿಸಿ ಇರುವುದ ನಾನೀಗ ಸ್ಮರಿಸುವೆನು*

## ವಿಘ್ನೋಚ್ಚಾಟನೆ

ನೋಡುತ ದೃಷ್ಟಿಸಿ ಏರಿಸಿ ಹೂಗಳ ಕಾಲಿನ ಗಂಟನು ಮೂರ್ಬಾರಿಗೆ
ತಾಡನ ಮಾಡುವೆ ಓಡಿಸೆ ದ್ಯುಲೋಕ ಭೂವ್ಯಂತರಿಕ್ಷದ ವಿಘ್ನಗಳ

## ದಿಗ್ಬಂಧನ ಮತ್ತು ಕ್ಷಮಾಯಾಚನೆ

ಆ 'ಅಪಸರ್ಪಂತು ಯೇ ಭೂತಾ....'[5] ಮಂತ್ರದಿಂ ಓಡಿಪೆ ಭೂತಪ್ರೇತಗಳ
ನಾ ಅನಂತರದಿ ಬಾಣದ ಮುದ್ರೆಯಿಂ ದಿಕ್ಕೆಲ್ಲ ಸುತ್ತಲೂ ಬಂಧಿಸುವೆ
ಇಲ್ಲಿನ್ನು ವಾಸಿಪ ಪೂಜೆಗೆ ವಿಘ್ನವ ಒಡ್ಡುವ ಭೂತಗಳಿಲ್ಲಿಂದಲಿ
ನಿಲ್ಲದೆ ತಾ ದೂರ ಸಾಗಲಿ ಶಿವನ ಆಜ್ಞೆಯಿಂ ಕಣ್ಮರೆ ತಾವಾಗಲಿ

---

3 ವಾಯವಾ ಯಾಹಿ ದರ್ಶತೇ ಮೇ ಸೋಮಾ ಅರಂಕೃತಾಃ ।
ತೇಷಾಂ ಪಾಹಿ ಶ್ರುಧೀಹವಮ್ ॥

4 ಅಗ್ನಿನಾಗ್ನಿಃ ಸಮಿಧ್ಯತೇ ಕವಿರ್ಗೃಹಪತಿರ್ಯುವಾ ಹವ್ಯವಾಡ್ ಜುಹ್ವಾಸ್ಯ ।

* ಯಚ್ಚ ಕಿಂಚಿತ್ ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ ।
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಥಿತಃ ॥

5 ಅಪಸರ್ಪಂತು ಯೇ ಭೂತಾ ಯೇ ಭೂತಾ ಭುವಿಸಂಸ್ಥಿತಾಃ ।
ಯೇ ಭೂತಾ ವಿಘ್ನಕರ್ತಾರ–ಸ್ತೇ ನಶ್ಯಂತು ಶಿವಾಜ್ಞಯಾ ॥
ಆಯತಾಭ್ಯಾಂ ವಿಶಾಲಾಭ್ಯಾಂ ಶೀತಲಾಭ್ಯಾಂ ಕೃಪಾನಿಧೇ ।
ಕರುಣಾರಸಪೂರ್ಣಾಭ್ಯಾಂ ಲೋಚನಾಭ್ಯಾಂ ವಿಲೋಕಯ ॥
ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣ್ಯಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥
ಅಪರಾಧಸಹಸ್ರಾಣಿ ಕ್ರಿಯಂತೇಽಹರ್ನಿಶಂ ಮಯಾ ।
ತಾನಿ ಸರ್ವಾಣಿ ದೇವೇಶ ಕ್ಷಮಸ್ವ ಪುರುಷೋತ್ತಮ ॥
ಕಾಯಿಕಾನ್ ವಾಚಿಕಾನ್ ದೋಷಾನ್ ಮಾನಸಾನಪಿ ಸರ್ವದಾ ।
ವೈಷ್ಣವದ್ವೇಷಹೇತೂನ್ ಮೇ ಭಸ್ಮಸಾತ್ ಕುರು ಮಾಧವ ॥

ಎನ್ನುತ ದೇವನ ಕರುಣೆಯ ಬೇಡುತ ನಮಿಸುತ ಭಕ್ತಿಯಿಂದಾತನಿಗೆ
ಉನ್ನತ ರೀತಿಯ ಸನ್ನುತ ಮಂತ್ರದಿ ದೇವನ್ನ ಕ್ಷಮೆಯ ಯಾಚಿಸುವೆ
ತಿಂಗಳ ಹಿತಕಾಂತಿ ಬೀರುವ ಕರುಣೆಯ ಸಾಗರನಾದನೆ ಹರಿ ನಿನ್ನ
ಕಂಗಳು ಸುರಿಸುವ ಕರುಣೆಯ ರಸದ ನೋಟವ ನನ್ನೆಡೆ ಬೀರುವದೋ
ಬ್ರಹ್ಮಣ್ಯದೇವನೆ ಗೋವಿಪ್ರಹಿತದಾತ ನಮಿಸುವೆ ನಿನಗೀಗ ನಾನಿದಕೋ
ಬ್ರಹ್ಮಾಂಡದೊಡೆಯನೆ ಶ್ರೀಕೃಷ್ಣಗೋವಿಂದ ನಮಿಸುವೆ ನಿನಗೀಗ ನಾನಿದಕೋ
ದಿನ ರಾತ್ರಿ ಸಾಸಿರ ಸಾಸಿರದಪರಾಧ ಬಿಡದಂತೆ ಮಾಡುತಲಿರುವೆನು ನಾ
ಘನ ಕೃಪಾನಿಧಿ ಹರಿ ಶ್ರೀಪುರುಷೋತ್ತಮ ಮನ್ನಿಸಿ ಈ ಪೂಜೆ ಸ್ವೀಕರಿಸು
ಇಡು ಕ್ಷಮೆ ನನ್ನಲಿ ದೇವ ನೀನೆಣಿಸದೆ ಮನಸಿನ ಮಾತಿನ ಪಾಪಗಳ
ಸುಡು ಎಲ್ಲ ವೈಷ್ಣವ ದ್ವೇಷದ ಮೂಲವ ಬಿಡದಂತೆ ಕೇಶವ ಮಾಧವನೆ

## ಮನುಷ್ಯಗಂಧನಿವಾರಣೆ

'ಅಪ್ಯೈವೇ'ತ್ಯಾದಿ[6] ಆ 'ಏಭ್ಯೋ ಮಾತಾ'ದಿ[7] 'ಏವಾಪಿತ್ರೇ'ತ್ಯಾದಿ[8] ಮಂತ್ರಗಳ
ನಾ ಪಠಿಪೆ ಮಾನುಷದೇಹದ ಗಂಧವ ಮಂದಿರದಿಂದಲಿ ಕಳೆಯಲಿಕೆ
ಗ್ರಹಿಸುವೆನೀಪರಿ ಆ ಮಂತ್ರದರ್ಥವ ಮತ್ತಿನ್ನು ನಾನೀಗ ವೇಗದಿಂದ
ಬಹುದೂರ ಹೋಗಲಿ ಈ ಮಂದಿರದಿಂದಲಿ ಮಾನುಷಗಂಧವು ಎನ್ನುವೆನು
ಯಾರಿಗೆ ಹಾಲನ್ನು ಭೂಮಿಯು ಅಮೃತವ ದ್ಯುಲೋಕತಾನವು ಒದಗಿಪುವೋ
ಪರಿಶುದ್ಧನಾಗಲು ಹೇ ಮನ ನೆನೆನೆನೆ ಬಲವಂತ ಸತ್ಕರ್ಮಿಗಳಾದಿತ್ಯರ
ಈಯುತ ವಿದ್ಯುಕ್ತ ಹವಿಸ್ಸನು ಮೇಲಿನ್ನು ಉತ್ತಮ ಸ್ತೋತ್ರವ ಮಾಡುತಲಿ
ಕಾಯುವನಾತನ ಬೃಹಸ್ಪತಿಯನ್ನೀಗ ಬೇಡುವೆ ಪುತ್ರರ-ವೀರ್ಯ-ಧನ

## ದೇವನೆದುರು ಪರದೆ

ದೇವನ ಮುಂದೀಗ ನಾನೊಂದು ಪರದೆಯ ಕಲ್ಪಿಸಿ ಪೂಜೆಯ ಕಟ್ಟೆಯನು
ಭಾವದಿಂದೇರುತ ಪರದೆಯ ಈ ಬದಿ ಪೂಜೆಗೆ ನಾನೀಗ ಕೂಡುವೆನು

---

[6] ಅಪ್ಯೈವಾಭೀಭತ್ಸಂತ ಮನುಷ್ಯಗಂಧಾಸ್ತ ಏತೇ ಧಾಮ್ನೋ ಅಂತರ್ದಧತ ।

[7] ಯೇಭ್ಯೋ ಮಾತಾ ಮಧುಮತ್ಪಿನ್ವತೇ ಪಯಃ ಪೀಯೂಷಂ ದ್ಯೌರದಿತಿರದ್ರಿಬರ್ಹಾಃ ।
ಉಕ್ಥಶುಷ್ಮಾನ್ ವೃಷಭರಾನ್ಸ್ವಪ್ನಸಸ್ತಾಂ ಆದಿತ್ಯಾಂ ಅನುಮದಾ ಸ್ವಸ್ತಯೇ ॥

[8] ಏವಾ ಪಿತ್ರೇ ವಿಶ್ವದೇವಾಯ ವೃಷ್ಣೇ ಯಜ್ಞೈರ್ವಿಧೇಮ ನಮಸಾ ಹವಿರ್ಭಿಃ ।
ಬೃಹಸ್ಪತೇ ಸುಪ್ರಜಾ ವೀರವಂತೋ ವಯಂ ಸ್ಯಾಮ ಪತಯೋ ರಯೀಣಾಮ್ ॥



## ಬ್ರಹ್ಮಪಾರಸ್ತೋತ್ರ[9] (ಭಾವ)

ನಾನೀಗ ಮಾಡುವೆ ಆ 'ಬ್ರಹ್ಮಪಾರ'ವೆಂಬಂಥ ಸ್ತೋತ್ರದ ಪಠನೆಯನು
ತಾನದು ಬಲು ದಿವ್ಯವಾದಂಥ ಸ್ತೋತ್ರವು ಈ ಪರಿ ನುಡಿವುದ ಭಾವಿಸುತ
ಕೇಶವನ್ನ ಅಂದು ಪ್ರಸನ್ನನಾಗಿಸಿ ಸ್ತೋತ್ರವನೊಂದನು ಕಂಡುಮುನಿ
ದೋಷವ-ಪಾಪವ ನೀಗಲು ಮಾಡಿದನಂತದ ಕೇಳಲು ಆಶಿಪೆವು
ಎನ್ನಲು ಪ್ರಚೇತಸಮುನಿ ಚಂದ್ರಗೆ—ಮನ್ನಿಸಿ ಮಾತನು 'ಬ್ರಹ್ಮಪಾರ'
ವೆನ್ನುವ ಸಂಸಾರಸಾಗರ ದಾಟಿಪ ಸ್ತೋತ್ರವನಾ ಚಂದ್ರ ಹಾಡಿದನು
ಸತ್ಯ ಸರ್ವತ್ರನೆ ಸರ್ವದಾ ವ್ಯಾಪ್ತನೆ ಅನಂತ ಬ್ರಹ್ಮಾಂಡಪರಿಪಾಲನೆ
ಉತ್ತಮರುತ್ತಮನೆ ಯಥಾರ್ಥರೂಪನೆ ವೇದಸುಪ್ರೀತನೆ ಶ್ರೀವಿಷ್ಣುವೆ
ಬ್ರಹ್ಮನ್ನ ಅಮರರ ಸಂಸಾರ ದಾಟಿಸಿ ತೀರಕೆ ಅವರ ತರುವವನೆ
ಬ್ರಹ್ಮನ ಪಿತ ನಿನ್ನ ಆ ನಿನ್ನ ಭಕ್ತರ ದ್ವೇಷಿಪ ಜನರಿಗೆ ಅತಿ ದೂರನೆ
ನಿಜ ಸಕಲಸಾರನೆ ಜಗನಾಶಕಾರಣ ಕಾರಣವೆಲ್ಲಕೂ ಆದವನೆ
ನಿಜ ಜಗತ್ಕಾರಣ ಕಾರಣಕ್ಕಾರಣ ಕಾರ್ಯದಲೆಲ್ಲವೂ ಸುವ್ಯಾಪ್ತನೆ
ಕರ್ಮದಲಿರುವನೆ ಕರ್ತವ್ಯದಿರುವನೆ ಎಲ್ಲರ ಎಲ್ಲೆಲ್ಲ ಕಾರ್ಯರೂಪ
ಮರ್ಮನೆ ಎಲ್ಲಕೂ ಅನಂತರೂಪದ ಅನಂತಜಗಪರಿಪಾಲಕನೆ
ಶ್ರೀರಮೆಬ್ರಹ್ಮರ ಪ್ರಭುವಾದ ದೇವನೆ ಪರಿಪೂರ್ಣ ಕಲ್ಯಾಣಗುಣಪೂರ್ಣನೆ
ಸಾರನೆ ಸಕಲ ಭೂತದಲ್ವ್ಯಾಪ್ತನೆ ಬ್ರಹ್ಮನ ಚಿಂತಿಪ ಜನಪಾಲನೆ
ಪರಿಪೂರ್ಣ ಬ್ರಹ್ಮನೆ ಅಚ್ಯುತ ಅವ್ಯಯ ನಿತ್ಯನೆ ಉತ್ಪತ್ತಿ ಇಲ್ಲದನೆ
ಪರಿಪರಿ ದೇಹಾದಿ ನಾಶಾದಿ ದೋಷಾದಿ ಸಂಬಂಧ ಏನೇನೂ ಇಲ್ಲದನೆ
ಪುರುಷೋತ್ತಮನೆಂತು ಅನಂತಗುಣ ನಿತ್ಯ ಉತ್ಪತ್ತಿನಾಶಗಳಿಲ್ಲದನೋ
ಹೊರಡಲಂತೀಗಲೇ ಹಿಂತಿರುಗದಂತಲೇ ನನ್ನೆಲ್ಲ ರಾಗಾದಿ ದೋಷಗಳು
ಇದೇ 'ಬ್ರಹ್ಮಪಾರ'ವೆಂಬಂಥ ಸ್ತೋತ್ರವು ಮುಕ್ತಿಯನೀವದು ಇದ ಪಠಿಸಿ
ಮುದದಿಂದಲಾ ಕಂಡು ಕೇಶವನ ಪೂಜಿಸಿ ಉತ್ಕೃಷ್ಟಸಿದ್ಧಿಯ ತಾ ಪಡೆದ

## ಘಂಟಾನಾದ[10]

ಹರಿಪೂಜೆ ಮೊದಲಿಗೆ ಘಂಟೆಯ ಬಾರಿಸೆ ಆ ಧ್ವನಿ ಎಲ್ಲೆಡೆ ಹರಡುತಲಿ
'ಬರಲಿಲ್ಲಿ ಸುರರೆಲ್ಲ ರಕ್ಕಸರೋಡಲಿ' ಎನ್ನುತ ಘಂಟೆಯ ಬಾರಿಸುವೆ

---

[9] ಪರಿಶಿಷ್ಟ ನೋಡಿ

[10] ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಮ್ ।
ಕುರು ಘಂಟಾರವಂ ತತ್ರ ದೇವತಾಹ್ವಾನಲಾಂಛನಮ್ ॥
ಅಜ್ಞಾನಾತ್ ಜ್ಞಾನತೋವಾಪಿ ಕಾಂಸ್ಯಘಂಟಾನಾವಾದಯೇತ್ ।
ರಾಕ್ಷಸಾನಾಂ ಪಿಶಾಚಾನಾಂ ತದ್ದೇಶೇ ವಸತಿರ್ಭವೇತ್ ॥

ಅಜ್ಞಾನದಿಂದಾಗೆ ಬೇಕೆಂದಲೆಂದಾಗೆ ಕಂಚಿನ ಘಂಟೆಯ ನಾದವನು
ಅಜ್ಞ-ನಾ ತಪ್ಪಿಸೆ ರಾಕ್ಷಸರ್ಪಿಶಾಚರಿಲ್ಲಿಗೆ ಬರಲಿಕೆ ಅವಕಾಶವು

### ಅಂತರ್ಪಟವಿಸರ್ಜನೆ–ಕಲಿ ಉಚ್ಚಾಟನೆ ನಿರ್ಮಾಲ್ಯ ವಿಸರ್ಜನೆ

ದೇವನ ಎದುರಿನ ಪರದೆಯ ಸರಿಸುವೆ ನಿರ್ಮಾಲ್ಯ ಕಳೆಯಲು ಅನುವಾಗುತ
ಭಾವದಿಂ ಪಠಿಪೆ ನಿಯುಕ್ತ ಸೂಕ್ತವ ನಿರ್ಮಾಲ್ಯ ಕಳೆಯುವ ಕಾಲದಲಿ
ಶ್ರೀಸೂಕ್ತ[11] ಮತ್ತಿನ್ನು ಅಂಭೃಣಿ ಸೂಕ್ತವು[12] ಎರಡಾದ ಈ ದಿವ್ಯ ಸೂಕ್ತಗಳ
ನಾ ಸಂಭ್ರಮದಿಂದಲಿ ಪಠಿಸುತಲರ್ಥವ ಚಿಂತಿಸಿ ಮನದಲಿ ಗ್ರಹಿಸುತಲಿ
ಹೇ ಮಹಾಬಾಹುವೇ ಶ್ರೀ ಭೀಮಸೇನನೆ ಶ್ರೀ ಸಾಲಿಗ್ರಾಮದ ಶಿಲೆಯಲ್ಲಿ
ಆ ಮಹಾಕಲಿ ನಿತ್ಯ ಸನ್ನಿಹಿತನಾತನ ನೀ ಮಾಡು ನಾಶವ ಗದೆಯಿಂದ*
ಅಂಗುಷ್ಟ-ತರ್ಜನಿ ಬೆರಳುಗಳಿಂದಲಿ ನಿರ್ಮಾಲ್ಯವನ್ನೀಗ ತೆಗೆಯುತಲಿ
ಶೃಂಗಾರಮೂರ್ತಿಗೆ ಹಿಂದಿನ ದಿನದಲ್ಲಿ ಇಟ್ಟಂಥ ಹೂ ತುಲಸಿ ತೆಗೆಯುವೆನು
ಕಳೆದಿಟ್ಟು ನಿರ್ಮಾಲ್ಯ ತೊಳೆದಿಟ್ಟು ಶ್ರೀಸಾಲಿಗ್ರಾಮ-ಪ್ರತಿಮೆಗಳೆಲ್ಲವ ನಾ
ಹೊಳೆಯುವ ಅಭಿಷೇಕಪಾತ್ರೆಲಿ ಹಿತದಿಂದ ಇಡುವೆನು ಬಿಡದಂತೆ ಮತ್ತೆಲ್ಲವ

### ಮಂಟಪಧ್ಯಾನ[13]

ಉನ್ನತವಾದಂಥ ಚಿನ್ನದ ಮಂದಿರ ಗೋಡೆಗಳ್ ಸ್ಫಟಿಕವು ಕಂಭ ಚಿನ್ನ
ರನ್ನವು ದ್ವಾರವು ಚಾಮರವಿಲ್ಲಿವೆ ಶಂಖ-ಪದ್ಮ ಸ್ವಸ್ತಿಚಿಹ್ನೆ ಶುಭ
ಮುತ್ತಿನ ಕುಚ್ಚಿನ ಮಂಟಪ ನವರತ್ನ ಸೋಪಾನ ವಜ್ರವು ಕಲಶ ರತ್ನ
ಉತ್ತಮ ಮಾಣಿಕ ದೀಪದ ಕಾಂತಿಯು ಶ್ರೀಲಕ್ಷ್ಮೀವಿಲಾಸಕ್ಕಾಸ್ಪದವು

---

* ಸಾಲಿಗ್ರಾಮ ಶಿಲಾಯಾಂ ತು ನಿತ್ಯಂ ಸನ್ನಿಹಿತಃ ಕಲಿಃ ।
ಭೀಮಸೇನ ಮಹಾಬಾಹೋ ಗದಯಾ ಪೋಥನಂ ಕುರು ॥

11-12 ಪರಿಶಿಷ್ಟ ನೋಡಿ

13 ಉತ್ತಪ್ತೋಜ್ಜ್ವಲಕಾಂಚನೇನ ರಚಿತಂ ತುಂಗಾಂಗ ರಂಗಸ್ಥಲಮ್ ।
ಶುದ್ಧಸ್ಫಾಟಿಕ ಭಿತ್ತಿಕಾವಿಲಸಿತೈಃ ಸ್ತಂಭೈಶ್ಚ ಹೈಮೈಃ ಶುಭೈಃ ॥
ಮುಕ್ತಾಜಾಲವಿಲಂಬ ಮಂಟಪಯುತಂ ವಜ್ರೈಶ್ಚ ಸೋಪಾನಕೈಃ ।
ನಾನಾರತ್ನ ವಿರಾಜಿತೈಶ್ಚ ಕಲಶೈರತ್ಯಂತ ಶೋಭಾವಹಮ್ ॥ ೧ ॥
ದ್ವಾರೈಶ್ಚಾಮರ ರತ್ನರಾಜಖಚಿತೈಶ್ಶೋಭಾವಹಂ ಮಂಡಿತಮ್ ।
ರಕ್ತಾಗ್ರ್ಯೈರಪಿ ಶಂಖಪದ್ಮಧವಲೈಃ ಪ್ರಭ್ರಾಜಿತಂ ಸ್ವಸ್ತಿಕೈಃ ॥
ಮಾಣಿಕ್ಯೋಜ್ಜ್ವಲದೀಪದೀಪ್ತಿವಿಲಸಲ್ಲಕ್ಷ್ಮೀವಿಲಾಸಾಸ್ಪದಮ್ ।
ಧ್ಯಾಯೇನ್ಮಂಟಪಮರ್ಚನೇಷು ಸಕಲೈರೇವಂ ವಿಧಂ ಸಾಧನೈಃ ॥ ೨ ॥



ತೊಳೆದಂಥ ನೆಲದಲಿ ಮುತ್ತಿನ ರಂಗೋಲೆ ಧ್ವಜಪತಾಕೆ ಮೇಲ್ತೋರಣವು
ಬಾಳೆಯ ಕಬ್ಬಿನ ಸಾಲ್ಗಳು ಮೇಲ್ಹೊಸ ಮಾವಿನ ಚಿಗುರಿಟ್ಟ ಪೂರ್ಣಕುಂಭ
ಗೀತದ ವಾದ್ಯದ ಇಂಪಿನ ನಾದವು ನೃತ್ಯದ ಶೋಭೆಯು ಪುರಾಣಧ್ವನಿ
ನೂತನ ಶೋಭೆಯ ಬೀರಿದ ಈ ಪೂಜಾ ಸಾಧನಧ್ಯಾನವೇ ಪುಣ್ಯಕರ
ಧ್ಯಾನಿಪೆ ಈ ಪರಿ ಚಿನ್ನದ ರನ್ನದ ಉತ್ತಮ ಕೆತ್ತನೆ ಶೋಭಿಸಿಹ
ಚೆನ್ನಾದ ಉನ್ನತ ಉತ್ಕೃಷ್ಟಮಣಿಕಾಂತಿ ಬೀರುವಾ ದಿವ್ಯ ಮಂಟಪವ

### ಶ್ರೀಸೂಕ್ತ (ಭಾವ)

ಹೊಂಬಣ್ಣ ಮೈಯ ಚಿಗರೆಯ ಕಂಗಳ ದಾರಿದ್ರ್ಯ ನೀಗುವ ಹರಿರಾಣಿಯ
ಹೊಂಬಣ್ಣ ಮೇಲ್ಬೆಳ್ಳಿ ಬಣ್ಣದ ಕಮಲ ಹಾರಗಳ್ಕೊರಳಲಿ ತೊಟ್ಟಿಹಳ
ಬೆಳುತಿಂಗಳ್ಕಾಂತಿಯ ಸುಂದರಿ ಸುಖಮಯಿ ಸಂಪದವೀಯುವ ಶ್ರೀಲಕ್ಷ್ಮಿಯ
ಬೆಳಗುವ ಕರುಣೆಯ ಎನ್ನೆಡೆ ಬೀರಿಸು ಹೇ ವೇದವೇದ್ಯಗ್ನಿ ನಾರಾಯಣ
ಅಂತಹ ಕರುಣೆಯ ನನಗಾಗಿ ಬೀರಿಸು ನನ್ನ ಮೇಲೆ ಹೇ ಅಗ್ನಿ ನಾರಾಯಣ
ಎಂತಹ ದೇವಿಯು ಎಂದೆಂದೂ ನಿನ್ನನು ಬಿಟ್ಟಿರದಂತಹ ಸಿರಿಯವಳು
ಯಾರು ಪ್ರಸನ್ನತೆ ಬೀರಲು ತಾನಾಗೆ ಧನಕನಕವೆಲ್ಲವ ನಾ ಪಡೆವೆ
ಮೀರಿದ ಗೋಅಶ್ವಸಂಪದ ದಾಸರ ದಾಸಿಯರೆಲ್ಲರ ನಾ ಪಡೆವೆ
ನಡೆದಿವೆ ಮುಂದಲ್ಲಿ ಅಶ್ವದ ಪಡೆಗಳು ಮಧ್ಯದಿ ಆ ರಥ ಸೇನೆಯಕೋ
ನಡೆದಿದೆ ಹಿಂದಲ್ಲಿ ಗಜಸೇನೆ ಗರ್ಜಿಸಿ ವೈರಿಗಳೆದೆಗಳ ನಡುಗಿಸುತಲಿ
ವೈರಿಯ ನಾಶಕೆ ಈ ಪರಿ ನಡೆದಿಹ ಸಿರಿವಂತೆ ಮಹಲಕ್ಷ್ಮೀದೇವಿಯನು
ಕರೆಯುವೆ ಭಕ್ತಿಲಿ ಬಾರಮ್ಮ ಕಾಪಾಡಿ ಹರಸಲು ಬೇಗನೆ ಎನ್ನುತಲಿ
ಬಣ್ಣನೆ ಮಾಡಲು ಮಾತದು ಸಾಲದೋ ಕಿರುನಗೆ ಬೀರುವ ಶ್ರೀಮುಖವ
ಚಿನ್ನದ ಗೋಡೆಯ ಕೋಟೆಯಲಿರ್ಪ ಕರುಣೆಯು ಕಾಂತಿಯ ಶ್ರೀದೇವಿಯು
ದೇವಿಯು ತಾ ನಿತ್ಯತೃಪ್ತಳು ತೃಪ್ತಿಯ ಭಕ್ತರಿಗೀವಳು ಕಮಲಸ್ಥಿತೆ
ತಾವರೆಬಣ್ಣದ ಖ್ಯಾತಳು ಕಮಲಿನಿ ಶ್ರೀಲಕ್ಷ್ಮೀದೇವಿಯ ಬಾರೆನ್ನುವೆ
ಹೃದಯವ ಬೆಳಗುವ ಅತಿಕಾಂತಿಯುಕ್ತಳೇ ಕೀರ್ತಿಯ ಪ್ರಭೆಯಲಿ ಬೆಳಗಿಹಳೇ
ಹದಿನಾಲ್ಕು ಲೋಕದಿ ಪೂಜಿತೆ ದೇವಿಯೇ ಕೊಡುಗೈಯ ದಾನಿಯೇ ಶ್ರೀದೇವಿಯೆ

---

ಸಂಮಾರ್ಜನಂ ರಂಗವಲ್ಲೀ ಧ್ವಜಕೇತನತೋರಣೈಃ ।
ವಿತಾನೈರಿಕ್ಷುಕದಲೀ ಪೂರ್ಣಕುಂಭಾಂಕುರಾದಿಭಿಃ ॥
ಗೀತಾವಾದಿತ್ರನೃತ್ಯೈಶ್ಚ ಪುರಾಣ ಪಠನೈಃ ಶುಭೈಃ ।
ಶೋಭಮಾನಂ ಮಹಾಪುಣ್ಯಂ ವರ್ಧನಂ ಸುಮನೋಹರಮ್ ॥ ೩ ॥

ಸರುವತ್ರ ವ್ಯಾಪ್ತಳೇ ತಾವರೆಹಸ್ತಳೇ "ಈ"ಕಾರನಾಮಕೆ ಪ್ರಸಿದ್ಧಳೇ
ಶರಣು ನಾ ಬಂದೆನೇ ನನ್ನೆಲ್ಲ ಅಜ್ಞಾನ ದಾರಿದ್ರ್ಯ ನಾಶವ ಮಾಡುವದೇ
ಎಳೆಸೂರ್ಯನಂದದ ಹಿತಕಾಂತಿದೇವಿಯೇ ನಿನ್ನಿಚ್ಛೆಮಾತ್ರದಿ ಹುಟ್ಟುತಲಿ
ಬೆಳೆಯುತ ಹೂ ಬಿಡದೆ ಹಣ್ಣಗನೀಯ್ವುದು ವನಸ್ಪತಿ ಜಾತಿಯ ಬಿಲ್ವಮರ
ನಿನ್ನಿಚ್ಛೆಯಿಂದಲೇ ಆ ಬಿಲ್ವಮರಗಳ ಹಣ್ಣುಗಳ್ತಾವೀಗ ಓಡಿಸಲಿ
ನನ್ನೊಳಗಡಗಿಹ ಅಜ್ಞಾನ ಮುಸುಕಿನ ದಾರಿದ್ರ್ಯ ಮುಂತಾದ ದೋಷಗಳ
ಬಳಿ ಬರಲಿ ಹರಿಗತಿಪ್ರಿಯಮಾದ ಸಂಪತ್ತಿನಿಂದಲಿ ಕೂಡಿದ ಪ್ರಾಣತತ್ತ್ವ
ಥಳಥಳಿಪ ಮಣಿಗಳ ತೆರದಂಥ ಅರ್ಥದ ಪರಿಕೀರ್ತಿ ಹೊಗಳುವ ವೇದಗಳು
ನಾ ಹುಟ್ಟಿಬಂದಂಥ ಈ ರಾಷ್ಟ್ರದಲ್ಲೀಗ ಸಂಸಾರದ್ವೆಮ್ಮರ ಕಿತ್ತಿಸೆದ
ಬಹು ಕೀರ್ತಿ ಮೇಲಿನ್ನು ಸ್ವರೂಪನಿಜಸುಖ ಸಮೃದ್ಧಿ ನನಗೀಗ ಒದಗಿರಲಿ
ಹಸಿವು ಬಾಯಾರಿಕೆಯಿಂದಲಿ ತೊಳಲುತ ಅಶುಚಿ ಮೈಯನು ತೋರುತಲಿ
ಕಸಿವಿಸಿ ತೋರುವ ಪರಮ ಅಮಂಗಳೆ ತಾನಾದಳವಳಾ "ಅಲಕ್ಷ್ಮಿ"ಯು
ವರಲಕ್ಷ್ಮೀದೇವಿಗೆ ಹಿರಿಯಾದಳವಳನು ಶೀಘ್ರದಿ ನಾಶವ ಮಾಡುತಲಿ
ಹೊರದೂಡಿ ಮನೆಯಿಂದ ಬಡತನ ಕೊರತೆಗಳೆಲ್ಲವ ನಾನೀಗ ನೀಗುವೆನು
ಸುಗಂಧ ಬೀರುವ ಯಾರಿಗೂ ಸೋಲದ ಭೂರೂಪಿದೇವಿಯು ಶ್ರೀಲಕ್ಷ್ಮಿಯು
ಅಗಣಿತ ಸುಜ್ಞಾನ ಆನಂದಪೂರ್ಣಳು ಎಂದೆಂದೂ ತಾನಾಗಿ ಮೆರೆವವಳು
ಜಗವೆಲ್ಲ ಸತ್ಯದ ಸೃಷ್ಟಿಗೆ ಕಾರಣೆ ಮೇಲ್ತಾನು ಒಡೆಯಳು ಬಿಡದಂತಲೆ
ಜಗಜೀವರಾಶಿಗೆ ಪ್ರಸಿದ್ಧದೇವಿಯ ಕರೆವೆನು ನಾನೀಗ ನನ್ನೆಡೆಗೆ
ಮನಸಿನ ಬಯಕೆಗಳೆಲ್ಲವನೀಯುತ ಆತ್ಮದ ಕೂಗನು ಕೇಳುತಲಿ
ನಾನೆಂದ ಮಾತನು ಸತ್ಯವ ಮಾಡುತ ವೇದಾರ್ಥವೆಲ್ಲವ ತೋರುತಲಿ
ಎಲ್ಲದಕ್ಕಾಶ್ರಯವಾದಂಥ ಶ್ರೀಹರಿ ರೂಪವ ಮನಕಿನ್ನು ತೋರುತಲಿ
ಬಲ್ಲಿದ ಕರುಣೆಯು ಶ್ರೀಲಕ್ಷ್ಮೀದೇವಿಯು ನೆಲೆಸುತಲೆನ್ನಲಿ ಯಶವೀಯಲಿ
"ಕರ್ದಮ"ಮುನಿ ನಿನ್ನ ಮಗನಾಗಿ ಪಡೆಯುತ ಶ್ರೀಲಕ್ಷ್ಮಿ ಸತ್ಪುತ್ರವತಿಯಾದಳೊ
"ಕರ್ದಮ"ಮೌನಿ ನೀ ಸಿರಿದೇವಿಯನ್ನೀಗ ದಯದಿಂದ ನನ್ನಲಿ ನೆಲೆಗೊಳಿಸು
ಕಮಲದ ಮಾಲೆಯ ಶೋಭೆಯ ಕೊರಳಿನ ದೇವಿಯು ನನ್ನಲಿ ನೆಲೆಸುತಲಿ
ಗಮನಿಸಿ ನನ್ನೆಲ್ಲ ಸಂತತಿಗೆಂದೆಂದೂ ಅನುಗ್ರಹ ಪ್ರಪೂರ್ಣವಾಗಿಸಲಿ
ಜಲರೂಪಿ ಶ್ರೀಲಕ್ಷ್ಮೀ ರಸಮಯ ವಸ್ತುವ ನಿರ್ಮಿಸಿ ನನಗೀಗ ತಂದೀಯಲಿ
ಒಲವಿಂದ ಬಾರಯ್ಯ ಒಡನಿರಲು ನೀನೀಗ "ಚಿಕ್ಲೀತ"ಮುನಿಯೇ ಲಕ್ಷ್ಮೀಸುತ
ವಿಶ್ವದಲೆಲ್ಲಕೂ ಕಾರಣೆ ಶ್ರೀಲಕ್ಷ್ಮೀ ನೆಲೆಸಲಿ ಬಂದೆನ್ನ ವಂಶದಲಿ
ಶಾಶ್ವತವಾಗೆನ್ನ ಕುಲದಲಿ ನೆಲೆಸುತಲಿರುವಂತೆ ಮಾಡಯ್ಯ "ಚಿಕ್ಲೀತ"ನೇ
ಕರುಣೆಯು ರಸಮಯಿ ತಾವರೆ ಕೈಯಲಿ ಬಲವಂತೆ ಮೈಬಣ್ಣ ಸ್ವರ್ಣವದು
ಪರಿಪರಿ ಚಿನ್ನದ ಹಾರಗಳ್ತೊಟ್ಟಂಥ ಜ್ಞಾನಿಜನಗೋಚರೆ ಶ್ರೀಲಕ್ಷ್ಮಿಯು



ಶ್ರೀಮನ್ನಾರಾಯಣನೊಡಗೂಡಿ ಸೂರ್ಯನ ಒಳಗಿಹ ಆನಂದಸ್ವರೂಪಳು
ಶ್ರೀಮಹಲಕ್ಷ್ಮಿಯ ಅಗ್ನಿನಾರಾಯಣನೆ ನನಗಾಗಿ ಇಂದಿಲ್ಲಿ ನೀ ಕರೆತಾ
ಕರುಣೆಯು ರಸಮಯಿ ಧರ್ಮದ ದಂಡವ ಕೈಯಲಿ ಹಿಡಿದಿಹ ಯಜ್ಞರೂಪೀ
ಸಿರಿಲಕ್ಷ್ಮೀದೇವಿಯು ಎಳೆಯ ಕೆಂದಾವರೆ ಹಾರವ ಕೊರಳಲಿ ತೊಟ್ಟಿಹಳು
ಚಂದ್ರನಲ್ಲಿರುವಳು ಆನಂದವೀವಳು ಐಶ್ವರ್ಯರೂಪಿಣಿ ಶ್ರೀಲಕ್ಷ್ಮಿಯು
ಚಂದಿರಮೊಗದವಳ ಅಗ್ನಿನಾರಾಯಣ ಇಂದಿಲ್ಲಿ ನನಗಾಗಿ ನೀ ಕರೆತಾ
ಬರಮಾಡು ಬರಮಾಡು ಅಗ್ನಿನಾರಾಯಣದೇವನೆ ಬೇಗನೆ ನನ್ನಲ್ಲಿಗೆ
ಇರುವಳದಾವಳು ಬಿಡದಂತೆ ನಿನ್ನನು ಆ ನಿನ್ನ ರಾಣಿಯ ಶ್ರೀಲಕ್ಷ್ಮಿಯ
ಯಾರ ಪ್ರಸನ್ನತೆ ದೊರಕಿಸೆ ನಾನೀಗ ಭೂರಿಸುಸಂಪದಗೋವಶ್ವವ
ಪರಿಪರಿ ಪರಿವಾರ ಜನರ ನಾ ಪಡೆಯುತ ಸುಖಿಸುವೆನಾಕೆಯ ನೀ ಕರೆತಾ

## ಅಂಭ್ರಣೀಸೂಕ್ತ (ಭಾವ)

ಹನ್ನೊಂದು ರುದ್ರರ ಮತ್ತೆಂಟು ವಸುಗಳ ನೇಮಿಸುತವರ ಸಹಿತದಲಿ
ಹನ್ನೊಂದಾದಿತ್ಯರ ದಶವಿಶ್ವೇದೇವರ ಮತ್ತೆ ನಾ ನೇಮಿಸಿ ಚರಿಸುವೆನು
ಆ " ಮಿತ್ರ ವರುಣ "ರೆಂಬಂಥ ಇಬ್ಬರ ಮ"ತ್ತಿಂದ್ರ-ಅಗ್ನಿ" ಎಂಬರನು
ನಾ ಮತ್ತೆ ಪಾಲಿಸಿ " ಅಶ್ವಿನಿದೇವತೆ " ಎಂಬರನೆಲ್ಲರ ಪಾಲಿಸುವೆ
ಎಲ್ಲರೂ ಹಿಂಡುತಲಿರುವಂಥ ಆ " ಸೋಮ "ಬಳ್ಳಿಯ ಅಭಿಮಾನಿ " ಚಂದ್ರ"ನ ನಾ
ಬಲ್ಲಿದ " ಸೂರ್ಯ"ರ " ತ್ವಷ್ಟ್ರಪೂಷನ್ನರ " ಆ " ಭಗ "ನೆಂಬನ್ನ ಪಾಲಿಸುವೆ
ರಸಸೋಮವರ್ಷಿಪ ಯಜ್ಞಕೆ ಸುಯೋಗ್ಯ ಬಹುವಿಧದನ್ನವ ಹೊಂದಿರುವ
ಯಶವಂತ ಬ್ರಹ್ಮೇಂದ್ರ ಆದ್ಯರಿಗೈಶ್ವರ್ಯ ಅತಿಶಯವಾಗಿ ನಾ ಈಯುವೆನು
ಭೂರೂಪದಿಂದಲಿ ರಾಷ್ಟ್ರಾಭಿಮಾನಿ ನಾ ಧನಧಾನ್ಯ ರತ್ನವ ತಂದೀವೆನು
ಕಾರಣ ಪುಣ್ಯಕೆ ತಾನಹ ಯಜ್ಞಾರ್ಹ ದ್ರವ್ಯಕ್ಕೆ ಮೂಲದ ಕರ್ತೃವು ನಾ
ಮಹತ್ತಾದ ಆ ಬ್ರಹ್ಮಲೋಕಗಳನೆಲ್ಲವ ಪಾಲಿಪ ನನ್ನನು ದೇವರ್ಕಳು
" ಬಹುವಿಧದನ್ನವ ಮೂರ್ಬಗೆ ಜೀವರ್ಗೆ ಯೋಗ್ಯತೆಯಂತೀವ"ಳೆನ್ನುವರು
ನನ್ನ ಮಾತನಾವನು ವಿಪರೀತ ತಿಳಿವನು ಉದರದ ಪೋಷಣ ಮಾತ್ರವನೇ
ತಾನರಿತನಾವಾತ ನನ್ನ ಮಾತ ಮತ್ತಾವನಾದರದಿ ಕೇಳುತ್ತಲರಿಯುವನು
ಈ ಎಲ್ಲರ್ನನ್ನಿಂದ ಅನ್ನವ ಪಡೆಯುತ್ತಲಿರುವರು ಎಂಬುದು ಸತ್ಯವದು
ಆ ಎನ್ನ ಅಪಮಾನ ಮಾಡುವರೆಲ್ಲರೂ ಶೀಘ್ರದಿ ನಾಶವ ಹೊಂದುವರು
ನಾನೀಗ ಶ್ರದ್ಧೆಯ ಮೆರೆಸುವಮರ್ಾತ್ರರೇ ಪಡೆವಂಥ ಮಾತನು ಇದನೀಗ
ನಿನಗೀಗ ಹೇಳುವೆ ನೀ ಕೇಳು ಬಿಡದೀಗ ಕೇಳಲಿ ಬೇರೆಲ್ಲ ತಟಸ್ಥರು

ಭದ್ರರಾ ಅಮರರು ಉತ್ತಮ ಮನುಜರು ಒಪ್ಪಿಹ ಮಾತನ್ನೇ ಹೇಳುತಿಹೆ
"ರುದ್ರ"ನಸಾವನ್ನ ನಾ ಮಾಡ ಬಯಸುವೆ ಉಗ್ರನ್ನನವನ ಮಾಳ್ಪೆನು ನಾ
ಆವಾವಪದವಿಗಳ್ಯಾರಾರು ಆರ್ಹರು ಅವರನ್ನ ನಾ ಮಾಳ್ಪೆ ಪದಯೋಗ್ಯರ
ಆವನ್ನ ನಾ ಬಯಸೆ ಮಾಡಲುಬಲ್ಲೆನು "ಬ್ರಹ್ಮ"ನ್ನ "ಋಷಿ"ಯ ಮೇಧಾವಿಯು
ಜಗತ್ಸಂಹಾರಕ ಬ್ರಹ್ಮನ ತಲೆಗೊಯಿಕ "ರುದ್ರ"ನ್ನನವನ ಪ್ರಳಯದಿ ನಾ
ಬಿಗಿ ಹೆದೆಯೇರಿಸಿ ಬಿಲ್ಲನು ಹಿಡಿಯುವೆ "ರುದ್ರ"ನ್ನನವನ ಸಂಹರಿಸೆ
ಕೈವಲ್ಯದಾತಳು ನಾ "ದ್ಯಾವಾಪೃಥಿವಿ"ಯ ಚೆನ್ನಾಗಿ ಕಾಪಾಡೆ ಅವುಗಳಲಿ
ಪ್ರವೇಶಗೈದಿಹೆ ಅಭಿಮಾನಿದೇವತೆ ನಾನಾಗಿ ಒಳಗಡೆ ಇರುವುದಕೆ
ಹೆರುವೆನು ನಾ ಜಗಪತಿಯಾದ "ಬ್ರಹ್ಮ"ನ್ನೇ ಆ "ಸತ್ಯಲೋಕ"ದಧಿಪತಿಯು
ಇರುವನು ಶರಧಿಯು ನೀರಿನ ಮಧ್ಯದಿ ಕಾರಣನೆನಗಾದ ಮಹಪುರುಷ
ಶ್ರೀಮನ್ನಾರಾಯಣ ಸೃಷ್ಟಿಗೆ ಲೋಕಗಳೆಲ್ಲಕೆ ತಾ ಮೂಲಕಾರಣನು
ಸಮೀಪ ಸ್ಪರ್ಶಿಸಿ ಪೃಥ್ವಿಯ ಲೋಕವ ನಿಲ್ಲುವ ನಿಮಿತ್ತಮಾತ್ರಳು ನಾ
ವಿಶ್ವದ ಲೋಕದ ಸೃಷ್ಟಿಯ ಸ್ಥಿತಿಲಯ ಮಾಡುತಲಿರುವೆನು ನಾ ಮೇ"ಲ್ಮಾತ-
ರಿಶ್ವ"ನ ತೆರದಲಿ ಜಗದಲಿ ಪರಿಮಳ ಬೀರುವೆ ಹರಿಯಿತ್ತ ಹಿರಿಮೆಯಲಿ
ಧಾರುಣಿಗಭಿಮಾನಿ ಮೇಲ್ಲೋಕಕ್ಕಭಿಮಾನಿ ಭೂರೂಪಿ ಶ್ರೀರೂಪಿಯಾದೆನ್ನನು
ಮೀರಿಸಿ ಹರಿಯಿಹ ಈಪರಿ ಪರಿಮಿತಿ ನನ್ನದು ಶ್ರೀಹರಿ ಅಪರಿಮಿತ

## ಆಸನ–ಭೂತೋಚ್ಚಾಟನ

ಆಸನದಿ ಕೂಡುತ ಲೇಸಿನ ಮನದಿಂದ ಆ "ಅಪಕ್ರಾಮಂತು...."[14] ಮಂತ್ರಗಳ
ಉಸುರುತ ಮತ್ತಿನ್ನು "ಛೋಟಿಕಾ" ಮುದ್ರೆಯಿಂ ಭೂತಗಳೆಲ್ಲವ ನಾಶಗೈವೆ
ನಂತರ ಪ್ರಾರ್ಥಿಪೆ "ಪೃಥ್ವೀ ತ್ವಯಾ...."[15] ಎಂಬ ಆಸನಮಂತ್ರದಿ ಪೃಥ್ವಿಯನು
ಚಿಂತಿಪೆ ಆಸನದಿ ಚಂದ್ರನ ಮಂಡಲದಿ ಕೂರ್ಮನ ಹೆಗಲಲಿ ನಾನಿಹುದ
ಈಪರಿ ಚಿಂತಿಸಿ ಆಸನದಿ ಕೂಡುತ ಪಠಿಸುವೆ ನಾ ಬಲು ಶ್ರದ್ಧೆಯಿಂದ
ಆ ಪಾವನಕರವಾದ "ಭೂರ್ಭುವಸ್ವಃ ಓಂ"[16] ಎಂಬಂಥ ಮಂತ್ರವಚನವನು

---

14 ಅಪಕ್ರಾಮಂತು ಯೇ ಭೂತಾಃ ಕ್ರೂರಾಶ್ಚೈವ ತು ರಾಕ್ಷಸಾಃ ।
ಯೇ ಚಾತ್ರ ನಿವಸಂತ್ಯೇವ ದೇವತಾ ಭುವಿ ಸಂತತಮ್ ॥
ತೇಷಾಮಪ್ಯವಿರೋಧೇನ ಬ್ರಹ್ಮಕರ್ಮಸಮಾರಭೇ ।

15 ಪೃಥ್ವಿ ತ್ವಯಾ ಧೃತಾ ಲೋಕಾ ದೇವೀ ತ್ವಂ ವಿಷ್ಣುನಾ ಧೃತಾ ।
ತ್ವಂಚ ಧಾರಯ ಮಾಂ ದೇವೀ ಪವಿತ್ರಂ ಕುರು ಚಾಸನಮ್ ॥

16 ಭೂರ್ಭುವಃಸ್ವರೋಮ್



ಮುಟ್ಟುತಲಾಸನ ದೇವತಾಷಟ್ಕಕೆ ಭಕ್ತಿಲಿ ನಮಿಸಲು ಅನುವಾಗುವೆ
ಘಟ್ಯಾಗಿ ಪಠಿಪೆ "ಓಂ ಮಂ ಮಂಡೂಕನೆ" "ಓಂ ಕೂಂ ಕೂರ್ಮನೆ" ಎಂಬ ಮಂತ್ರ[17]
"ಓಂ ಶೇಂ ಶೇಷನೆ" "ಓಂ ವಂ ವರಾಹನೆ" ಎನ್ನುತಲವರನು ನಮಿಸುತಲಿ
ನಾ ಸಾಹಸ ಹೇಳುವೆ "ಓಂ ಕಾಲಾಗ್ನಿರುದ್ರನೆ" "ಓಂ ವಂ ವಜ್ರನೆ" ಎನ್ನುತಲಿ
ಪ್ರಾಕಾರದಾಕಾರದಲ್ಲಿನ ಅಗ್ನಿಯ ಧ್ಯಾನಿಸಿ ನಂತರ ವೇಗದಿಂದ
ದಿಕ್ಕೆಂಟನೆಲ್ಲವ ಬಂಧಿಪೆ "ಬಾಣ"ದ ಮುದ್ರೆಯ ತೋರುತ ಮತ್ತಿನ್ನು ನಾ
ಸು-ದರ್ಶನ ಮುದ್ರೆಯ ತೋರಿಸಿ ನಾಸೀಗ ನಮಿಸಲು "ಚಕ್ರ"ನಿಗನುವಾಗುತ
ಮುದದಿಂದ ಹೇಳುವೆ "ಓಂ ನಮಶ್ಚಕ್ರಾಯ ಸ್ವಾಹಾ"[8]
ಎಂಬಂತಹ ಮಂತ್ರವನು

## ದೇಶಕಾಲಸಂಸ್ಮರಣ[19]

ನಂತರ ಹೇಳುವೆ ಪೂಜೆಯ ಇಂದಿನ ತಿಥಿ ವಾರ-ನಕ್ಷತ್ರ ವಿವರಗಳ
ನಂತರ ಸ್ಮರಿಪೆ ನಾನಿಹ ದೇಶವು ಇರತಕ್ಕ ಭಾಗದ ಹೆಸರುಗಳ
ಶುಭಕರ ಶೋಭನಮುಹೂರ್ತವಿದೀಗ ಇಂದಿನ ಬ್ರಹ್ಮನ ಕಲ್ಪದಲಿ
ಶುಭಕರ ಎರಡನೆ "ಪರ"ದರ್ಧ ಕಲ್ಪವು ಶ್ರೀಶ್ವೇತವರಾಹದೇವನದು
ಮನುವು "ವೈವಸ್ವತ" ಇಪ್ಪತ್ತ ಎಂಟನೆ ಕಲಿಯುಗ ಪ್ರಥಮಪಾದವಿದು
ಘನ "ಜಂಬೂದ್ವೀಪ"ದಿ ಶ್ರೀಭರತವರ್ಷದಿ ಶ್ರೀಭರತಖಂಡದೀ ಭೂಭಾಗವು

---

17 ಆಸನದೇವತಾ ನಮಸ್ಕಾರ— ಓಂ ಮಂ ಮಂಡೂಕಾಯ ನಮಃ। ಓಂ ಕೂಂ ಕೂರ್ಮಾ[illegible] ನಮಃ। ಓಂ ವಂ ವರಾಹಾಯ ನಮಃ। ಓಂ ಶೇಂ ಶೇಷಾಯ ನಮಃ। ಓಂ ಕಾಂ ಕಾಲಾಗ್ನಿರುದ್ರಾಯ ನಮಃ। ಓಂ ವಂ ವಜ್ರಾಯ ನಮಃ॥

18 ಐಂದ್ರಾದಿದಿಕ್ಷು ಬಧ್ನಾಮಿ ನಮಶ್ಚಕ್ರಾಯಸ್ವಾಹ

19 ದೇಶಕಾಲಸ್ಮರಣೆ— ಶುಭೇಶೋಭನೇ ಮುಹೂರ್ತೇ ವಿಷ್ಣೋರಾಜ್ಞಯಾ ಪ್ರವರ್ತಮಾನಸ್ಯ ಆದ್ಯಬ್ರಹ್ಮಣಃ ದ್ವಿತೀಯ ಪರಾರ್ಧೇ ಶ್ವೇತವರಾಹಕಲ್ಪೇ ವೈವಸ್ವತ ಮನ್ವಂತರೇ ಅಷ್ಟಾವಿಂಶತಿತಮೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ, ಭರತವರ್ಷೇ ಭರತಖಂಡೇ ಮೇರೋರ್ದಕ್ಷಿಣೇಪಾರ್ಶ್ವೇ ದಂಡಕಾರಣ್ಯೇ ಗೋದಾವರ್ಯಾಃ ದಕ್ಷಿಣೇಕೂಲೇ ಶಾಲಿವಾಹನಶಕೇ ಬುದ್ಧಾವತಾರೇ ರಾಮಕ್ಷೇತ್ರೇ ಅಸ್ಮಿನ್ ವರ್ತಮಾನೇ ವ್ಯಾವಹಾರಿಕೇ ........ ಸಂವತ್ಸರೇ .........ಅಯನೇ ...... ...ಋತೌ .........ಮಾಸೇ ... ಪಕ್ಷೇ ..... ...ತಿಥೌ ....... ವಾಸರಯುಕ್ತಾಯಾಂ ಶುಭನಕ್ಷತ್ರ ಶುಭಯೋಗ ಶುಭಕರಣ ಏವಂಗುಣವಿಶೇಷಣವಿಶಿಷ್ಟಾಯಾಂ ಶುಭತಿಥೌ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನಾರಾಯಣ ಪ್ರೇರಣಯಾ ಶ್ರೀ ಲಕ್ಷ್ಮೀನಾರಾಯಣ ಪ್ರೀತ್ಯರ್ಥಂ ಕರೋಮಿ ಪೂಜಾವಿಧಿಮ್ ॥

ಇಲ್ಲಿಹ "ದಂಡಕ ಅರಣ್ಯ"ವೆಂಬಲ್ಲಿ ಗೋದಾವರೀ ನದಿ ದಕ್ಷಿಣಕೆ
ಸಲ್ಲುವ ರಾಮನ ಕ್ಷೇತ್ರವು ಶಕೆ "ಶಾಲೀ" ಬೌದ್ಧಾವತಾರವು ಸಂದಿಹುದು
ಚಂದ್ರನ ಮಾನದಿಂ ಅಳಿದಂಥೀಕಾಲದಿ ಅರವತ್ತು ವತ್ಸರ ಚಕ್ರಮಧ್ಯೆ
ಸಂದಿದೆ ಇಂದಿನ ಈ ಶುಭವತ್ಸರ ಇಂದಿನ ಅಯನವು ಋತುಗಳಿವು
ಇಂದಿನ ಶುಭಕರ ಮಾಸದ-ಪಕ್ಷದ ಶುಭತಿಥಿ ಹೆಸರುಗಳ್ಹೇಳುತಲಿ
ಇಂದಿನ ಶುಭವಾರ ನಕ್ಷತ್ರ-ಯೋಗವ ಕರಣಗಳನ್ನೀಗ ಹೇಳುವೆನು
ಇಂತೀ ಮಹಗುಣ ವಿಶೇಷ ಸಂದಿಹ ಶುಭಕರತಿಥಿಯಲ್ಲಿ ಶ್ರೀಭಾರತೀ-
ಕಾಂತ ಮುಖ್ಯಪ್ರಾಣನಂತರ್ಗತ ಲಕ್ಷ್ಮೀನಾರಾಯಣಂಗೀ ಪೂಜೆಯನು
ಅವನಿಂದ ಪ್ರೇರಿತ ಅವನಿಗೆ ಸಂಪ್ರೀತಿ ಎನ್ನುತಲಿ "ಧ್ಯಾನ ಆವಾಹನ"
ಇವುಗಳು ಸೇರಿದ ಷೋಡಶ ಉಪಚಾರದಿಂದಲಿ ಪೂಜೆಯ ಮಾಡುವೆನು

### ಹರಿಯಿತ್ತ ಭಕ್ತಿ-ಶಕ್ತಿ-ಸಂಪತ್ತುಗಳಿಂದಲೇ ಪೂಜೆ

ನನಗಾತನಿತ್ತಂಥ ಬಲವೀರ್ಯತೇಜವು ಕ್ರಿಯೆಗಳ ಶಕ್ತಿಯು ಇವುಗಳಿಂದ
ಘನ್ನನಾ ಶ್ರೀಲಕ್ಷ್ಮೀ ನಾರಾಯಣಂಗಿನ್ನು ಪೂಜೆಯು ಇದೆಂದು ಸಂಕಲ್ಪಿಪೆ[20]
ಅನಂತಕಲ್ಯಾಣ ಗುಣಸಿಂಧು ತಾನಾದ ಶ್ರೀವಿಷ್ಣುಪ್ರೇರಣೆಯಿಂದಲಿ ನಾ
ಅನಂತನಾದನ ಆತನ ಶಕ್ತಿಯಿಂ ಆತನ ತೇಜದಿಂ ಜೀವಿಸಿಹ
ಆತನೇ ಇತ್ತಿಹ ಮನ-ದೇಹ ಇಂದ್ರಿಯದಿಂದಲೀ ಮಾನವದೇಹಿ ನಾನು
ಆ ತಂತ್ರಸಾರದಿ ತೋರಿಹ ರೀತಿಯ ಪೂಜೆಯನಾತಗೆ ಸಲಿಸುವೆನು
ಸಾಸಿರ ಸಾಸಿರ ಬ್ರಹ್ಮಾಂಡದಧಿಪತಿ ಆ ದೇವ ಘನದಯಾಪೂರ್ಣನನು
ಲೇಸಿನ ಭಕ್ತಿಲಿ ನನ್ನಯ ಶಕ್ತಿಯ ಸಂಪತ್ತಿಗನುಸಾರ ಪೂಜಿಸುವೆ

### ಕರಶುದ್ಧಿ

ವಾಯ್ವಗ್ನಿ ವರುಣರ "ಓಂ"ಕಾರ ಪ್ರಾರಂಭ ಅಂತ್ಯಕ್ಕೆ ಸೇರಿಸಿ ಬೀಜಮಂತ್ರ
ಆ "ಯ-ರ-ವ"ಗಳನ್ನು ಎರಡ್ಬಾರಿ ಪಠಿಸುತ ಕೈಸಂಧಿ ದೋಷವ ನೀಗುವೆನು
ಈಪರಿ "ಓಂ ಯಂ ಓಂ" "ಓಂ ರಂ ಓಂ" ಮತ್ತೆ "ಓಂ ವಂ ಓಂ" ಎಂಬ ಮಂತ್ರಗಳ
ನಾ ಪಠಿಸಿ ಎರಡ್ಬಾರಿ ಕರಶುದ್ಧಿ ಬೇಗನೆ ಪೂಜೆಗೆ ನಾನೀಗ ಸಾಧಿಸುವೆ

---

[20] ಅನಂತಕಲ್ಯಾಣಗುಣೈಕಸಿಂಧು ಶ್ರೀವಿಷ್ಣುನಾ ಪ್ರೇರಿತ ಮಾನಸೋಹಮ್ ।
ತಸ್ಯೈವ ವೀರ್ಯೇಣ ಬಲೇನ ತೇಜಸಾ ಸಂಜೀವಿತ ಸ್ವಾಂತ ವಪುಶ್ಚಿದಿಂದ್ರಿಯಃ ।
ಪ್ರೀತ್ಯರ್ಥಮಸ್ಯೈವ ಕರೋಮಿ ಪೂಜಾವಿಧಿಂ ಪ್ರದಿಷ್ಟಂ ಖಲು ತಂತ್ರಸಾರೇ।
ಬ್ರಹ್ಮಾಂಡಸಾಹಸ್ರಪತೇರ್ದಯಾಲೋರ್ಭಕ್ತ್ಯಾ ಯಥಾಶಕ್ತಿ ಯಥೈವಸಂಪತ್।



ತೋಳಲಿ ಮಧ್ಯದ ಕೈಗಳ ಗಂಟಲಿ ಮೇಲ್ಮಣಿಗಂಟಲಿ ಬಂಧಕವ
ಕಳೆಯುವೆ ಮತ್ತಿನ್ನು ಕೈಬೆರಳ ಸಂಧಿಯ ಅನಿಷ್ಟವೆಲ್ಲವ ನೀಗುವೆನು

### ದ್ವಾದಶಗುರುನಮಸ್ಕಾರ[21]

ನಮಿಪೆನು ಗುರುಗಳ ನಮಿಪೆನು ಆ ಪರಮಗುರುಗಳ—ಆನಂದತೀರ್ಥರನು
ನಮಿಪೆನು ಶ್ರೀವೇದವ್ಯಾಸರ ಭಾರತೀ ಸರಸ್ವತೀ ಶ್ರೀವಾಯು ಬ್ರಹ್ಮರನು
ನಮಿಪೆನು ಶ್ರೀಲಕ್ಷ್ಮೀದೇವಿಯ ಶ್ರೀಮನ್‌ನಾರಾಯಣನನ್ನೀಗ ಬಿಡದಂತಲೆ
ನಮಿಪೆನು ಉಪಾಸ್ಯಮೂರ್ತಿಯ ಮತ್ತಿನ್ನು ಶ್ರೀವಾಸುದೇವನ ನಮಿಸುವೆನು
ವಂದಿಸಿ ಗುರುವರರೆಲ್ಲರ ನಾನೀಗ ಹೃತ್ಪದ್ಮದಲ್ಲಿರುವ ಶ್ರೀಹರಿಯ
ತಂದಿಟ್ಟು ಸುಷುಮ್ನಾ ನಾಡಿಯ ಹಾದಿಯಿಂ ಶಿರದಲ್ಲಿ ಬೇಗನೆ ನಿಲ್ಲಿಸುವೆ

### ಪಾಪಪುರುಷವಿಸರ್ಜನೆ[22]

ಚಿಂತಿಸಿ ನಂತರ ನನ್ನಯ ಶರೀರದಲ್ಲಿಹ ಆ ಪಾಪಪುರುಷನನು
ನಂತರ "ಬ್ರಹ್ಮತ್ಯಾ...." ಇತ್ಯಾದಿ ಮಂತ್ರದಿಂ ತರುವೆನು ಹೊಕ್ಕುಳ ಪ್ರದೇಶಕೆ
ಬ್ರಹ್ಮತ್ಯ ತಾ ತಲೆ ಚಿನ್ನದ ಕಳುವ್ಭುಜ ಮದ್ಯದ ವ್ಯಸನವೇ ಹೃದಯವದು
ಬಿಮ್ಮನೆ ಗುರುಪತ್ನಿಸೇವೆಯು ಸೊಂಟವು ದುಸ್ಸಂಗ ಕಾಲ್ ಪಾಪಿಪುರುಷನಿಗೆ
ಉಪಪಾತಕ ರೋಮ ಕೆಂಗಣ್ಣು-ಕೆಮ್ಮೀಸೆ ಕರಿಮೈಯು ಕೈಯಲಿ ಚರ್ಮಖಡ್ಗ
ಅಪವಿತ್ರ ಆ ಪಾಪಿ ಎಡಕುಕ್ಷಿವಾಸನ ನಾಶಕೆ ಮಂತ್ರವ ಜಪಿಸುವೆನು
ಆ "ಓಂ ಯಂ ಓಂ" ವಾಯುಮಂತ್ರದ ಆರ್ಜಪ ಒಣಗಿಪುದು ಅವನ ಪ್ರದ್ಯುಮ್ನನಿಂ
ಆ "ಓಂ ರಂ ಓಂ" ಅಗ್ನಿದ್ವಾದಶ ಜಪವದು ಸುಡಿಪುದು ಅವನ ಅನಿರುದ್ಧನಿಂ

---

[21] ಓಂ ಶ್ರೀ ಗುರುಭ್ಯೋ ನಮಃ। ಶ್ರೀ ಪರಮಗುರುಭ್ಯೋ ನಮಃ। ಶ್ರೀಮದಾನಂದತೀರ್ಥ-ಭಗವತ್ಪಾದಗುರುಭ್ಯೋ ನಮಃ। ಶ್ರೀ ವೇದವ್ಯಾಸಾಯ ನಮಃ। ಶ್ರೀ ಭಾರತ್ಯೈ ನಮಃ। ಶ್ರೀ ಸರಸ್ವತ್ಯೈ ನಮಃ। ಶ್ರೀ ವಾಯವೇ ನಮಃ। ಶ್ರೀ ಬ್ರಹ್ಮಣೇ ನಮಃ। ಶ್ರೀ ಮಹಾ-ಲಕ್ಷ್ಮ್ಯೈ ನಮಃ। ಶ್ರೀ ನಾರಾಯಣಾಯ ನಮಃ। ಉಪಾಸ್ಯದೇವತಾಯೈ ನಮಃ। ಶ್ರೀ ವಾಸುದೇವಾಯ ನಮಃ।

[22] ಬ್ರಹ್ಮಹತ್ಯಾಶಿರಸ್ಕಂ ಚ ಸ್ವರ್ಣಸ್ತೇಯಭುಜದ್ವಯಮ್ ।
ಸುರಾಪಾನಹೃದಾ ಯುಕ್ತಂ ಗುರುತಲ್ಪ ಕಟಿದ್ವಯಮ್ ।
ತತ್ಸಂಯೋಗಪದದ್ವಂದ್ವ—ಮಂಗಪ್ರತ್ಯಂಗಪಾತಕಮ್ ।
ಉಪಪಾತಕರೋಮಾಣಂ ರಕ್ತಶ್ಮಶ್ರುವಿಲೋಚನಮ್ ।
ಅಚೇತನಮಧೋವಕ್ತ್ರಂ ದಗ್ಧಪಾತಾಲಸನ್ನಿಭಮ್ ।
ಖಡ್ಗಚರ್ಮಧರಂ ಕೃಷ್ಣಂ ಕುಕ್ಷೌ ವಾಮೇ ವಿಚಿಂತಯೇತ್ ।

"ಓಂ ವಂ ಓಂ" ವರುಣಬೀಜದ ಇಪ್ಪತ್ತು ಮೇಲ್ನಾಲ್ಕು ಜಪ ಸುರಿಪ ಅಮೃತವು
ಸಂವರ್ಧಿಸುತ್ತಿರೆ ಶ್ರೀವಾಸುದೇವನಿಂ ತೋಯುತ ಪಾವನನಾಗುವೆನು [ತಾ

## ಪ್ರಾಣಾಯಾಮ-ತತ್ತ್ವನ್ಯಾಸ-ಮಾತೃಕಾನ್ಯಾಸ

ಓಡಿಸೆ ಪ್ರೈಸಂಧಿ ಕೋಶಗಳಿಂದೆಲ್ಲ ಕಾಡುವ ದೋಷವಿಶೇಷಗಳ
ಮಾಡಿ ಪ್ರಾಣಾಯಾಮ ಬೇಡುವೆ ಶುದ್ಧಿಯ ಒಮ್ಮನವೀ ಪೂಜಾಕಾರ್ಯದಲಿ
ತತ್ತ್ವಗಳಭಿಮಾನಿ ಇಪ್ಪತ್ತಮೇಲ್ನಾಲ್ಕು ದೇವರ್ಕಳೆಲ್ಲರ ವಂದಿಸುತ
ತತ್ತ್ವಾಂತರ್ಗತ ನಾರಾಯಣ ಪ್ರೀತಿಗೆಂದೀಗ ಮಾಡುವೆ ಬೇಗನೆ ತತ್ತ್ವನ್ಯಾಸ
ನಾನೀಗ ಮಾತೃಕಾನ್ಯಾಸದಿ ದೇವನ ಚರಣಾರವಿಂದದಿ ವಾಸಿಸಿಹ
ಮುನಿಜನ ಮುನಿಪತ್ನಿ ಮತ್ತಿನ್ನು ಶ್ರೀಹರಿಯ ರಾತ್ರಿಕಾರೂಪಗಳೊಂದಿಸುವೆ
ಅಷ್ಟಾಕ್ಷರಮಂತ್ರದಿಂ ಆ ಪ್ರಾಣವಾಯುವ ರೇಚಕ ಪೂರಕ ಕುಂಭಕದಿ
ಘಟ್ಯಾಗಿ ನಿಲಿಸುತ ಒಲಿಸುತ ವಾಯುವ ಶ್ವಾಸನಿರೋಧವ ಸಾಧಿಸುವೆ

## ಮೂಲಮಂತ್ರಜಪ—ನೂರೆಂಟುಬಾರಿ

ಅಷ್ಟಾಕ್ಷರ ನ್ಯಾಸವ ಮಾಡುತ "ಉದ್ಯತ್‌ ಭಾಸ್ವತ್‌...."[23] ಇತ್ಯಾದಿ ಧ್ಯಾನಶ್ಲೋಕ
ಇಷ್ಟದಿ ಹೇಳುತ್ತ ಧ್ಯಾನಿಸಿ ಜಪಿಸುವೆ ನೂರೆಂಟುಬಾರಿಗಾ ಮೂಲಮಂತ್ರ
ತಂತ್ರವು ಪೂಜೆಯದೆಂದದ ಭಾವಿಸಿ ಮಾಡುವೆ ನಾ 'ಅಷ್ಟಾಕ್ಷರ
ಮಂತ್ರ'ದ ವರ್ಣದ ವಿನ್ಯಾಸವಾಮೇಲೆ ಶ್ರೀಹರಿಧ್ಯಾನವ ಮಾಡುವೆನು

## " ನಿಷುಸೀದ...." ಮಂತ್ರ[24]

ನಂತರ ಕೈಮುಗಿದು "ನಿಷುಸೀದ...." ಋಙ್ಮಂತ್ರ ಜಪಿಸುತಲದರ ಭಾವವನು
ಚಿಂತಿಪೆ ಮನದಲಿ ಪರಿಪರಿ ನಾನೀಗ ಹರಿಪೂಜಾಕಾರ್ಯದ ಅಂಗವಾಗಿ

---

23 ಉದ್ಯದ್ಭಾಸ್ವತ್ಸಮಾಭಾಸ—ಶ್ಚಿದಾನಂದೈಕದೇಹವಾನ್ ।
ಚಕ್ರಶಂಖಗದಾಪದ್ಮ—ಧರೋ ಧ್ಯೇಯೋಽಹಮೀಶ್ವರಃ ॥
ಲಕ್ಷ್ಮೀಧರಾಭ್ಯಾಮಾಶ್ಲಿಷ್ಟಃ ಸ್ವಮೂರ್ತಿಗಣಮಧ್ಯಗಃ ।
ಬ್ರಹ್ಮವಾಯುಶಿವಾಹೀಶ—ವಿಪೈಃ ಶಕ್ರಾದಿಕೈರಪಿ ॥
ಸೇವ್ಯಮಾನೋಽಧಿಕಂ ಭಕ್ತ್ಯಾ ನಿತ್ಯನಿಶ್ಶೇಷಶಕ್ತಿಮಾನ್ ।
ಮೂರ್ತಯೋಽಷ್ಟಾವಪಿ ಧ್ಯೇಯಾ—ಶ್ಚಕ್ರಶಂಖವರಾಭಯೈಃ ॥
ಯುಕ್ತಾಃ ಪ್ರದೀಪವರ್ಣಾಶ್ಚ ಸರ್ವಾಭರಣಭೂಷಿತಃ ।

24 ನಿಷುಸೀದ ಗಣಪತೇ ಗಣೇಷು ತ್ವಾಮಾಹುರ್ವಿಪ್ರತಮಂ ಕವೀನಾಮ್ ।
ನಾರೇ ಮಹಾಮರ್ಕಂ ಮಘವಂ ಚಿತ್ರಮರ್ಚ ।



ನಮ್ಮೆಲ್ಲ ಇಂದ್ರಿಯಗಣಕೆ ನೀ ಪ್ರೇರಕ ಗಣಪತಿದೇವನ ಅಂತರ್ಯಾಮಿ
ಅಮ್ಮಮ ದೇವನೆ ಹೇ ವಿಶ್ವಂಭರನೇ ಬಂದಿರು ನಮ್ಮೆಲ್ಲ ಇಂದ್ರಿಯದಿ
ಸರ್ವಜ್ಞರೊಡೆಯನು ನೀನಂತೆ ನಿನ್ನಯ ಪ್ರೇರಣೆಯಿಲ್ಲದ ಕಾರ್ಯವಿಲ್ಲ
ಸರ್ವರ ಸ್ವಾಮಿಯೇ ನಮ್ಮಲ್ಲಿ ನೀ ನಿಂತು ನಿನ್ನಯ ಈ ಪೂಜೆ ಮಾಡಿಸಿಕೋ

## ಹರಿಪ್ರಸನ್ನತೆಗಾಗಿ ಪ್ರಾರ್ಥನೆ[25]

ಪ್ರಾಣಿಗಳೆಲ್ಲರ ತ್ರಾಣಕೆ ಕಾರಣನಾ ದೇವ ವಾಯುವಿಂ ಪೂಜಿತನೆ
ಜ್ಞಾನಸುಖಪೂರ್ಣನೆ ಲಕ್ಷ್ಮೀನಾರಾಯಣ ನೀ ತೋರು ಬೇಗನೆ ಪ್ರಸನ್ನತೆ

## ಬಿಂಬಚಿಂತನೆ[26]

ಎನ್ನಯ ಬಿಂಬನೆ ಹೇ ಸ್ವಾಮಿ ಶ್ರೀಹರಿ ಪ್ರತಿಬಿಂಬಮಾತ್ರನು ನಾನಹುದು
ಭಿನ್ನ ನಾ ನಿನ್ನಿಂದ ನಿರ್ದೋಷಿ ದೇವನೆ ನನ್ನೆಲ್ಲ ದೋಷವ ಕಳೆಯಯ್ಯ
" ನನ್ನೆಲ್ಲ ಶುಭಕ್ರಿಯೆ ನಿನ್ನಯ ಪ್ರಸಾದದಿಂದಲಿ ಹರಿಪೂಜೆ ಎಂದಾಗಲಿ "
ಎನ್ನುತಲೀಪರಿ ಬಿಂಬಸ್ಥ ಹರಿಯನ್ನು ಪ್ರಾರ್ಥನಾಮುದ್ರೆಯಿಂ ಪ್ರಾರ್ಥಿಸುವೆ

## ತುಲಸೀಪ್ರಾರ್ಥನೆ

ವರತುಲಸೀದೇವಿಯೆ ಪ್ರಸನ್ನಳಾಗು ನೀ ನಮಿಸುವೆ ನಿನಗೆ ನಾನೀಗ
ಶರಧಿಯ ಮಥನದಿ ಧನ್ವಂತ್ರಿಯಮೃತದ ಕಲಶದಿಂದುದಿಸಿದೆ ಹರಿವಲ್ಲಭೆ

## ಕಲಶಪೂಜೆ- ಕಲಶದೇವತೆಗಳು

ನಾ ಕಲಶ ಪೂಜಿಪೆ ನಂತರದಲ್ಲಾಗ ಆ ನೂರು ದೇವರ್ಕಳ ಕರೆಯುತಲ್ಲಿ
'ಅ'ಕಾರದಿಂ ಹಿಡಿದು 'ಕ್ಷ'ಕಾರದೊರೆಗಿನ ಐವತ್ತೊಂದಕ್ಷರ ದೇವರ್ಕಳ
'ಕೇಶವ' ಇತ್ಯಾದಿ ಇಪ್ಪತ್ತಮೇಲ್ನಾಲ್ಕು ಮೂರ್ತಿಗಳಲ್ಲಿಗೆ ಕರೆಯುತಲಿ
'ವಿಶ್ವ'ನ 'ತೈಜಸ'ನ 'ಪ್ರಾಜ್ಞ'ನ 'ತುರ್ಯ'ನ ಆ 'ಆತ್ಮ' ಮೇ'ಲಂತರಾತ್ಮ'ರನು

---

25 ಆರಾಧ್ಯಸೇ ಪ್ರಾಣಭೃತಾಂ ಪ್ರಣೇತ್ರಾ ಪ್ರಾಣಾಧಿನಾಥೇನ ಸಮೀರಣೇನ ।
ನಾರಾಯಣಜ್ಞಾನಸುಖೈಕಪೂರ್ಣ ಸ್ವಾಮಿನ್ ಮಮ ಶ್ರೀರಮಣ ಪ್ರಸೀದ ।

26 ಬಿಂಬೋಽಸಿ ಪ್ರತಿಬಿಂಬೋಽಸ್ಮಿ ತವ ಯದ್ಯಪಿ ಚಾಂತರಮ್ ।
ಸ್ವಾಮಿನ್ ನಿರ್ದೋಷ ಮದ್ದೋಷಂ ವಿರೇಚಯ ನಮೋಽಸ್ತು ತೇ ।
ಭಗವನ್ ಯನ್ಮಯಾ ಕರ್ಮ ಶುಭಂ ಕಾರಯಸಿ ಪ್ರಭೋ ।
ತತ್ಸರ್ವಂ ವಿಷ್ಣುಪೂಜಾಽಸ್ತು ತವ ದೇವ ಪ್ರಸಾದತಃ ।

'ಪರಮಾತ್ಮ' 'ಜ್ಞಾನಾತ್ಮ' 'ಶ್ರೀವಾಸುದೇವ'ರ
'ಸಂಕರ್ಷಣ' ಮತ್ತೆ 'ಪ್ರದ್ಯುಮ್ನ'ರ
ವರ 'ಅನಿರುದ್ಧ'ನ ಆ 'ಮತ್ಸ್ಯ-ಕೂರ್ಮ'ರ
'ವರಹ-ನೃಸಿಂಹ'ರ 'ವಾಮನ'ನ್ನ
ಆ 'ಪರಶುರಾಮ'ನ 'ಶ್ರೀರಘುರಾಮ'ನ 'ಶ್ರೀಕೃಷ್ಣ ಬುದ್ಧ'ರ 'ಕಲ್ಕಿ'ಯನು
ಆ ಪವಿತ್ರಾತ್ರೇಯನಾದ 'ದತ್ತಾತ್ರೇಯ' 'ಶ್ರೀವೇದವ್ಯಾಸ'ರ ಕರೆಯುತಲಿ
ಕರೆಯುತ ಆ 'ಶಿಂಶುಮಾರ'ನ್ನ ಈಪರಿ ಮೊತ್ತವು ನೂರಾದ ದೇವರ್ಕಳ
ಕರೆಯುವೆ ಆ 'ಮೂಲಮೂರ್ತಿ ನಾರಾಯಣ'ನ ಪೂಜೆಗೆ ನಿಲ್ಲಲು ಕಲಶದಲ್ಲಿ

## ಕಲಶಗಳ ಸಂಖ್ಯೆ

ನೈವೇದ್ಯಪ್ರೋಕ್ಷಣೆ ನೀರಿಗೆ ತಾನೊಂದು ಪಂಚೋಪಚಾರಕ್ಕೆ ಮತ್ತೊಂದದು
ಭಾವದಿಂ ಇನ್ನೊಂದು ಕುಡಿನೀರ ಪಾತ್ರೆಯು ಈಪರಿ ಮೂರ್ಪಾತ್ರೆ ಇಡುವೆನು ನಾ
ಕೈ ತೊಳೆವ ನೀರಿಗೆ ಗಂಧ ಇತ್ಯಾದಿಗೆ ಇರೆ ಪಾತ್ರೆ ಮತ್ತೆರಡ ಇಡುವೆನು ನಾ
ಅಂತೆಯೇ ಬೇರೆರಡ ಗಂಧದ ಉದಕಕೆ ಪರಿಶುದ್ಧ ನೀರಿಗೆ ನಾನಿಡುವೆ
ಇದ್ದರೆ ತಾನೇಳು ಇರದಿರೆ ತಾನೈದೋ ತಾ ಮೂರೋ ಮತ್ತಿನ್ನು ತಾನೆರಡೋ
ಇದೂ ತಾನಿರದಿರೆ ಕಲಶವನೊಂದನೇ ನೀರ್ತುಂಬಿ ನಾನಿಟ್ಟು ಪೂಜಿಸುವೆ
ಅಪ್ಪೊಂದೇ ಪಾತ್ರೆಯ ನೀರನೆ ಬೇರ್ಬೇರೆ ತಾನಿತರ ಪಾತ್ರೆಗೆ ಹಾಕುತಲಿ
ನೈವೇದ್ಯಪ್ರೋಕ್ಷಣೆ ಮುಂತಾದ ಪೂಜೆಯ ತಾನೆಲ್ಲ ಕಾರ್ಯಕೆ ಬಳಸುವೆನು

## ಕಲಶಪೂಜೆ[27]

ಶ್ರೀವಿಷ್ಣು ಮುಖದಲಿ ಕಂಠದಿ ರುದ್ರನು ಬುಡದಲಿ ಬ್ರಹ್ಮನು ಕಲಶದಲಿ
ಇವರೊಡನೆ ಮಧ್ಯದಿ ಆ ಮಾತೃಗಣಗಳು ಇರುವುದ ಸ್ಮೃತಿ ಸಾರುವುವೋ
ಇರುವುವು ಕಲಶದಿ ಸಾಗರ ಸರ್ವಸ್ವ ಆ ಸಪ್ತದ್ವೀಪವು ವಸುಂಧರೆ
ಇರುವುವು ಆ ನಾಲ್ಕು ವೇದ-ವೇದಾಂಗವು ಕಲಶವ ಬಿಡದಂತೆ ಆಶ್ರಯಿಸಿ
ವರ ಗಂಗೆ ಯಮುನೆ ಸರಸ್ವತಿ ಪರುಷ್ಣಿ ಸೇರಿದ ಶತದ್ರು-ಅಸಿಕ್ನಿಯು
ಮರುದ್ವೃಧೇ ವಿತಸ್ತ ಆರ್ಜಿಕೀ ನದಿಗಳೇ ನೀವೆಲ್ಲ ಸೇರುತ ಬಂದಿಲ್ಲಿರಿ[28]

---

27 ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರಸ್ಸಮಾಶ್ರಿತಃ।
ಮೂಲೇ ತತ್ರ ಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾಃ ಸ್ಮೃತಾಃ॥
ಕುಕ್ಷೌ ತು ಸಾಗರಾಃ ಸರ್ವೇ ಸಪ್ತದ್ವೀಪಾ ವಸುಂಧರಾ।
ಋಗ್ವೇದೋಽಥ ಯಜುರ್ವೇದೋ ಸಾಮವೇದೋ ಹ್ಯಥರ್ವಣಃ॥
28 ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿ ಸ್ತೋಮಂ ಸಚತಾ ಪರುಷ್ಣ್ಯಾ।
ಅಸಿಕ್ನ್ಯಾ ಮರುದ್ವೃಧೇ ವಿತಸ್ತಯಾಽಽರ್ಜೀಕೀಯೇ ಶೃಣುಹ್ಯಾ ಸುಷೋಮಯಾ॥



ಈಪರಿ 'ಗಂಗೇ ಚ ಯಮುನೇ ಚ'[29] ಇತ್ಯಾದಿ ಮಂತ್ರಗಳ ನಂತರದಿ ಭಕ್ತಿಯಿಂದ
ನಾ ಪಠಿಸಿ ಗಂಗೆಯ ಯಮುನೆಯ ಇಲ್ಲಿಗೆ ಬರಲೆಂದು ಪ್ರಾರ್ಥಿಸುತ ಮತ್ತೊಮ್ಮೆ
ಬೇಡುವೆ ಆ ಕೃಷ್ಣೆ ಗೋದಾವರಿ ಸಿಂಧು ಸರಸ್ವತಿ ನರ್ಮದೆ ಕಾವೇರಿಯರ
ನೀಡಿರಿ ನಿಮ್ಮಯ ಸನ್ನಿಧಿ ಕಲಶದಿ ಹರಿಪೂಜೆಗಾಗಿಂದು ದೇವಿಯರೇ
ಸಮಸ್ತ ತೀರ್ಥವ ಸಮಸ್ತ ನಿರ್ಜರರ ಸನ್ನಿಧಿಯಿಂದಾಗಿ ಶ್ರೀಹರಿಯ
ಮಮತೆಯ ಪೂರ್ಣಕುಂಭಕ್ಕೆ[30] ನಾನೀಗ ನಮನವ ಮಾಡುವೆ ಭಕ್ತಿಯಲಿ
ಕಲಶಾಭಿಮಾನಿಯು ಈಯಲಿ ನಮಗೀಗ ಕೀರ್ತಿಯ ಆಯುವ ಪ್ರಜ್ಞೆಯನು
ಬಲವ ಸುಬುದ್ಧಿಯ ಐಶ್ವರ್ಯ ಯೋಗ್ಯತೆ ಪಾಪದಿಂ ಮುಕ್ತಿಯ ಪುಣ್ಯವೃದ್ಧಿ[31]
ನಂತರದಿ ಶಂಖ ಚಕ್ರ ಗದಾ ಪದ್ಮ ಧೇನುವು-ತಾರ್ಕ್ಷ್ಯವು ಮುದ್ರೆಯವ
ಚಿಂತಿಸಿ ತೋರಿಸಿ ಹನ್ನೆರಡು ಬಾರಿ ನಾ ಆ ಮೂಲಮಂತ್ರವ ಜಪಿಸುವೆನು

## ಶಂಖಪೂಜೆ[32]

ಕಲಶದ ನೀರನು ಶಂಖದಿ ತುಂಬಿಸಿ ಶಂಖಕೆ ಪೂಜೆಯ ನಂತರದಿ
ಒಲವಿಂದ ಮಾಡುತ ಶಂಖವ ಸ್ತುತಿಸುತ ಪೂಜೆಗೆ ಅನುವಾಗೆ ಬೇಡುವೆನು

---

29 ಗಂಗೇ ಚ ಯಮುನೇ ಕೃಷ್ಣೇ ಗೋದಾವರೀ ಸರಸ್ವತೀ।
ನರ್ಮದಾ ಸಿಂಧು ಕಾವೇರಿ ಜಲೇಽಸ್ಮಿನ್ ಸನ್ನಿಧಿಂ ಕುರು॥
ಸರ್ವೇ ಸಮುದ್ರಾಸ್ಸರಿತಸ್ತೀರ್ಥಾನಿ ಜಲದಾ ನದಾಃ।
ಆಯಾಂತು ದೇವಪೂಜಾರ್ಥಂ ದುರಿತಕ್ಷಯಕಾರಕಾಃ॥
ಅತ್ರ ಗಾಯತ್ರೀ ಸಾವಿತ್ರೀ ಶಾಂತಿಃಪುಷ್ಟಿಕರೀ ತಥಾ।
ಆಯಾಂತು ದೇವಪೂಜಾರ್ಥಮಭಿಷೇಕಾರ್ಥಮಾದರಾತ್॥
30 ಸರ್ವತೀರ್ಥಮಯೋ ಯಸ್ಮಾತ್ ಸರ್ವದೇವಮಯೋ ಯತಃ।
ಅತೋ ಹರಿಪ್ರಿಯೋಽಸಿ ತ್ವಂ ಪೂರ್ಣಕುಂಭ ನಮೋಽಸ್ತು ತೇ॥
31 ಕಲಶಃ ಕೀರ್ತಿಮಾಯುಷ್ಯಂ ಪ್ರಜ್ಞಾಂ ಮೇಧಾಂ ಶ್ರಿಯಂ ಬಲಮ್।
ಯೋಗ್ಯತಾಂ ಪಾಪಹಾನಿಂ ಚ ಪುಣ್ಯವೃದ್ಧಿಂ ಚ ಸಾಧಯೇತ್॥
32 ತ್ವಂ ಪುರಾ ಸಾಗರೋತ್ಪನ್ನೋ ವಿಷ್ಣುನಾ ವಿಧೃತಃ ಕರೇ।
ನಮಿತಸ್ಸರ್ವದೇವೈಶ್ಚ ಪಾಂಚಜನ್ಯ ನಮೋಽಸ್ತು ತೇ॥
ಗರ್ಭಾ ದೇವಾರಿನಾರೀಣಾಂ ವಿಶೀರ್ಯಂತೇ ಸಹಸ್ರಧಾ।
ತವ ನಾದೇನ ಪಾತಾಲೇ ಪಾಂಚಜನ್ಯ ನಮೋಽಸ್ತು ತೇ॥
ದರ್ಶನೇನ ಹಿ ಶಂಖಸ್ಯ ಕಿಂ ಪುನಃ ಸ್ಪರ್ಶನೇನ ಚ।
ವಿಲಯಂ ಯಾಂತಿ ಪಾಪಾನಿ ತಮಃ ಸೂರ್ಯೋದಯೇ ಯಥಾ॥
ನತ್ವಾ ಶಂಖಂ ಕರೇ ಧೃತ್ವಾ ಮಂತ್ರೇಣಾನೇನ ವೈಷ್ಣವಃ।
ಯಃ ಸ್ನಾಪಯತಿ ಗೋವಿಂದಂ ತಸ್ಯ ಪುಣ್ಯಮನಂತಕಮ್॥

ಸಾಗರೋದ್ಭವ ಶಂಖ ಶ್ರೀವಿಷ್ಣು ಕರವಾಸ ಬಲುಬಲು ಪೂಜಿತ ಪಾಂಚಜನ್ಯ
ನೀ ಗರ್ಜಿಸಿದರಲ್ಲಿ ಪಾತಾಳದಸುರರ ಸ್ತ್ರೀಯರ ಗರ್ಭಗಳೊಡೆಯುವುವೋ
ಸೂರ್ಯ ತಾನುದಿಸಲು ಕತ್ತಲೆಯೋಡುವ ತೆರದಲಿ ನೀ ಬರೆ ಪಾಪಕೋಟಿ
ಆರ್ಯನೆ ನಿನ್ನಲ್ಲಿ ನೀರನು ತುಂಬುತ ಅಭಿಷೇಕ ಮಾಡಲು ತಾ ಪುಣ್ಯವೋ
ಶಂಖಗಾಯತ್ರಿಯ[33] ಪಠಿಸುತ ಶಂಖಕೆ ಮೂರ್ಬಾರಿ ಪೂಜೆಯ ಸಲ್ಲಿಸುವೆ
ಶಂಖಾದಿ ಮುದ್ರೆಗಳ್ತೋರುತ ಆ ಮೂಲಮಂತ್ರವ ಪಠಿಪೆನು ಎಂಟಾವರ್ತಿ

## ಶುಚಿಸಾಧನೆ[34]

ಅಪವಿತ್ರ ನಾನಿರೆ ಸುಪವಿತ್ರ ನಾನಿರೆ ಎಂಥದೇ ಅವಸ್ಥೆ ನನದಾಗಿರೆ
"ಶ್ರೀಪುಂಡರೀಕಾಕ್ಷ" ಪರಮಾತ್ಮನೆನ್ನುತ ಒಳಹೊರಶುಚಿ ಸಾಧಿಸುವೆ
ಶಂಖವ ಪೂಜಿಸಿ ನೀರ್ತುಂಬಿ "ಹರಿ"ಯೆಂದು ತುಲಸಿಯ ಹೂಗಳ ಸಹಿತದಲಿ
ಶಂಖದ ನೀರನು ಎಲ್ಲೆಡೆ ಪ್ರೋಕ್ಷಿಸಿ ಶುಚಿಯನು ಅಲ್ಲೀಗ ಸಾಧಿಸುವೆ

## ಪಂಚಾಮೃತದ್ರವ್ಯಪೂಜೆ

ದಧಿಯಿಟ್ಟು ಪೂರ್ವಕೆ ಮಧುವಿಟ್ಟು ಪಶ್ಚಿಮಕೆ ಸಕ್ಕರೆ ಉತ್ತರಕೆ ಮತ್ತಿನ್ನು
ಆ ದಕ್ಷಿಣಕೆ ತಾ ಘೃತ ಮಧ್ಯದಿ ಕ್ಷೀರವ ನಾನಿಟ್ಟು ಅವನೀಗ ಪೂಜಿಸುವೆ

## ಅರ್ಘ್ಯಾದಿ ಕಲಶಸ್ಥಾಪನೆ

ಇಡುವೆನು ನಾನೀಗ ಆ ಮೊದಲೇ ತಂದಂಥ ಆ ಐದು ನೀರಿನ ಪಾತ್ರೆಗಳ
ಇಡುವೆ ವಾಯುವ್ಯಕೆ ಅರ್ಘ್ಯದ ಪಾತ್ರೆಯ ನೈಋತ್ಯಕ್ಕಾ ಪಾದ್ಯಪಾತ್ರೆಯನು
ಇಡುವೆನೀಶಾನ್ಯದಿ ಆಚಮನಪಾತ್ರೆಯ ಸ್ನಾನದ ಪಾತ್ರೆಯನಾಗ್ನೇಯಕೆ
ಇಡುವೆನು ಪರಿಶುದ್ಧ ನೀರಿನ ಪಾತ್ರೆಯ ಮಧ್ಯದಲ್ಲಾ ಮರು ಆಚಮನಕೆ
ಇಡುವೆನು ಮತ್ತೊಂದು ಒಳ್ಳೆಯ ನೀರನು ತುಂಬಿದ ಪಾತ್ರೆಯ ಮಧ್ಯದಲಿ
ಇಡುವೆನು ಮಧುವನು ಸೇರಿಸುತದರಲ್ಲಿ ಆರನೆಯೀಪಾತ್ರೆ ಮಧುಪರ್ಕಕೆ
ಇಡುವೆನು ಕಲಶದಿ ಗಂಧವ ಪುಷ್ಪವ ತುಲಸಿಯ ದಳಗಳ ಹಿತದಿಂದಲಿ
ಇಡುವೆನು ದರ್ಭೆಯು ಇತ್ಯಾದಿ ಪೂಜೆಯ ಸಾಧನಗಳೆಲ್ಲವನವುಗಳಲಿ

---

33 ಪಾಂಚಜನ್ಯಾಯ ವಿದ್ಮಹೇ ಪಾವಮಾನಾಯ ಧೀಮಹಿ।
ತನ್ನಃ ಶಂಖಃ ಪ್ರಚೋದಯಾತ್ ॥

34 ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋऽಪಿ ವಾ।
ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ ॥



## ಮುದ್ರಾಪ್ರದರ್ಶನ

ತೋರುವೆನರ್ಘ್ಯದ ಪಾತ್ರೆಲಿ ನಾನೀಗ ಧ್ಯಾನದ ಮುದ್ರೆಯ ಮತ್ತಿನ್ನು
ತೋರುವೆ ಪಾದ್ಯದ ಪಾತ್ರೆಯೊಳಂಜಲಿ ಆಚಮನ ಪಾತ್ರೆಲಿ ಗೋಕರ್ಣದ
ಪರಿಯ ಈ ಮುದ್ರೆಯ ನಂತರ ಮಧುಪರ್ಕ ಪಾತ್ರೆಲಿ ವರಾಹಮುದ್ರೆಯನು
ತೋರುತ ಪುನರಾಚಮನದ ಪಾತ್ರೆಲಿ ಆ ಹಂಸಮುದ್ರೆಯ ತೋರುವೆನು
ಪ್ರೋಕ್ಷಿಪೆ ತುಲಸಿಯ ದಲ ಬೆರೆತ ಪರಿಶುದ್ಧ ನೀರಿನಿಂ ಪೂಜೆಯ ವಸ್ತುಗಳ
ಸಾಕ್ಷಾತು ಶ್ರೀಹರಿ ನಿಲ್ಲುವ ಪೀಠಕೆ ಪೂಜೆಯ ನಾನೀಗ ಸಲ್ಲಿಸುವೆ

## ಪೀಠಪೂಜೆ

ಪೀಠವ ಚಕ್ರಾಬ್ಜ ಮಂಡಲದ ಮೇಲೀಗ ಸ್ಥಾಪಿಸಿ ಧ್ಯಾನಿಸಿ ಗುರುಗಳನು
ಪೀಠದಪೂಜೆಗೆ ಅವರ ಅನುಜ್ಞೆಯ ಬೇಡುವೆ ನಾನೀಗ ಹಿತದಿಂದ
ಪೀಠದ ಮಧ್ಯದಿ ಪರದೈವ ಶ್ರೀಲಕ್ಷ್ಮೀನಾರಾಯಣಂಗಿನ್ನು ನಮಿಸುತಲಿ
ಪೀಠದ ಎಡಭಾಗದಲ್ಲಾ ಗುರು ಶ್ರೀ ವಾಯುದೇವನ ನಮಿಸುತಲಿ
ಪೀಠದ ದಕ್ಷಿಣಭಾಗದಿ ಸುರರನು ಮತ್ತಿನ್ನು ಬ್ರಹ್ಮರುದ್ರಾದ್ಯರ
ಪೀಠದ ಎಡದ ಭಾಗದಿ ಸನಕಸನಂದನರ ಚಿಂತಿಸಿ ನಮಿಸುತಲಿ
ಗುರುಗಳ ಅಪ್ಪಣೆಯಿಂದಲಿ ನಾನೀಗ ಪೀಠದ ಪೂಜೆಗೆ ಅನುವಾಗುತ
ಗರುಡನ್ನ ಪೀಠದ ಕೆಳಬದಿ ಆಗ್ನೇಯ ಭಾಗದಿ ಚಿಂತಿಸಿ ನಮಿಸುವೆನು
ನೈಋತ್ಯದಲ್ಲಿನ್ನು ಶ್ರೀವೇದವ್ಯಾಸರ ವಾಯುವ್ಯದಲ್ಲಿನ್ನು ದುರ್ಗೆಯನು
ಸರಸ್ವತೀದೇವಿಯ ಈಶಾನ್ಯಭಾಗದಿ ನಮಿಸುವೆ ಹಿತದಿಂದ ಮತ್ತಿನ್ನು
ಮೇಲ್ಕೋಣಗಳಲೀಗ ಧರ್ಮಾಧಿಪತಿಯಾದ ಯಮನನು ಚಿಂತಿಸಿ ನಮಿಸುವೆನು
ಅಲ್ಲಿಯೇ ಜ್ಞಾನದ ಅಧಿಪತಿ ಶ್ರೀವಾಯು ವೈರಾಗ್ಯದಧಿಪತಿ ಶಿವರನ್ನು
ನಮಿಸುತಲೈಶ್ವರ್ಯದಧಿಪತಿ ತಾನಾದ ಇಂದ್ರನ ನಾನೀಗ ಕ್ರಮದಿಂದ
ನಮಿಸುವೆ ಪೀಠದ ಹಲಗೆಯ ಪೂರ್ವಕೆ ಅಧರ್ಮದಧಿಪತಿ ನಿರಋತಿಯ
ಚಿಂತಿಸಿ ದಕ್ಷಿಣಭಾಗಕೆ ಅಜ್ಞಾನದಧಿಪತಿ ದುರ್ಗೆಯ ನಮಿಸುತಲಿ
ನಂತರ ಪಶ್ಚಿಮಭಾಗಕ್ಕಽವೈರಾಗ್ಯದಧಿಪತಿ ಕಾಮನ ನಮಿಸುವೆನು
ಉತ್ತರಕ್ಕನೈಶ್ವರ್ಯದಧಿಪತಿ ರುದ್ರನ ನಮಿಸುತ ಪೀಠದ ಕೆಳದಲೀಗ
ಉತ್ತಮ ಪರಮಪುರುಷನ ನಮಿಸುತ ಆಧಾರರೂಪಿಣಿ ಶಕ್ತಿಗ್ನಮಿಸಿ
ಶ್ರೀವಿಷ್ಣುಕೂರ್ಮನ; ಆತನ ಪುಚ್ಛದಲ್ಲಾಶ್ರಿತ ಶ್ರೀವಾಯುಕೂರ್ಮನನು
ಆ ವಾಯುಕೂರ್ಮನ ಪುಚ್ಛದಲ್ಲಾಶ್ರಿತ ಅನಂತಶೇಷನ ನಮಿಸುತಲಿ
ಅಲ್ಲಿ ತಾ ಶೇಷನ ಹೆಡೆಯಲಿ ಆಶ್ರಿತ ಪೃಥ್ವ್ಯಭಿಮಾನಿ ಭೂಮಿಯಳ
ಮೇಲಿನ್ನು ಆ ಕ್ಷೀರಸಾಗರದಭಿಮಾನಿ ವರುಣನ ನಾನೀಗ ನಮಿಸುವೆನು

ಆ ರಮಾರೂಪದ ಆ ಶ್ವೇತದ್ವೀಪವ ನಮಿಸುತಲಾರಮಾರೂಪ ಸಹ
ಆ ರತ್ನಮಂಟಪ ದಿವ್ಯವ ನಮಿಸುತ ಆ ರಮಾರೂಪದ ಕಂದನಾಳ
ಕೂಡಿದ ಆರ್ದಳ ಪದ್ಮದ ಮುಂದಣ ಮೂರ್ದಳದಿ ದೇವಮಂಡಲವ
ನೋಡುತ ದಕ್ಷಿಣಕ್ಕರ್ಕನ ಮಂಡಲ ಎಡದಲಿ ಸೋಮನ ಸಮ್ಮುಖದಿ
ಇರುತಿಹ ಅಗ್ನಿಯ ನಮಿಸುತ ಪದ್ಮದ ಹಿಂದಣದೆಡಬದಿ ದಳದಲ್ಲಿ
ಇರುತಿಹ ಸತ್ವಾಭಿಮಾನಿನಿ ಶ್ರೀಯಳ ಮತ್ತಿನ್ನು ಬಲಬದಿ ದಳದಲ್ಲಿ
ಆ ರಜೋಭಿಮಾನಿನಿ ಭೂಮಿಯ ನಮಿಸುತ ದೇವನ ಹಿಂಬದಿ ಉಪಬರ್ಹಣ
ಆ ರೂಪದಲ್ಲಿನ ತಮೋಭಿಮಾನಿನಿ ದುರ್ಗೆಯ ನಾನೀಗ ನಮಿಸುವೆನು
ಸೋಪಾನಪೂರ್ವಕೆ ಆತ್ಮನ ನಮಿಸುತ ದಕ್ಷಿಣಕ್ಕಾ ಅಂತರಾತ್ಮನನು
ಸೋಪಾನಪಶ್ಚಿಮಕೆ ಪರಮಾತ್ಮ ಉತ್ತರಕೆ ಜ್ಞಾನಾತ್ಮಗೀಗ ನಾ ನಮಿಸುವೆನು
ರಮಾರೂಪದೆಂಟ್ದಳ ಕಮಲದ ದಳದಲ್ಲಿ ಪೂರ್ವಾದಿ ಆ ಎಂಟು ದಿಕ್ಕಿನಲಿ
ಕ್ರಮವಾಗಿ ತಾವ್ನಿಂದು ಹರಿಸೇವೆ ಮಾಡುವ ಉತ್ತಮ ಶಕ್ತಿಯರ ಪೂಜಿಸುವೆ
ಛತ್ರವ ಧರಿಸಿಹ ವಿಮಲೆಯು ಮತ್ತಿನ್ನು ಚಾಮರ ಹಿಡಿದಿಹ ಉತ್ಕರ್ಷಿಣೀ
ಉತ್ತಮ ವ್ಯಜನಧಾರಿಣಿ ಜ್ಞಾನೆಯ ದರ್ಪಣ ತೋರ್ವಂಥ ಕ್ರಿಯೆಯನ್ನು
ಗಾನವ ಒಪ್ಪಿಪ ಯೋಗಳ ನರ್ತನ ಅರ್ಪಿಪ ಪ್ರಹ್ವೆಯ ಮೇಲಿನ್ನ
ತಾನವಳು ವಾದ್ಯವ ನುಡಿಸಿಪ್ಪ ಸತ್ಯಳ ಸ್ತೋತ್ರವ ಮಾಳ್ಪಂಥ ಈಶಾನೆಯ
ಈಪರಿ ಸೇವೆಯ ಮಾಳ್ಪರ ಮಧ್ಯದಿ ಕರ್ಣಿಕೆಯಲ್ಲನುಗ್ರಹಳನ್ನು ನಾ
ಆ ಪರಮಾತ್ಮನ ರೂಪಗಳಿನ್ನುತ ಅನುಗ್ರಹನಾಮದ ಶಕ್ತಿವಂತ
ಸಾಸಿರ ಹೆಡೆಗಳ ಬಿಚ್ಚಿ ತಾ ಬೆಳಗಿಹ ಹಾಸಿಗೆಯಾಕಾರ ತಾಳುತ ತಾ
ಶ್ರೀಶಗೆ ಆ ಯೋಗಆಸನರೂಪದ ಶೇಷನ್ನನಂತನ್ನ ನಮಿಸುವೆನು
ಶೇಷನ್ನ ಮೇಲಿನ್ನು ಚಿತ್ರದ ಆಸನ ರೂಪನೇ ತಾನಾಗಿ ಇರುತಿರುವ
ಶ್ರೀಶನ ಅರಸಿಯ ಶ್ರೀರಮಾದೇವಿಯ ನಮಿಸುತ ಹೂಗಳ ಅರ್ಪಿಸುವೆ

## ಆವಾಹನೆ

ಉದಿಸಿದ ಸೂರ್ಯನ ಹೊಳಪನು ಬೀರುವ ಆ ಸಚ್ಚಿದಾನಂದಶರೀರ
ಗದೆಶಂಖಚಕ್ರವ ಪದ್ಮವ ಹಿಡಿದಿಹನಾತನ್ನ ಮನದಲಿ ಧ್ಯಾನಿಸುವೆ
ಸಿರಿದೇವಿ-ಧರೆದೇವಿ ಅಪ್ಪುಗೆಯಿಂದ ತಾ ಒಪ್ಪುತಲಿರುವನು ಸ್ವಾಮಿಯುವ
ಮೆರೆಯುತಲಿರುವನು ತನ್ನಿತರ ಮೂರ್ತಿಗಳ್ಮಧ್ಯದಿ ಬಲುಬಲು ಕಾಂತಿಯಲಿ
ಸೇವಿಸುತಿಹರಲ್ಲಿ ಶಿವವಾಯುಬ್ರಹ್ಮರು ಶೇಷನು ಗರುಡನು ಮತ್ತಿಂದ್ರನು
ಭಾವದಿಂ ಭಕ್ತಿಯಿಂ ಬಲುಬಲು ಹಿತದಿಂದ ಆನಿತ್ಯ- ಆಪೂರ್ಣ ಶಕ್ತನನು
ಕೆಳಗಡೆಗ್ವಾಲಿಹ ಹೃತ್ಪದ್ಮವೊಗ್ಗಿಯ " ಯಂ " ಎಂಬ ವಾಯುಬೀಜಮಂತ್ರ
ಒಲವಿಂದ ಪಠಿಸುತ ಮೇಲ್ಮೊಗವಾಗಿಸಿ ಜ್ಞಾನದ ಸೂರ್ಯನಿಂ ಅರಳಿಸುವೆ



ಆ ಕಮಲಕರ್ಣಿಕೆ ಪೀಠವ ಮಾಡಿಹ ಉತ್ಪತ್ತಿಯಿಲ್ಲದ ಸ್ವಾಮಿಯ ನಾ
ಆ ಕಮಲನಾಭನ ಲಕ್ಷ್ಮೀನಾರಾಯಣನ ಆ ಬಿಂಬಮೂರ್ತಿಯ ಪರಮಾತ್ಮನ
ಆ " ಉದ್ಯದ್ ಭಾಸ್ವತ್ " ಇತ್ಯಾದಿ ಸ್ತೋತ್ರವ ಪಠಿಸುತ ಹೂತುಲಸಿ ಸಹಿತದಿ
ಆ ಉಪಮೆಯಿಲ್ಲದನ " ಆತ್ಮಾ ದೇವಾನಾಂ "[35] ಇತಿ ಋಕ್ಕೊಂದ ಪಠಿಸುತ
ಜಪಿಸುತ ಆ ಮೂಲಮಂತ್ರವ ನಾನೀಗ ಹೃತ್ಪದ್ಮದಲ್ಲಿಹ ಲಕ್ಷ್ಮೀಶಗೆ [ಧ್ಯಾನಿಸುವೆ
ಉಪಚಾರದಿಂದಲಿ ಪೀಠದ ಪ್ರತಿಮೆಗೆ "ನಿನ್ನನಾವಾಹಿಪೆ" ಎನ್ನುತಲಿ
ಪ್ರಾರ್ಥಿಸಿ ನಾನಿನ್ನು " ಏಹ್ಯೇಹಿ "[36] ಎನ್ನುತ ಆವಾಹನಾದಿ ಆಮುದ್ರೆಯ
ಅರ್ತಿಯಿಂ ಆ ಮೂಲಮಂತ್ರದಿಂ ತೋರಿಸಿ ಸ್ವಬಿಂಬನನ್ನೀಗ ಆವಾಹಿಪೆ
ಈ ಪೂಜೆ "ಯಾಗ"ವು[37] ಇದು ಮುಗಿವತನಕ ನೀ ಈ ಪ್ರತಿಮೆಯಲ್ಲಿರು ಜನಾರ್ದನ
ಈ ಪೂಜೆ ಕೊಂಡು ನೀ ಭಕ್ತನೆಂದೆನ್ನನು ಬಿಡದಂತೆ ಶ್ರೀಹರಿ ಪಾಲಿಪುದು
ಆವಾಹನ ಸ್ಥಾಪನ ಸನ್ನಿಧಿ ಸನ್ನಿರೋಧನ ಸಮ್ಮುಖೀಕರಣಂಗಳ[38]
ಅವಗುಂಠನವೆಂಬ ಆಮುದ್ರೆ ತೋರಿಸಿ ಸ್ನಾನಕೆ ಏಳೆಂದು ಬೇಡುವೆನು
[ಇತರರ ಪರವಾದ ಪೂಜೇಲಿ ಸೂರ್ಯನ ಒಳಗಣ ಹರಿಯ ಆವಾಹಿಪೆ[39]
ರಾತ್ರಿಲಿ ಆ ಶುಕ್ಲಪಕ್ಷದಿ ಚಂದ್ರನ ಅಗ್ನಿಯ ಆ ಕೃಷ್ಣಪಕ್ಷದಲಿ[40]

---

35 ಆತ್ಮಾ ದೇವಾನಾಂ ಭುವನಸ್ಯ ಗರ್ಭೋ ಯಥಾವಶಂ ಚರತಿ ದೇವ ಏಷಃ ।
ಘೋಷಾ ಇದಸ್ಯ ಶೃಣ್ವಿರೇ ನ ರೂಪಂ ತಸ್ಮೈ ವಾತಾಯ ಹವಿಷಾ ವಿಧೇಮ ॥

36 ಏಹ್ಯೇಹಿ ಮಮ ಹೃತ್ಪದ್ಮ—ಸ್ಥಿತ ಶ್ರೀಪುರುಷೋತ್ತಮ ।
ಆವಾಹಯಾಮಿ ಪೀಠೇ ತ್ವಾಂ ಪ್ರತಿಮಾಯಾಂ ರಮಾಪತೇ ॥

37 ಯಾಗಾವಸಾನಪರ್ಯಂತ—ಮತ್ರ ಸ್ಥಿತ್ವಾ ಜನಾರ್ದನ ।
ಭಕ್ತಸ್ಯ ಮಮ ಪೂಜಾ ತ್ವಂ ಗೃಹೀತ್ವಾ ಪಾಹಿ ಮಾಂ ವಿಭೋ ॥

38 ಓಂ ನಾರಾಯಣಂ ಆವಾಹಯಾಮಿ – ಆವಾಹಿತೋ ಭವ
ಓಂ ನಾರಾಯಣಂ ಸ್ಥಾಪಯಾಮಿ – ಸಂಸ್ಥಾಪಿತೋ ಭವ
ಓಂ ನಾರಾಯಣಂ ಸನ್ನಿಧಾಪಯಾಮಿ—ಸನ್ನಿಹಿತೋ ಭವ
ಓಂ ನಾರಾಯಣಂ ಸನ್ನಿರೋಧಯಾಮಿ—ಸನ್ನಿರುದ್ಧೋ ಭವ
ಓಂ ನಾರಾಯಣಂ ಸಮ್ಮುಖಯಾಮಿ — ಸಮ್ಮುಖೋ ಭವ
ಓಂ ನಾರಾಯಣಂ ಅವಗುಂಠಯಾಮಿ — ಅವಗುಂಠಿತೋ ಭವ
ಓಂ ನಾರಾಯಣಂ ಪ್ರಸಾದಯಾಮಿ— ಪ್ರಸನ್ನೋ ಭವ

39 ಧ್ಯೇಯಸ್ಸದಾ ಸವಿತೃಮಂಡಲ ಮಧ್ಯವರ್ತೀ ನಾರಾಯಣಸ್ಸರಸಿಜಾಸನ ಸನ್ನಿವಿಷ್ಟಃ ।
ಕೇಯೂರವಾನ್ಮಕರಕುಂಡಲವಾನ್ ಕಿರೀಟೀ ಹಾರೀ ಹಿರಣ್ಮಯವಪುರ್ಧೃತಶಂಖಚಕ್ರಃ ॥

40 ಅಂಗಾರವರ್ಣಮಭಿತೋಽಂಡ ಬಹಿಃ ಪ್ರಭಾಭಿ
ರ್ವ್ಯಾಪ್ತಂ ಪರಶ್ವಧ ಧನುರ್ಧರಮೇಕವೀರವ್ ।
ಧ್ಯಾಯೇದಜೇಶ ಪುರುಹೂತಮುಖೈಸ್ತುವದ್ಭಿ-
ರಾವೀತಮಾತ್ಮಪದವೀಂ ಪ್ರತಿಪಾದಯಂತವ್ ॥

ಒಳಗಣ ಶ್ರೀಹರಿಯು ಆವಾಹಿಸುತ್ತೀಗ ನಾ ಮುದದಿಂದಲೆಲ್ಲ ಮುದ್ರೆಗಳ
ನಳಿನಾಕ್ಷ ಶ್ರೀಹರಿ ಆತನ ಪೂಜೆಗೆ ತೋರಿಸುತ್ತಿನ್ನಲ್ಲಿ ಪೂಜಿಸುವೆ
ಈಪರಿ ಸ್ನಾನಕೆ ಏಳೆಂದು[41] ಶ್ರೀಹರಿಯು ಪ್ರಾರ್ಥಿಸಿ ಸ್ನಾನದ ಮನೆಗೊಯ್ಯೆ
ನಾ ಪಾದುಕಾದ್ವಯು ಅರ್ಪಿಪೆ "ಇದಂ ವಿಷ್ಣುರ್ವಿಚಕ್ರಮೇ"[42] ಎಂಬ ಋಙ್ಮಂತ್ರದಿ
ಸ್ನಾನದ ಮನೆಗಿನ್ನು ಬಂದಂಥ ಆ ನಾರಾಯಣನನ್ನೀ ನಾನೀಗ ಧ್ಯಾನಿಸುತ
ಸ್ನಾನದ ಪೀಠದಿ "ಭದ್ರಂ ಕರ್ಣೇಭಿಃ"[43] ಋಙ್ಮಂತ್ರದಿಂದಲಿ ಸ್ಥಾಪಿಸುವೆ
ಧ್ಯಾನಿಸುತಾತನ ಆ ಮೊದಲ್ತೋರಿದ ಆವರ್ಮುದ್ರೆ ಮತ್ತೀಗ ತೋರಿಸುತ
"ಸ್ನಾನಕೆ ದೇವನೆ ಬೇಗ ನೀನೇಳಯ್ಯ" ಎನ್ನುತ ಭಕ್ತಿಯಿಂ ಪ್ರಾರ್ಥಿಸುವೆ

## ಅರ್ಘ್ಯ, ಪಾದ್ಯ ಇತ್ಯಾದಿ ಉಪಚಾರ

ಜಪಿಸುತ ನಾ ಮೂಲಮಂತ್ರವ ಹರಿಗೆ ಅರ್ಘ್ಯವ[44] ಪಾದ್ಯವ[45] ಆಚಮನವ[46]
ಅರ್ಪಿಸುತಲವನೆಲ್ಲ ಒಪ್ಪಿಸೆ ಮಧುಪರ್ಕ[47] ನಾನೀಗ ಬೇಗನೆ ತೊಡಗುವೆ

---

41 ಉತ್ತಿಷ್ಠ ಬ್ರಹ್ಮಣಸ್ಪತೇ ದೇವಯಂತಸ್ತ್ವೇಮಹೇ।
ಉಪ ಪ್ರ ಯಂತು ಮರುತಃ ಸುದಾನವ ಇಂದ್ರ ಪ್ರಾಶೂರ್ಭವಾ ಸಚಾ॥
42 ಇದಂ ವಿಷ್ಣುರ್ವಿ ಚಕ್ರಮೇ ತ್ರೇಧಾ ನಿ ದಧೇ ಪದಮ್। ಸಮೂಳ್ಹಮಸ್ಯ ಪಾಂಸುರೇ॥
43 ಭದ್ರಂ ಕರ್ಣೇಭಿಃ ಶೃಣುಯಾಮ ದೇವಾ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ।
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿ—ರ್ವ್ಯಶೇಮ ದೇವಹಿತಂ ಯದಾಯುಃ॥
44 ಆಪೋ ಹಿ ಷ್ಠಾ ಮಯೋ ಭುವಸ್ತಾ ನ ಊರ್ಜೇ ದಧಾತನ। ಮಹೇ ರಣಾಯ
ಚಕ್ಷಸೇ। ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇ ಹನಃ। ಉಶತೀರಿವ ಮಾತರಃ।
ತಸ್ಮಾ ಅರಂ ಗಮಾಮವೋ ಯಸ್ಯ ಕ್ಷಯಾಯ ಜಿನ್ವಥ। ಆಪೋ ಜನಯಥಾ ಚ ನಃ॥
—ಲಕ್ಷ್ಮೀಹಸ್ತೇನ ಇದಂ ತೇ ಅರ್ಘ್ಯಮಿತಿ ಅರ್ಘ್ಯಂ॥
45 ಅಸ್ಮಿನ್ ರಾಷ್ಟ್ರೇ ಶ್ರಿಯಮಾವೇಶಯಾಮ್ಯತೋ ದೇವೀಃ ಪ್ರತಿಪಶ್ಯಾಮ್ಯಾಪಃ। ದಕ್ಷಿಣಂ
ಪಾದಮವನೇನಿಜೇಽಸ್ಮಿನ್ ರಾಷ್ಟ್ರ ಇಂದ್ರಿಯಂ ದಧಾಮಿ। ಸವ್ಯಂ ಪಾದಮವನೇನಿಜೇ
ಽಸ್ಮಿನ್ ರಾಷ್ಟ್ರ ಇಂದ್ರಿಯಂ ವರ್ಧಯಾಮಿ। ಪೂರ್ವಮನ್ಯಮಪರಮನ್ಯಂ ಪಾದಾವವನೇ
ನಿಜೇ। ದೇವಾ ರಾಷ್ಟ್ರಸ್ಯ ಗುಪ್ತ್ಯಾ ಅಭಯಸ್ಯಾವರುದ್ಧ್ಯೈ। ಆಪಃ ಪಾದಾವನೇಜನೀ-
ರ್ದ್ವಿಷಂತಂ ನಿರ್ದಹಂತು ಮೇ॥
ಸರಸ್ವತೀ ಹಸ್ತೇನ ಇದಂ ತೇ ಪಾದ್ಯಮಿತಿ ಪಾದ್ಯಂ॥
46 ಶಂ ನೋ ದೇವೀರಭಿಷ್ಟಯ ಆಪೋ ಭವಂತು ಪೀತಯೇ। ಶಂ ಯೋರಭಿ ಸ್ರವಂತು
ನಃ। ಈಶಾನಾ ವಾರ್ಯಾಣಾಂ ಕ್ಷಯಂತೀಶ್ಚರ್ಷಣೀನಾಂ ಅಪೋ ಯಾಚಾಮಿ
ಭೇಷಜಂ। ಅಪ್ಸು ಮೇ ಸೋಮೋ ಅಬ್ರವೀದಂತರ್ವಿಶ್ವಾನಿ ಭೇಷಜಾ ಅಗ್ನಿಂ ಚ ವಿಶ್ವ-
ಶಂಭುವಂ। ಆಪಃ ಪೃಣೀತ ಭೇಷಜಂ। ವರೂಥಂ ತನ್ವೇಽಮಮ ಜ್ಯೋಕ್ಚ ಸೂರ್ಯಂ
ದೃಶೇ॥ ರತಿಹಸ್ತೇನ ಇದಂ ತೇ ಆಚಮನಮಿತಿ ಆಚಮನಂ॥
47 ಓಂ ಮಧು ವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ। ಮಾಧ್ವೀರ್ನಃ



ಒಪ್ಪಿಸುತಲಿರುವೆನು ಕೈ-ಮುಖ ತೊಳೆಯಲು ಅರ್ಘ್ಯವನಿದನು ಆತನಿಗೆ
ಅಪ್ಪ ನಾರಾಯಣ ಹೆಚ್ಚಿನ ಹೆದ್ದೈವ ಸ್ವಚ್ಛನೆ ಸುಂದರನೆ ಎನ್ನುವೆನು
ಕೊಡುವಳು ಈ ಅರ್ಘ್ಯ ಸಾಕ್ಷಾತು ಶ್ರೀರಮೆ ಎನ್ನುತ ಭಾವಿಸಿ ನೀಡುತಿಹೆ
ಹಿಡಿಯುತ ಅದನೀಗ ಮಾಡು ಸಂಮಾರ್ಜನೆ ಸಡಗರ ದೈವವೆ ಶ್ರೀಹರಿಯೆ
ಪಾದ್ಯವನಿದನೀಗ ಕಾಲ್ಗಳ ತೊಳೆಯಲು ದೇವಿ ಸರಸ್ವತಿ ಇತ್ತಿಹಳು
ಆದ್ಯ-ಸಂಕರ್ಷಣ ಈ ಭಾವ ಒಪ್ಪುತ ಕಾಲ್ಗಳ ತೊಳೆಯಲು ಬಾರಯ್ಯ ನೀ
ಮನ್ಮಥರಾಣಿಯು ರತಿದೇವಿ ತಾನೀಗ ಆಚಮನವಿದನೀಗ ನೀಡುವಳು
ಮನ್ಮನದೀಭಾವ ಮನ್ನಿಸಿ ಪ್ರದ್ಯುಮ್ನ ಆಚಮನವನ್ನೀಗ ಮಾಡುವುದೊ
ಶ್ರೀಗರುಡ ತಾನೀಗ ಪಾದುಕೆ ಜೊತೆಯನು ಒಪ್ಪಿಸುತಿರುವನು ಎನ್ನುವೆನು
ಹೇ ಗರುಡಗಮನ ಸ್ವಾಮಿ ಸಂಕರ್ಷಣ ಧರಿಸಯ್ಯ ಕಾಲಲ್ಲಿ ಅವನೀಗ ನೀ
ಮಧುಪರ್ಕವಿದನೀಗ ವಿಧಿಯೇ ತಾ ಕೊಟ್ಟಿಹ ಎನ್ನುವ ಭಾವವ ಮನ್ನಿಸು ನೀ
ಮಧುಬೆರೆತ ನೀರಿದನ ಅನಿರುದ್ಧದೇವನೆ ಹಿಡಿಯುತ ಕೈಯಲಿ ಸ್ವೀಕರಿಸು
ಮರುಆಚಮನಕ್ಕೀಗ[48] ಶ್ರೀಶಾಂತಿ ನೀರನು ಕೊಡುವಳು ಎನ್ನುತ ಭಾವಿಸುತ
ಸುರಸುಖಕಾರಣ ಶ್ರೀಮನ್ನಾರಾಯಣ ಆಚಮನ ಮತ್ತೀಗ ಮಾಡುವುದೋ
ಶೇಷನ-ವರಹನ ಮಂಡೂಕರೂಪದ ಆಸನವನ್ನೀಗ ಚಿಂತಿಸುತ
ದೋಷಾತಿದೂರನೆ ಅಶೇಷ ಕರುಣೆಯೆ ಶ್ರೀಶೇಷಪೀಠನೆ ಕರೆಯುತಿಹೆ
ಇಷ್ಟಳು ನಿನಗಾದ ತುಳಸಿಯ ಪತ್ರವ ಆಸನಕ್ಕಿದೀಗ ಒಪ್ಪಿಸುವೆ
'ಶ್ರೀಷ್ಮನೆ ತುಷ್ಟಿಯ ತೋರುತ ಕೂಡಿಲ್ಲಿ' ಎನ್ನುತ ನಿನ್ನನು ಬೇಡುವೆನು
ಚಿನ್ನದ ಪೀಠವು ಇವೆಂದು ಭಾವಿಸಿ ಮನ್ಮಥಜನಕನೆ ಆಸನದಿ
ಘನ್ನ-ಸಂಪನ್ನನೆ ಬೇಗನೆ ಕೂಡಯ್ಯ ಉನ್ನತ ದಯವನು ತೋರುತಲಿ

## ಪಂಚಾಮೃತ ಅಭಿಷೇಕ

ಹಾಲಿ "ಗಾಪ್ಯಾಯಸ್ವ...."[49] ಮೊಸರಿಗೆ "ದಧಿಕ್ರಾವ್ಣೋ...."[50]
ತುಪ್ಪಕೆ ಆ "ಘೃತಂಮಿಮಿಕ್ಷೇ...."[51]

---

ಸಂತ್ವೋಷಧೀಃ। ಮಧು ನಕ್ತಮುತೋಷಸೋ। ಮಧುಮತ್ಪಾರ್ಥಿವಂ ರಜಃ। ಮಧು
ದ್ಯೌರಸ್ತು ನಃ ಪಿತಾ। ಮಧುಮಾನ್ನೋ ವನಸ್ಪತಿರ್ಮಧುಮಾಂ ಅಸ್ತು ಸೂರ್ಯಃ।
ಮಾಧ್ವೀರ್ಗಾವೋ ಭವಂತು ನಃ॥ ಪಿತಾಮಹ ಹಸ್ತೇನ ಮಧುಪರ್ಕಮಿತಿ ಮಧುಪರ್ಕಂ
48 ಶಂನೋ ದೇವೀರಭಿಷ್ಟಯ ಶಾಂತಿಹಸ್ತೇನ ಪುನರಾಚಮನಮಿತಿ ಆಚಮನಂ
49 ಓಂ ಆಪ್ಯಾಯಸ್ವ ಸಮೇತು ತೇ ವಿಶ್ವತಃ ಸೋಮ ವೃಷ್ಣ್ಯಂ। ಭವಾ ವಾಜಸ್ಯ ಸಂಗಥೇ॥
50 ಓಂ ದಧಿಕ್ರಾವ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ। ಸುರಭಿ ನೋ ಮುಖಾ-
ಕರತ್ಪ್ರಣ ಆಯೂಂಷಿ ತಾರಿಷತ್॥
51 ಓಂ ಘೃತಂ ಮಿಮಿಕ್ಷೇ ಘೃತಮಸ್ಯ ಯೋನಿ ಘೃತೇ ಶ್ರಿತೋ ಘೃತಮ್ವಸ್ಯ ಧಾಮ।
ಅನುಷ್ವಧಮಾ ವಹ ಮಾದಯಸ್ವ ಸ್ವಾಹಾಕೃತಂ ವೃಷಭ ವಕ್ಷಿ ಹವ್ಯಮ್.

ಮೇಲಿನ್ನು ಜೇನಿನತುಪ್ಪಕೆ " ಮಧುವಾತಾ"[52] ಸಕ್ಕರೆ" ಗ್ಸ್ವಾದುಃಪವಸ್ವಾ"[53]ದಿ
ಪಂಚಾಮೃತಸೂಕ್ತವ ಮೂಲಮಂತ್ರಸಹ ಪಠಿಸುತಲೀಗ ನಾ ಅಭಿಷೇಕವ
ಪಂಚಾಮೃತದ್ರವ್ಯದಿಂದಲಿ ಮಾಡುವೆ ಏಕೇಕ ಆರತಿ ಸಹಿತದಲಿ

## ಹಾಲಿನ ಅಭಿಷೇಕ

ನಿನ್ನೊಳು ಪ್ರಾಣನು ಅವನೊಳು ಗೋವಿಂದ ಉನ್ನತ ಸಮರ್ಥ ಹೇ ಸೋಮನೆ
ನಿನ್ನಯ ಸಾಮರ್ಥ್ಯ ಮುನ್ನಿನ್ನು ಹೆಚ್ಚಲಿ ಹೆಚ್ಚುತಲೆಂದೆಂದೂ ತಾನಿರಲಿ
'ಮುನ್ನೀಯೋ ಬಿಡದೀಗ ನಿನ್ನಯ ಸಾಮರ್ಥ್ಯ
ಮೇಣ್ ವೃದ್ಧಿಯನ್ನವ ನಮಗೀಗ'
ಎನ್ನುತ್ತಲಿಹುದೀ ಸೂಕ್ತವು ಎನ್ನುತ ಹಾಲಿನ ಸ್ನಾನವ ಒಪ್ಪಿಸುವೆ

## ಮೊಸರಿನ ಅಭಿಷೇಕ

ಶ್ರೀಮುಖ್ಯಪ್ರಾಣನು ವಾಮನನೊಡಗೂಡಿ ಇಹನಯ್ಯ ನಿನ್ನೊಳು 'ದಧಿಕ್ರ'ನೇ
ಸ್ವಾಮಿಯೇ ಜಯವಂತ ವ್ಯಾಪ್ತನೇ ವೇಗನೇ ಎನ್ನುತಲವನನು ಸ್ತುತಿಸುತಲಿ
ಹೆಚ್ಚಿನ ಪರಿಮಳ ನಮ್ಮಯ ಕಣ್ಗಳು ಇಂದ್ರಿಯ ಮುಖಕೆಲ್ಲ ನೀ ತರುತ
ಹೆಚ್ಚಿಸು ನಮ್ಮಾಯು ಎನ್ನುತ ವಾಮನಗೆ ಮೊಸರಿನ ಸ್ನಾನವ ಒಪ್ಪಿಸುವೆ

## ತುಪ್ಪದ ಅಭಿಷೇಕ

ಒಪ್ಪುವ ಮಾರುತ ನಿನ್ನೊಳಗಗ್ನಿಯೆ ಅವನೊಳು ಶ್ರೀಪರಶುರಾಮನು ತಾ
ತುಪ್ಪವೇ ಕಾರಣ ತುಪ್ಪವೇ ಆಶ್ರಯ ಹೇ ಸತ್ಫಲದಾತನೇ ಹೇ ಅಗ್ನಿಯೇ
ಅಮರರಿಗೀವೆನು ಹವಿಸ್ಸನು ನಾನೀಗ " ಸ್ವಧಾ ಸ್ವಾಹಾ " ಎನ್ನುತಲಿ
ಘಮಘಮ ಪರಿಮಳ ಬೀರಿಹ ತುಪ್ಪದ ಅಭಿಷೇಕ ದೇವಂಗೆ ಒಪ್ಪಿಸುವೆ

## ಜೇನುತುಪ್ಪದ ಅಭಿಷೇಕ

ಶ್ರೀಮಧುಸೂದನ ದೇವನ ದಯದಿಂದ ಸುಜ್ಞಾನಿಸತ್ಕರ್ಮನಿರತರಿಗೆ
ಆ ಮರುತ ಹಿತ ತರಲಿ ನದಿನೀರು ಸಿಹಿಯಿರಲಿ ಸಸ್ಯದಿ ಪಥ್ಯವೇ ತೋರಿರಲಿ

---

52 ಓಂ ಮಧುವಾತಾ ಋತಾಯತೇ .. (ಪಾದಟಿಪ್ಪಣಿ ೪೭ ನೋಡಿ)

53 ಓಂ ಸ್ವಾದುಃ ಪವಸ್ವ ದಿವ್ಯಾಯ ಜನ್ಮನೇ ಸ್ವಾದುರಿಂದ್ರಾಯ ಸುಹವೀತು ನಾಮ್ನೇ।
ಸ್ವಾದುರ್ಮಿತ್ರಾಯ ವರುಣಾಯ ವಾಯವೇ ಬೃಹಸ್ಪತಯೇ ಮಧುಮಾಂ ಅದಾಭ್ಯಃ॥



ರಾತ್ರಿಯ ಮುಂಬೆಳಗು ಹಿತಕರವಾಗಿರಲಿ ಭೂಮಿಯ ಧೂಳಲಿ ಹಿತವಿರಲಿ
ಪಿತೃಸಮ ದ್ಯುಲೋಕ ಹಿತದಿ ತಾನಿರುತಿರಲಿ ವನಸ್ಪತಿ ಸೂರ್ಯರು ಹಿತರಿರಲಿ
ಗೋವು ತಾವೆಲ್ಲವೂ ಸವಿಸವಿ ಸಿಹಿಹಾಲ ಕೊಡುತಲಿ ಇರಲೆಂದೂ ಎನ್ನುತಲಿ
ದೇವ ಗೋಪಾಲನೆ ಶ್ರೀಮಧುಸೂದನ ಅಭಿಷೇಕಕಿದಕೋ ಜೇನಸಿಹಿ

## ಸಕ್ಕರೆಯ ಅಭಿಷೇಕ

ದೇವನೆ ಸೋಮನೆ ನಿನ್ನೊಳು ಪ್ರಾಣನೋ ಅವನೊಳಗಿಹನೋ ಅಚ್ಯುತನು
ಪ್ರವಹಿಸು ರಸದೋರು ಆ ಸುರರೆಲ್ಲರ್ಗೆ ಚಂದದ ಹೆಸರಿನ ಇಂದ್ರನಿಗೆ
ರುಚಿಕರ ನೀನಯ್ಯ ಹಿಂಸಕನಲ್ಲವೊ ರಸಭರಿತನಾಗಿ ನೀ ಪ್ರವಹಿಸುತ
ರುಚಿರಸ ತೋರಯ್ಯ ಮಿತ್ರಗೆ ವರುಣಗೆ ವಾಯುಬೃಹಸ್ಪತಿಗಳಿಗೀಗ ನೀ
ಈ ಪರಿ ಸೋಮನ ಬೇಡುತ ನಾನೀಗ ಚ್ಯುತಿ ಇಲ್ಲದಂತಹ ದೇವನಿಗೆ
ಆ ಪರಿಪೂರ್ಣಗೆ ಸಕ್ಕರೆ ಸ್ನಾನವ ಉಕ್ಕುವ ಭಕ್ತಿಯಿಂದೊಪ್ಪಿಸುವೆ

## ಎಳನೀರಿನ ಅಭಿಷೇಕ[54]

'ಬೃಹಸ್ಪತಿದೇವನ ಅನುಗ್ರಹ ಪಡೆದಂಥ ಹಣ್ಣುಗಳುಳ್ಳಂಥ ಹಣ್ಣಿರದ-
ಆ ಹೂವ ಹೂವಿರದ ವನಸ್ಪತಿಯೌಷಧ ಪಾಪಗಳಿಂದೆಮ್ಮ ತಪ್ಪಿಸಲಿ'
ಬೃಹಸ್ಪತಿದೇವನ ಈಪರಿ ನೆನೆಯುತ ಈಗಲೇ ಒಡೆದಿಟ್ಟ ಸವಿಸವಿಯ
ಸಿಹಿಎಳೆತೆಂಗಿನ ನೀರನು ಸುರಿಸುವೆ ಸ್ನಾನವನಿದನೀಗ ಒಪ್ಪಿಸಿಕೋ

## ಶುದ್ಧೋದಕ ಸ್ನಾನ

ಶ್ರೀಲಕ್ಷ್ಮೀದೇವಿಯೇ ನೀರನು ಎರೆವಳು ನಿನಗೀಗ ಮಂಗಳ ಮಜ್ಜನಕೆ
ಶ್ರೀಲಕ್ಷ್ಮೀಕಾಂತನೇ ನಿನ್ನಯ ಪ್ರೇಮದ ಮಡದಿಯೇ ಮಾಡಿಪ ಸ್ನಾನವಿದು
ವೇದದ ಪಠಣೆಯು ಘಂಟೆಯ ಸನ್ನಾದ ಮೊಳಗುತಲಿಹುದ ಕೇಳಿಸಿಕೋ
ಸ್ವಾದದ ಉದಕವ ಕಲಶದಿಂ ಶಂಖಕೆ ಸುರಿಯುತ ನಿನಗೆ ಎರೆವೆನಿದೋ
ಶ್ರೀಪುರುಷಸೂಕ್ತವು ಎಂಬಂಥ ಆ ಮಹಾಮಂತ್ರವ ಪಠಿಸುತ ನಾನೀಗ
ಆ ಪರಿಶುದ್ಧವು ಆದಂಥ ಉದಕವ ಸಂತಸದಿಂದೆರೆಯೆ ಧನ್ಯನು ನಾ

---

54 ಓಂ ಯಾಃ ಫಲಿನೀರ್ಯಾ ಅಫಲಾ ಅಪುಷ್ಪಾ ಯಾಶ್ಚ ಪುಷ್ಪಿಣೀಃ । ಬೃಹಸ್ಪತಿಪ್ರಸೂತಾ.
ಸ್ತಾ ನೋ ಮುಂಚಂತ್ವಂಹಸಃ॥
ಓಂ ಆಪೋ ಹಿ ಷ್ಠಾ ಮಯೋಭುವ—ಸ್ತಾನ ಊರ್ಜೇ ದಧಾತನ
ಓಂ ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ।
ತನ್ನೋ ವಿಷ್ಣುಃ ಪ್ರಚೋದಯಾತ್॥

## ಪುರುಷಸೂಕ್ತ[55]ಭಾವ

ಸಾವಿರಸಾವಿರ ಕಣ್ತಲೆ ಕಾಲ್ಗಳು ವೇದೋಕ್ತಪುರುಷನೆ ನಿನಗಯ್ಯ
ಈ ವಸುಧೆ ಸುತ್ತಿಹೆ ಬ್ರಹ್ಮಾಂಡ ಮೀರಿಹೆ ಹತ್ತಂಗುಲದಿ ಪ್ರಕೃತಿಯ ಮೀರಿರುವೆ
ಸರ್ವವೂ ನೀನಾಗಿ ಅಂದಿಂದೂ ಎಂದೆಂದೂ ಅನ್ನಾದೀ ಜಗವ ಮೀರಿರುವೆ
ಸರ್ವೇಶ ಮುಕ್ತೇಶ ಕಾಲಕ್ಕೆ ಕಾಲನೆ ಮುಕ್ತರಿಗೊಡೆಯನಾದವನೆ
ಉನ್ನತ ಮಹಿಮನೆ ಚೋದ್ಯನೆ ನಿನ್ನಿಂದ ಭಿನ್ನರು ಜೀವರು ಪ್ರತಿಬಿಂಬರು
ಘನ್ನ ಅವ್ಯಾಕೃತ ಈಶನೆ ನಿನ್ನದೋ ವೈಕುಂಠ ಪಾಲಾಬ್ಧಿ ಶ್ವೇತದ್ವೀಪ
ಮೂರ್ನೆಲೆಯಲಿದ್ದು ಭೂಮಿಗೂ ಬಂದಿದ್ದು ಎಲ್ಲದರೆಲ್ಲೆಲ್ಲೂ ನಿಂದಿಹ ನೀ
ಇರುತಗ್ನಿರೂಪದಿ ಮನ-ಮನೆ-ಸಂಸಾರಿ ಮುಕ್ತರಲ್ವ್ಯಾಪ್ತ ನೀ ಆಧಾರನು
ನಿನ್ನಿಂದ ಬಂದಂಥ ಬ್ರಹ್ಮಾಂಡದಭಿಮಾನಿ ರುದ್ರನಿಗ್ಹಿರಿಯ ನಾಲ್ಮೊಗನು
ನಿನ್ನ ಆಧೀನಸೊ ಎಲ್ಲೆಲ್ಲ ಲೋಕವ ಸುರಗಣ ಮೆಟ್ಟುವ ಒಡೆಯನವ
ವಸಂತಋತು ತುಪ್ಪ ಋತುಗ್ರೀಷ್ಮ ಸಮಿತ್ತು ಶರದೃತು ತಾನದು ಹವಿಸ್ಸಲ್ಲಿ
ಈಶನ ಮೆಚ್ಚಿಸೆ ಮೋಕ್ಷವ ಪಡೆಯಲು ದಿವಿಜರು ಮಾಡಿದ ಯಜ್ಞದಲ್ಲಿ
ಇಂದ್ರರುದ್ರರ್ಹಿರಿಯ ಬ್ರಹ್ಮನ ಪ್ರೋಕ್ಷಿಸಿ ಬೇಕಾದ ಸಾಧನಸಹಿತವದ
ವಂದ್ಯರು ಮುನಿಗಳು ಯೋಗ್ಯತೆಯನುಗುಣ ಮಾಡಲು ಈಶನ ಪ್ರೇರಣೆಲಿ
ಯಜ್ಞನಿಂದಾಗಲ್ಲಿ ಯಜ್ಞದಿ ಹೋಮಕೆ ದಧ್ಯಾಜ್ಯವಸ್ತು ಹುಟ್ಟಿದುವು
ಯಜ್ಞನಿಂದಾಕಾಶ ಅಡವಿಯ ಗ್ರಾಮದ ಖಗಮೃಗವೆಲ್ಲವೂ ಹುಟ್ಟಿದುವು
ಯಜ್ಞದ ಫಲ ಉಂಬನಿಂದಲೇ ಬಂದವು ಋಗ್ಯಜುಸ್ಸಾಮಾದಿ ವೇದಗಳು
ಯಜ್ಞನಿಂ ಬಂದುವು " ಗಾಯತ್ರಿ " ಇತ್ಯಾದಿ ಛಂದಸ್ಸು ವೇದಾಭಿಮಾನಿಗಳು
ಒಂದೆಡೆ ಹಲ್ಲಿಹ ಮೇಲ್ಕೆಳಹಲ್ಲಿಹ ಕುದುರೆ ಕತ್ತೆ-ಹಸು ಬಂದವಕೋ
ಬಂದರು ನರರಲ್ಲಿ ಅವರಿಗೆ ವಸ್ತ್ರಕೆ ಕೂದಲ ಕುರಿ ಮೇಕೆ ಬಂದವಕೋ
ಕೇಳಲು "ಧ್ಯಾನದ ಯಜ್ಞದೀ ಪೂಜೆಯು ಕೊಂಡಂಥ ಯಜ್ಞನ ಮುಖದಿಂದ
ತೋಳ್ತೊಡೆ ಕಾಲಿಂದ ಹುಟ್ಟುತ ಬಂದಂಥ ವರ್ಗಗಳಾವುವು ? " ಎಂದೆನ್ನುತ
'ಬಂದರು ಮುಖದಿಂದ ಬ್ರಹ್ಮ-ಬ್ರಾಹ್ಮಣರು ತೋಳಿಂದ ಸ್ವಯಂಭೂ ಮನುಕ್ಷತ್ರಿಯ
ಬಂದರು ತೊಡೆಯಿಂದ ವಸುವಾಸ್ತುವೈಶ್ಯರು ಕಾಲಿಂದಲಶ್ವಿನಿ ಕೃತ್ಸ್ನಶೂದ್ರ
ಚಂದ್ರನು ಮನಸಿಂದ ಕಣ್ಣಿಂದ ವಿವಸ್ವಾನ ಸೂರ್ಯನು ತಾನಲ್ಲಿ ಬಂದನದೋ
ಇಂದ್ರನು ಅನಲನು ವೈಶ್ವಾನರ ಮತ್ತಿನ್ನು ಪ್ರಾಣನಿಂ ಬಂದನು ವಾಯುವು ತಾ
ಹೊಕ್ಕುಳಿಂದಾಕಾಶ ತಲೆಯಿಂದ ಸ್ವರ್ಗವು ಕಾಲಿಂದ ಭೂಮಿಯು ಕಿವಿಯಿಂದಲಿ
ದಿಕ್ಕುಗಳ್ಮಿಕ್ಕೆಲ್ಲ ಲೋಕವಂಗಾಂಗದಿಂ ಉಕ್ಕಿ ತಾ ಬಂದುವು ಯಜ್ಞನಿಂದ'

55 ಪರಿಶಿಷ್ಟ ನೋಡಿ



ಯಜ್ಞಕೆ ಸಮಿತ್ತು ಇಪ್ಪತ್ತುಮೇಲೊಂದು ಯಜ್ಞದ ಪಶುವು ಬ್ರಹ್ಮನವ
ಯಜ್ಞವನೀಪರಿ ಮೋಕ್ಷಪೇಕ್ಷೆಯಿಂ ಸುರಸಿದ್ಧಸಾಧ್ಯರು ಮಾಡಿದರು
ಸುರರೆಲ್ಲ ನಡೆಸಿದ ಪೂಜೆಯಿದಾಯಿತು ಲೋಕದಿ ಧರ್ಮಕೆ ಆಧಾರವು
ಸುರಗಣ ನಡೆದರು ಮೊದಲಂತೆ ಸ್ವರ್ಗಕೆ ತಮ್ಮಯ ಯಜ್ಞದ ಫಲದಿಂದ

### ಇತರ ಸೂಕ್ತ-ವರ್ಗ-ಋಕ್ಕು-ಸ್ತೋತ್ರ

ಅವಕಾಶವಿದ್ದಲ್ಲಿ ಮತ್ತಿನ್ನು ಜಪಿಸುವೆ ಆ " ವಿಷ್ಣು-ಘರ್ಮಾ "ದಿ[56] ಸೂಕ್ತಗಳ
ಅವಕಾಶವಿದ್ದಲ್ಲಿ " ಜಿತಂತೇ ಪುಂಡರೀಕಾಕ್ಷ "[57] ಆ ಸ್ತೋತ್ರವ ಜಪಿಸುವೆ ನಾ
ಈ ಮಧ್ಯೆ ಪಠಿಸುವೆ " ಪವಸ್ವ-ಸೋಮ ಮಂದಯನ್ "[58] ಎಂಬ ವರ್ಗವನು
ಆ ಮತ್ತೆ " ಯ ಇಂದೋಃ ಪವಮಾನಸ್ಯ "[59] ಮತ್ತಾ "ಸಮುದ್ರಾದೂರ್ಮಿ "[60]
ಸೂಕ್ತವನು

### ಒರಸುವಿಕೆ

ಅಭಿಷೇಕವೀಪರಿ ಮುಗಿಸುತ ಶ್ರೀ ಸಾಲಿಗ್ರಾಮದಿ ವಿಗ್ರಹದಿ ನಿಂದಿಹನ
ಶುಭಕರ ಒಣವಸ್ತ್ರದಿಂದ ನಾನೊರೆಸುತ ಪೂಜೆಯ ಪೀಠದಿ ಸ್ಥಾಪಿಸುವೆ
ಮುಗಿಸುತಲಭಿಷೇಕ ಧ್ಯಾನದ ಪೂರ್ವಕ ಮಾಡುವೆ ನಾನೀಗ ತತ್ತ್ವನ್ಯಾಸ
ಲಗುಬಗೆಯಿಂದಲಿ ನಂತರ ಮಾಡುವೆ ಧ್ಯಾನದಿಂ ಮಾತೃಕಾನ್ಯಾಸವನು

### ಅ ಲಂ ಕಾ ರ

### ವಸ್ತ್ರಸಮರ್ಪಣೆ

ಅರಿಶಿನಬಣ್ಣದ ವಸ್ತ್ರಗಳೆರಡ ಒಪ್ಪಿಸುತಲಿರುವೆನು ಖಗಗಮನ
ಗರುಡನೇ ನಿನಗಿದ ಈವನೆಂತೆನ್ನುತ ಚಿಂತಿಸುತವನಿದೊ ಒಪ್ಪಿಸುವೆ
'ಹೊದೆಯಲು ವಸ್ತ್ರವ ಹಾಲ್ಗಾಗಿ ಗೋವ್ಗಳ ಉತ್ತಮ ರಥವ ಅಶ್ವಗಳ[61]
ಉದರದ ನಿರ್ವಹಕೆ ಬೇಕಾದ ಹೊನ್ನನು' ಈಯಲಿ ಶ್ರೀವಾಯು ನಮಗೆನ್ನುತ

### ಉಪವೀತ ಸಮರ್ಪಣೆ

ಈ ಯಜ್ಞೋಪವೀತವು ಪವಿತ್ರತಮವಯ್ಯ ಪ್ರಜಾಪತಿ ಸಹವೇ ಹುಟ್ಟಿದುದೋ
ಆಯುವ ಹೆಚ್ಚಿಪ ಬಲ ತೇಜ ಹೆಚ್ಚಿಪ ಉತ್ತಮವಾದಿದ ಧರಿಸುವುದೋ[62]

56, 57, 58, 59, 60 ಪರಿಶಿಷ್ಟ ನೋಡಿ

61 ಅಭಿ ವಸ್ತ್ರಾ ಸುವಸನಾನ್ಯರ್ಷಾಽಭಿಧೇನೂಃ ಸುದುಘಾಃ ಪೂಯಮಾನಃ ।
ಅಭಿ ಚಂದ್ರಾ ಭರ್ತವೇ ನೋ ಹಿರಣ್ಯಾಽಭ್ಯಶ್ವಾನ್ ರಥಿನೋ ದೇವ ಸೋಮ ॥

62 ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ಸಹಜಂ ಪುರಸ್ತಾತ್ ।
ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ॥

## ಆಭರಣ-ಅಲಂಕಾರ ಸಮರ್ಪಣೆ

ಶ್ರೀಪರಶುರಾಮನೇ ನಿನ್ನಯ ಶರೀರ ಇಂದ್ರಿಯ ವೈಕಾಂತಿ ಹೊನ್ನಿನದೋ
ಆ ಪವಿತ್ರನಾದಗ್ನಿ ಒಳಗಿಹ ದೇವನೆ ಚಿನ್ನವು ಅನ್ನವು ನಿನ್ನವವೋ[63]
ಅರ್ಪಿಪೆ ಧ್ಯಾನದ ಪೂರ್ವಕ ನಿನಗಿದೋ ಅಂಗಾಂಗವೆಲ್ಲಕೆ ಅಲಂಕಾರವ
ಅರ್ಪಿಪೆ ಧ್ಯಾನದ ಪೂರ್ವಕ ನಿನಗೀಗ ನವನವ ಭೂಷಣ ಸಂತಸದಿ
ಈಪರಿ ಅರ್ಪಿಪೆ ಕಿರೀಟಮಕುಟವ ಹಾರವ ಮಕರಕುಂಡಲವ
ಶ್ರೀಪತಿ ನಿನಗೀಗ ಉಂಗುರ-ಉಡಿದಾರ ಕಾಲ್ಗೆಜ್ಜೆ ನೂಪುರ ಒಪ್ಪಿಸುವೆ
ಆಸನದಲ್ಲಿಹ ಹರಿಯನ್ನು ಮುಟ್ಟುತ ಆ ಮೂಲಮಂತ್ರವ ಹನ್ನೆರಡು
ಈ ಸಂಖ್ಯೆಯಲ್ಲಿ ನಾ ಜಪಿಸುತ ಹರಿಗೆ ಗಂಧ ಹೂ ತುಲಸಿ ಒಪ್ಪಿಸುವೆ

## ಗಂಧ ಸಮರ್ಪಣೆ

'ಸುಗಂಧಮಯಿಯೇ ಲಕ್ಷಣೆ ಜಯವಂತೆ ಪರಿಪುಷ್ಟೆ ಐಶ್ವರ್ಯರೂಪಿಣಿಯೇ
ಝುಗಮಗ ಹೊಳೆಯುವೆ ಭೂರೂಪಿ ಲಕ್ಷ್ಮಿಯೆ' ಇಲ್ಲಿಗೆ ಬಾರೆಂದು ಕರೆಯುತಲಿ[64]
ಶ್ರೀಖಂಡ ಚಂದನ ಉತ್ಕೃಷ್ಟ ಪರಿಮಳ ತುಂಬಿದೀ ಗಂಧವು ಬ್ರಹ್ಮನದು
ಹೇ ಖಗಗಮನನೆ ಕಾಮನೇ ಗಂಧವ ಕೊಡುತಿಹನೆನ್ನುತ ಒಪ್ಪಿಸುವೆ

## ಅಕ್ಷತೆಯ ಸಮರ್ಪಣೆ

ನಿನ್ನಯ ಓಡಾಟದೀ ಸ್ಥಳವೆಂದಿಗೂ ಹಚ್ಚನೆ ಹಸುರಾಗಿ ಇರಲಗ್ನಿಯೇ
ಇನ್ನಿರಲಿ ಶೀತಲ ಸಾಗರವಾಗಿದು ನೀರ್ಹುಲ್ಲುಹೂಹಣ್ಣು ಇಲ್ಲಿರಲಿ[65]

## ಪುಷ್ಪಸಮರ್ಪಣೆ

ಪರಿಮಳ ಬೀರುತ ಮೆರೆವಂಥ ಮಾಲತಿ ಕೇತಕಿ ಮಂದಾರ ಸತ್ಪುಷ್ಪವ
ಪರಿಪರಿ ಕಟ್ಟಿಹ ಸರಗಳನರ್ಪಿಪೆ ಕೊರಳಲಿ ಹಾಕುತ ನಿನಗೀಗ[66]

---

63 ಹಿರಣ್ಯರೂಪಃ ಸ ಹಿರಣ್ಯಸಂದೃಕ್ ಅಪಾಂ ನಪಾತ್ ಸೇದು ಹಿರಣ್ಯವರ್ಣಃ ।
ಹಿರಣ್ಯಯಾತ್ಪರಿ ಯೋನೇರ್ನಿಷದ್ಯಾ ಹಿರಣ್ಯದಾ ದದತ್ಯನ್ನಮಸ್ಮೈ ॥

64 ಗಂಧದ್ವಾರಾ ದುರಾಧರ್ಷಾ ನಿತ್ಯಪುಷ್ಟಾಂ ಕರೀಷಿಣೀಮ್ ।
ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್ ॥

65 ಆಯನೇ ತೇ ಪರಾಯಣೇ ದೂರ್ವಾ ರೋಹಂತು ಪುಷ್ಪಿಣೀಃ ।
ಹ್ರದಾಶ್ಚ ಪುಂಡರೀಕಾಣಿ ಸಮುದ್ರಸ್ಯ ಗೃಹಾ ಇಮೇ ॥

66 ಮಾಲ್ಯಾನಿ ಚ ಸುಗಂಧೀನಿ ಮಾಲತ್ಯಾದೀನಿ ವೈ ಪ್ರಭೋ ।
ಮಯಾಹೃತಾನಿ ಪುಷ್ಪಾಣಿ ಪೂಜಾರ್ಥಂ ಪ್ರತಿಗೃಹ್ಯತಾಮ್ ॥



ಬಿಡಿಬಿಡಿಯಾಗಿಹ ವಿಧವಿಧ ಬಣ್ಣದ ಪರಿಪರಿ ಪರಿಮಳ ಹೂಗಳಿದೋ
ಒಡೆಯನೆ ನಿನ್ನಯ ಸುಂದರ ಪಾದದ್ವಂದ್ವಗಳಲ್ಲೀಗ ಏರಿಸುವೆ

## ತುಲಸೀಪತ್ರಸಮರ್ಪಣೆ

ಪರಮ ಪವಿತ್ರವು ಆದಂಥ ತುಲಸಿಯ ವೃಕ್ಷದ ಮುಗುಳು ತೆನೆಗಳನು
ಪರಮಾತ್ಮ ನಿನ್ನಯ ಪಾವನಕರನಾಮ[67]ದುಚ್ಚಾರಸಹಿತದಿ ಒಪ್ಪಿಸುವೆ
ಈಪರಿ ಗಂಧವ ತುಲಸಿಯ ಹೂಗಳನೆಲ್ಲವ ಅರ್ಪಿಪ ಸಮಯದಲಿ
ನಾ ಪಠಿಪೆ ಆ ಮೂಲಮಂತ್ರವ ಭಕ್ತಿಯಿಂ ಹರಿಪೂಜೆ ಸಾರ್ಥಕವಾಗಲಿಕೆ

## ಆಯುಧ ಪೂಜೆ[68]

ನಮಿಸಿ ನಾ ಪೂಜಿಸೆ ಆ ಹತ್ತು ಚಕ್ರವೇ ಮುಂತಾದ ಶ್ರೀಹರಿಆಯುಧವ
ನಮಿಪೆ ಶ್ರೀದುರ್ಗೆಯ ಚಕ್ರಾಭಿಮಾನಿಯ ಶಂಖಾಭಿಮಾನಿಯ ಶ್ರೀದೇವಿಯ
ನಮಿಸುವೆ ಗದಾಧಿದೇವ ಶ್ರೀವಾಯುವ ಪದ್ಮಾಭಿಮಾನಿಯ ಭೂದೇವಿಯ
ನಮಿಸುವೆ ಖಡ್ಗಾಭಿಮಾನಿ ಶ್ರೀದುರ್ಗೆಯ ಶಾಙ್ಗಾರ್ಭಿಮಾನಿಯ ಸರಸ್ವತಿಯ
ನಮಿಸುವೆ ನಾನೀಗ ಆ ಪಂಚಪ್ರಾಣರ ಆ ಪಂಚಬಾಣಗಳಧಿಪರ್ಗಳ
ನಮಿಸುವೆ ನಾನೀಗ ಕೌಸ್ತುಭದಭಿಮಾನಿ ಶ್ರೀವಿರಿಂಚಿದೇವನ ಬೇಗದಲಿ
ನಮಿಸುವೆ ವನಮಾಲೆಗಧಿದೇವಿ ತಾನವಳು ಆದಂಥ "ಶ್ರೀ" ಎಂಬ ದೇವಿಯಳ
ನಮಿಸುವೆ ಮತ್ತೀಗ ಶ್ರೀವತ್ಸದಧಿದೇವಿ ತಾನಾದ ಶ್ರೀಲಕ್ಷ್ಮೀದೇವಿಯಳ

## ಆವರಣ ಪೂಜೆ[69]

ಪೀಠದ ಮಧ್ಯದಿ ಚಿಂತಿಸಿ ಶ್ರೀಹರಿಯ ಸುತ್ತಣ ಆವರಣವೇಳರನು
ಪೀಠದ ಹೊರಗಡೆ ಚಿಂತಿಸಿ ಅಲ್ಲಿಹ ದೇವರ್ಕಳೆಲ್ಲರ ಪೂಜಿಪೆ ನಾ

---

67 ಕೇಶವಾದಿ ಚತುರ್ವಿಂಶತಿ ನಾಮಗಳು, ಹಾಗೂ ಮತ್ಸ್ಯಾದಿದಶನಾಮಗಳು

68 ಓಂ ಚಕ್ರಾಧಿದೇವ್ಯೈ ದುರ್ಗಾಯೈ ನಮಃ । ಓಂ ಶಂಖಾಧಿದೇವತಾಯೈ ಶ್ರಿಯೈ ನಮಃ । ಓಂ ಗದಾಧಿದೇವಾಯ ವಾಯವೇ ನಮಃ । ಓಂ ಪದ್ಮಾಭಿಮಾನಿನ್ಯೈ ಭೂಮ್ಯೈ ನಮಃ । ಓಂ ಖಡ್ಗಾಭಿಮಾನಿನ್ಯೈ ದುರ್ಗಾಯೈ ನಮಃ । ಓಂ ಶಾಙ್ಗಾರ್ಭಿಮಾನಿನ್ಯೈ ಸರಸ್ವತ್ಯೈ ನಮಃ । ಓಂ ಪಂಚಬಾಣಾಧಿದೇವತಾಭ್ಯಃ ಪಂಚಪ್ರಾಣೇಭ್ಯೋ ನಮಃ । ಓಂ ಕೌಸ್ತುಭಾಭಿಮಾನಿನ್ಯೇ ವಿರಿಂಚಾಯ ನಮಃ । ಓಂ ವನಮಾಲಾಧಿದೇವತಾಯೈ ಶ್ರಿಯೈ ನಮಃ । ಓಂ ಶ್ರೀವತ್ಸಾಧಿದೇವತಾಯೈ ಲಕ್ಷ್ಮ್ಯೈ ನಮಃ ॥

69 ಪರಿಶಿಷ್ಟ ನೋಡಿ

### ಮೊದಲನೆಯ ಆವರಣ

ಎಡದಲಿ ಶ್ರೀಲಕ್ಷ್ಮೀ ಬಲದಲಿ ಶ್ರೀಧರೆ ಪೂರ್ವದಿ ಕೃದ್ಧೋಲ್ಕ ದಕ್ಷಿಣಕೆ
ಒಡನಿಹ ಮಹೋಲ್ಕ ಪಶ್ಚಿಮದಿ ವೀರೋಲ್ಕ ಉತ್ತರಕ್ದ್ಯುಲ್ಕರ ನಮಿಸುವೆನು
ನಂತರ ಆಗ್ನೇಯ ನೈಋತ್ಯ ವಾಯುವ್ಯ ಈಶಾನ್ಯ ಈಪರಿ ವಿದಿಕ್ಕಲ್ಲಿ
ಚಿಂತಿಸಿ ಸಹಸ್ರ ಆ ಉಲ್ಕರೂಪನ ಪೂಜೆಯ ನಾನೀಗ ಮಾಡುವೆನು

### ಎರಡನೆಯ ಆವರಣ

ನಮಿಸುವೆ ಶ್ರೀವಾಸುದೇವನ ಪೂರ್ವದಿ ಸಂಕರ್ಷಣದೇವನ ದಕ್ಷಿಣದಿ
ನಮಿಸುವೆ ಪ್ರದ್ಯುಮ್ನದೇವನ ಪಶ್ಚಿಮದಿ ನಮಿಸುವೆನನಿರುದ್ಧನ್ನುತ್ತರದಿ
ಮಾಯೆಯನ್ನಾಗ್ನೇಯ ಜಯೆಯ ನೈಋತ್ಯ ಕೃತಿಯನ್ನು ವಾಯುವ್ಯವಿದಿಕ್ಕಲ್ಲಿ
ಶ್ರೀಯರಸಿ ಅನಿರುದ್ಧರಾಣಿ ಶ್ರೀಶಾಂತಿಯ ಈಶಾನ್ಯದಲ್ಲೀಪರಿ ಪೂಜಿಸುವೆ

### ಮೂರನೆಯ ಆವರಣ

ಕೇಶವನಾರಾಯಣ್ಣರ ಪೂರ್ವದಿ ಪೂಜಿಸಿ ಮಾಧವನ ಪೂಜಿಸ್ಯಾಗ್ನೇಯದಿ
ಶ್ರೀ ಶ್ರೀಗೋವಿಂದನು ವಿಷ್ಣುವು ದಕ್ಷಿಣ ನೈಋತ್ಯದಿ ಮಧುಸೂದನನು
ತ್ರಿವಿಕ್ರಮ ವಾಮನರ್ಪಶ್ಚಿಮ ಶ್ರೀಧರ ವಾಯುವ್ಯದಲ್ಲೆಂದು ಪೂಜಿಸುವೆ
ದೇವ ಹೃಷೀಕೇಶ ಶ್ರೀಪದ್ಮನಾಭರ ಉತ್ತರದಲ್ಲೀಗ ನಾ ಪೂಜಿಸುತ
ದಾಮೋದರರೂಪವು ಈಶಾನ್ಯದಲ್ಲೆಂದು ನಮಿಸುತ ಪೂಜಿಸಿ ನಲಿಯುತಲಿ
ನಾ ಮುಗಿಸುತೀಪರಿ ಮೂರನೆ ಆವರಣಪೂಜೆಯ ಮುಂದಕೆ ಸಾಗುವೆನು

### ನಾಲ್ಕನೆಯ ಆವರಣ

ಸಂಕರ್ಷಣನ ವಾಸುದೇವನ ಪೂರ್ವದಿ ಪ್ರದ್ಯುಮ್ನದೇವನ ಆಗ್ನೇಯದಿ
ಪಂಕಜಲೋಚನ ಅನಿರುದ್ಧ ಶ್ರೀ ಪುರುಷೋತ್ತಮರ್ನಮಿಸಿ ದಕ್ಷಿಣದಿ
ಶ್ರೀ ಶ್ರೀಅಧೋಕ್ಷಜ ನೈಋತ್ಯವಿದಿಕ್ಕು ಮತ್ತಿನ್ನು ನರಸಿಂಹ ಅಚ್ಯುತರು
ಪಶ್ಚಿಮದಿಕ್ಕಲಿ ಎನ್ನುತ ಪೂಜಿಸಿ ವಾಯುವ್ಯದಲ್ಲಿನ್ನು ಜನಾರ್ದನ
ಇರುವನು ಎನ್ನುತ ಪೂಜೆಯ ಮಾಡುತ ಉಪೇಂದ್ರ ಶ್ರೀಹರಿ ಇವರುಗಳು
ಇರುವರು ಉತ್ತರಕೆನ್ನುತ ಪೂಜಿಸಿ ಕೃಷ್ಣನ ಪೂಜಿಪೆನೀಶಾನ್ಯದಿ

### ಐದನೆಯ ಆವರಣ

ಮತ್ಸ್ಯನ ಕೂರ್ಮನ ಪೂರ್ವದಿ ಪೂಜಿಸಿ ವರಾಹದೇವನ ಆಗ್ನೇಯದಿ
ಮತ್ತಿನ್ನು ಪೂಜಿಸಿ ನರಸಿಂಹ ವಾಮನರೂಪವ ಪೂಜಿಪೆ ದಕ್ಷಿಣದಿ
ನೈಋತ್ಯದಲ್ಲಿನ್ನು ಭಾರ್ಗವರಾಮನು ಶ್ರೀರಾಮ-ಕೃಷ್ಣರು ಪಶ್ಚಿಮದಿ
ಇರುವರು ಎನ್ನುತ ಚಿಂತಿಸಿ ಪೂಜಿಸಿ ಬುದ್ಧನ ಪೂಜಿಪೆ ವಾಯುವ್ಯಕೆ
ಉತ್ತರದಿಕ್ಕಲ್ಲಿ ಕಲ್ಕಿಯು ಅನಂತರಿರುವರು ಎನ್ನುತ ಪೂಜಿಸುತ
ಮತ್ತಿನ್ನು ಈಶಾನ್ಯದಿಕ್ಕಲ್ಲಿ ವಿಶ್ವರೂಪನ್ನ ನಾನೀಗ ಪೂಜಿಸುವೆ



### ಆರನೆಯ ಆವರಣ

ಪೂರ್ವದಲ್ಲನಂತ ದಕ್ಷಿಣದಿ ಬ್ರಹ್ಮ ಪಶ್ಚಿಮದಿ ವಾಯುವು ಮತ್ತಿನ್ನು
ಶರ್ವನು ಉತ್ತರದಿರುವರು ಎನ್ನುತ ಚಿಂತಿಸಿ ಪೂಜಿಸಿ ನಂತರದಿ
ದೇವರ ಮುಂಬದಿ ಗರುಡನ ಚಿಂತಿಸಿ ನಮಿಷುತ ಮುಂದಿನ್ನು ವಿದಿಕ್ಕಲ್ಲಿ
ಆ ವಾರುಣಿಯಾಗ್ನೇಯ ಸರಸ್ವತಿ ನೈಋತ್ಯ ಭಾರತೀವಾಯುವ್ಯದಲ್ಲೆನುತಲಿ
ಪೂಜಿಸಿ ಗಿರಿಜೆಯ ಈಶಾನ್ಯದಲ್ಲೀಗ ಪೂಜಿಸಿ ನಂತರ ಸೌಪರ್ಣಿಯ
ಪೂಜಿಪೆ ಗರುಡನ ಪಕ್ಕದಿ ಇರುವಂಥ ಆ ಪಕ್ಷಿಸಂಕುಲದ ಅರಸಿಯನು

### ಏಳನೆಯ ಆವರಣ

ಆ ವಜ್ರಹಸ್ತನ್ನ ಶಚೀಸಮೇತನ್ನ ದೇವ ಸುರೇಂದ್ರನ್ನ ಪೂರ್ವದಲಿ
ಭಾವಿಸ್ಯಾಗ್ನೇಯದಿ ಆ ಶಕ್ತಹಸ್ತನ್ನ ಸ್ವಾಹೆಯ ಅರಸನ್ನ ಅಗ್ನಿಯನ್ನ
ಪೂಜಿಸಿ ಆ ಧರ್ಮದಧಿಪತಿ ಯಮನ ಶ್ಯಾಮಲಾಸಹಿತನ್ನ ದಂಡಧರನ
ಪೂಜಿಪೆ ದಕ್ಷಿಣದಿಕ್ಕಿಲಿ ನಂತರ ದೀರ್ಘಗ್ರೀವಾಪತಿ ನಿರಋತಿಯ
ರಕ್ಷೋಧಿಪತಿಯೆಂದು ಪೂಜಿಸಿ ಕಾಳಿಕಾಸಹಿತನ್ನ ಖಡ್ಗಹಸ್ತನ್ನ
ಲಕ್ಷಣವಂತನ ಆ ಪಾಶಹಸ್ತನ ಶ್ರೀವರುಣದೇವನ ಪೂಜಿಸುವೆ
ಪ್ರಾಣಾಧಿಪತಿ ಆ ಪ್ರಧಾನವಾಯುವ ಸುತನಾದ ವಾಯುವ ಮೋಹಿನಿಯ
ಪ್ರಾಣದಕಾಂತನ್ನ ವಾಯುವ್ಯದಲ್ಲಿನ್ನು ನಂತರ ಬೇಗನೆ ಪೂಜಿಸುವೆ
ಉತ್ತರದಿಕ್ಕಲ್ಲಿ ಸೋಮನ್ನಾ ಕುಮುದಹಸ್ತನ್ನಾ ರೋಹಿಣೀಸಹಿತನ್ನ
ಮತ್ತಿನ್ನು ಪೂಜಿಪೆ ನಕ್ಷತ್ರಗಳಿಗೆಲ್ಲ ಅಧಿಪತಿಯೆನ್ನುತ ಪೂಜಿಸುವೆ
ಈಶಾನ್ಯದಲ್ಲೀಗ ಭೂತಾಧಿಪತಿಯಾದ ರುದ್ರನ್ನ ಶ್ರೀಉಮೆಸಹಿತನ್ನ
ಆ ಶೂಲಪಾಣಿಯ ಚಿಂತಿಸಿ ಪೂಜಿಪೆ ಈಪರಿ ಶ್ರೀಹರಿಪಾರ್ಷದರ
ನಾಗರಿಗಧಿಪತಿ ವಾರುಣೀರಮಣನ ಚಕ್ರವ ಹಿಡಿದಿಹ ಅನಂತನ್ನ
ಈಗ ನಾ ಪೂಜಿಪೆ ಪೀಠದ ಕೆಳಗಡೆ ನಂತರ ಮುಂಬದಿ ಮೇಗಡೆಗೆ
ಬ್ರಹ್ಮನ್ನಾ ಗಾಯತ್ರೀರಮಣನ್ನಾ ಕಮಲಹಸ್ತನ್ನ ಲೋಕದ ಅಧಿಪತಿಯ
ನಮ್ಮಿಸಿ ತನ್ಮಧ್ಯೆ ಶ್ರೀಲಕ್ಷ್ಮೀರಮಣನ್ನ ಚಿಂತಿಸಿ ಪೂಜಿಪೆ ಭಕ್ತಿಯಲಿ

### ದ್ವಾರಪಾಲಕರ ಪೂಜೆ[70]

ಮೊದಲಿಗೆ ಶ್ರೀ ವಜ್ರನಾಭನ್ನನಂತರ ಹರೀಶ ಶ್ರೀಗಂಗಾತನಯರನು
ಮುದದಿಂದ ಪೂಜಿಸಿ ನಂತರ ಶ್ರೀಶಂಖ ನಿಧೀಶ್ವರನೆಂಬನ ಪೂಜಿಸುತ

---

[70] ವಜ್ರನಾಭಾಯ ನಮಃ। ಹರೀಶಾಯ ನಮಃ। ಗಂಗಾತನಯಾಯ ನಮಃ। ಶಂಖ-ನಿಧೀಶ್ವರಾಯ ನಮಃ। ಜಯಾಯ ನಮಃ। ವಿಜಯಾಯ ನಮಃ। ಧಾತಾಯ ನಮಃ। ವಿಧಾತಾಯ ನಮಃ। ಭದ್ರಾಯ ನಮಃ। ಸುಭದ್ರಾಯ ನಮಃ। ಅಮೃತೇಶ್ವರಾಯ ನಮಃ। ವಿರೂಪಾಕ್ಷಾಯ ನಮಃ।

ನಂತರ ಶ್ರೀ ಜಯ ವಿಜಯ ಶ್ರೀ ಧಾತೃ-ವಿಧಾತೃ ಶ್ರೀ ಭದ್ರ-ಸುಭದ್ರರ
ಚಿಂತಿಸಿ ಪೂಜಿಸಿ ಶ್ರೀ ಅಮೃತೇಶ್ವರ ಶ್ರೀ ವಿರೂಪಾಕ್ಷರ ಪೂಜಿಸುವೆ

### ಧೂಪ ಸಮರ್ಪಣೆ[71]

"ವನಸ್ಪತ್ಯುದ್ಭವ" ಎಂಬಂಥ ಮಂತ್ರವ ಆ ಮೂಲಮಂತ್ರದ ಜಪದ ಸಹ
ಘನವಾದ ಸುಗಂಧ ಸುರಘ್ರಾಣಯೋಗ್ಯದ ಧೂಪದ ಆರತಿ ಒಪ್ಪಿಸುವೆ

### ದೀಪ ಸಮರ್ಪಣೆ[72]

"ಸಾಜ್ಯಂ ತ್ರಿವರ್ತಿ...." ಎಂಬಂಥ ಮಂತ್ರವ ಆ ಮೂಲಮಂತ್ರ ಜಪದ ಸಹ
ಆಜ್ಯದ ಮೂರ್ಬತ್ತಿದೀಪವ ಮೂರ್ಲೋಕಕತ್ತಲ ಕಳೆವಂಗೆ ಬೆಳಗುವೆನು

### ನೈವೇದ್ಯಸಮರ್ಪಣೆ

ದೇವರ ಮುಂದಣ ನೆಲವನು ಗೋಮಯದಿಂದಲಿ ಸ್ವಚ್ಛವ ಮಾಡುತಲಿ
ಈವಾಗ ಬರೆವೆ ಮೇಲಲ್ಲಿ "ಶ್ರೀ" ಬೀಜ ನಂತರ ನೈವೇದ್ಯವಲ್ಲಿಡುವೆ
ನವರತ್ನಖಚಿತ ಪಾತ್ರೆಗಳೊಳಗಡೆ ತುಪ್ಪದಿ ಮಾಡಿದ ಭೋಜ್ಯಗಳು
ಸವಿಸವಿ ಉತ್ತಮ ಪದಾರ್ಥವಿಲ್ಲೀಗ ಇರುವುವು ಎನ್ನುತ ಚಿಂತಿಸುತ
ಇಲ್ಲಿವೆ ಸುಭಕ್ಷಭೋಜ್ಯವು ಚೋಷ್ಯವು ಲೇಹ್ಯವು ಶಾಕದಅನ್ನಗಳು
ಒಳ್ಳೆಯ ಹಾಲ್ಮೊಸರು ಉಪ್ಪದು ತುಪ್ಪವು ಸಿಹಿನೀರದಲ್ಲಿದೆ ಎನ್ನುವೆನು
ಈಪರಿ ಎನ್ನುತ "ಸೌವರ್ಣೈ...."[73] ಇತ್ಯಾದಿ ಮಂತ್ರವ ಆ ಮೂಲಮಂತ್ರ ಸಹ
ನಾ ಪಠಿಸಿ ಪರಿಶುದ್ಧ ತುಲಸಿಯ ನೀರಿಂದ ನೈವೇದ್ಯವಸ್ತುವ ಪ್ರೋಕ್ಷಿಸುವೆ
ಅಮೃತವ ವರ್ಷಿಪ ಸುರಧೇನುವನ್ನು ನಾ ಚಿಂತಿಸಿ ಮನದಲಿ ಶ್ರದ್ಧೆಯಲಿ
ನಾ ಮತ್ತೆ ತೋರುವೆ ಆ "ಧೇನು"ಮುದ್ರೆಯ ಸುರಭ್ಯೈ ನಮಃ ಎನ್ನುತಲಿ
"ಹುಂ ಫಟ್ ಸ್ವಾಹಾ"[74] ಎನ್ನುತ ತೋರಿ "ಸುದರ್ಶನ"ಮುದ್ರೆಯ ನಾನಿನ್ನು
ನಂತರ ತೋರುವೆ ಆ ಗರುಡಮುದ್ರೆಯ ನೀರನು ಕೈಯಲಿ ಹಿಡಿಯುತಲಿ

---

71 ವನಸ್ಪತ್ಯುದ್ಭವೋ ದಿವ್ಯೋ ಗಂಧಾಢ್ಯೋ ಗಂಧ ಉತ್ತಮಃ ।
ಆಘ್ರೇಯಃ ಸರ್ವದೇವಾನಾಂ ಧೂಪೋಯಂ ಪ್ರತಿಗೃಹ್ಯತಾಮ್ ॥

72 ಸಾಜ್ಯಂ ತ್ರಿವರ್ತಿ ಸಂಯುಕ್ತಂ ವಹ್ನಿನಾ ಯೋಜಿತಂ ಮಯಾ।
ದೀಪಂ ಗೃಹಾಣ ದೇವೇಶ ತ್ರೈಲೋಕ್ಯತಿಮಿರಾಪಹ ॥

73 ಸೌವರ್ಣೈಃ ಸ್ಥಾಲಿವರ್ಯೈರ್ಮಣಿಗಣಖಚಿತೈರ್ಗೋಘೃತಾಕ್ತಾನ್ ಸುಪಕ್ವಾನ್।
ಭಕ್ಷ್ಯಾನ್ ಭೋಜ್ಯಾಂಶ್ಚ ಲೇಹ್ಯಾನಪಿ ಸಕಲ ಚೋಷ್ಯಮನ್ನಂ ನಿಧಾಯ॥
ನಾನಾಶಾಕೈರುಪೇತಂ ಸಮಧುದಧಿಘೃತಂ ಕ್ಷೀರಪಾನೀಯಯುಕ್ತಮ್।
ತಾಂಬೂಲಂ ಚಾಪಿ ವಿಷ್ಣೋಃ ಪ್ರತಿದಿವಸಮಹಂ ಮಾನಸೇ ಚಿಂತಯಾಮಿ॥



ನೈವೇದ್ಯಕಿನ್ನೀಗ ಆ "ಸತ್ಯಂತ್ವರ್ತೇನ"[75] ಮಂತ್ರದಿಂ ಪರಿಷೇಚನೆಯ
ನಾ ವಿಧಿಪೂರ್ವಕ ಮಾಡುತ ನಂತರ ನೀಡುವೆ ದೇವನಿಗಾಪೋಶನ
ಕಲಶದಿ ತಂದಿಹ ವಿಪುಲ ತಾನಾಗಿಹ ಆ ಸುಧಾರಸವನು ಒಪ್ಪಿಸುವೆ
ಜಲಪಾನ ದೇವನೆ ಮಾಡು ಬೇಕಾದಷ್ಟು ಸ್ವೀಕರಿಸು ಬೇಗ ನೀ ಆಪೋಶನ
ದೇವನ ಬಲಗೈಲಿ ಶ್ರೀಲಕ್ಷ್ಮೀದೇವಿಯೇ ಅಮೃತದರಸದೀ ಆಪೋಶನ
ಈವಳು ಎಂತೆಂದು ಭಾವಿಸಿ ಮನದಲ್ಲಿ ನೀಡುವೆ ಶುಭಕರದಾಪೋಶನ
"ಅಮೃತೋಪಸ್ತರಣಮಸಿ"ಯು ಎಂಬಂಥ ಮಂತ್ರದಿಂ ನೀಡುತ ಆಪೋಶನವ
ಆ ಮತ್ತೆ ಉಳಿದ ನೀರನು ಬೇರೊಂದು ಪಾತ್ರೆಗೆ ಮತ್ತೀಗ ಸುರಿಯುವೆನು
ಒಂದೊಂದರಂತೈದು ಆಹುತಿ ಪಾತ್ರೆಲಿ ಹಾಕುವೆ "ಪ್ರಾಣಾತ್ಮ"[76] ಮಂತ್ರಗಳಿಂ
ಒಂದೊಂದು ಆಹುತಿಗೆಂದೀಗ ಶಂಖದ ನೀರೈದು ಬಾರಿಗೆ ಬಿಡುವೆನು ನಾ
ಪಠಿಸುವೆ "ಮಧುವಾತಾ ಋತಾ"[77] ಎಂತೆಂಬ ಆ "ಸ್ವಾದುಃಪವಸ್ವ"[78] ಇತ್ಯಾದಿಯ
ಪಠಿಸುವೆ "ಭೋಜಂ ತ್ವಾಮಿಂದ್ರ"[79]ನೆಂಬಂಥ ಋಕ್ಕುಗಳೆಲ್ಲವ ಬಿಡದಂತೆ ನಾ
ನೈವೇದ್ಯವರ್ಪಿಸಿ ಪಾನೀಯ ಒಪ್ಪಿಸಿ[80] ಪರದೆಯನೊಂದನು ಅಡ್ಡಲಾಗಿ
ಈವಾಗ ಹಿಡಿಯುವೆ ಭೋಜನ ಮಾಡುವ ಹರಿಯನು ಮನದಲಿ ಚಿಂತಿಸುತ
ಈಪರಿ ಚಿಂತಿಸಿ ನೂರರಮೇಲೆಂಟು ಸಂಖ್ಯೆಯ ಮೂಲಮಂತ್ರವನು
ಜಪಿಸುವೆ ಒಮ್ಮನದಿಂದಲಿ ನಾನೀಗ ದೇವನ ಭೋಜನವೇಳೆಯಲಿ

---

74 ಓಂ ನಮೋ ಭಗವತೇ ಸುದರ್ಶನಾಯ ಮಹಾಚಕ್ರಾಯೈ ಹುಂ ಫಟ್ ಸ್ವಾಹಾ

75 ಸತ್ಯಂ ತ್ವರ್ತೇನ ಪರಿಷಿಂಚಾಮಿ

76 ಓಂ ಪ್ರಾಣಾತ್ಮನೇ ಶ್ರೀ ನಾರಾಯಣಾಯ ಸ್ವಾಹಾ ಪ್ರಾಣಾತ್ಮನೇ ನಾರಾಯಣಾಯ ಇದಂ ನ ಮಮ। ಓಂ ಅಪಾನಾತ್ಮನೇ ಶ್ರೀ ವಾಸುದೇವಾಯ ಸ್ವಾಹಾ ಅಪಾನಾತ್ಮನೇ ಶ್ರೀ ವಾಸುದೇವಾಯ ಇದಂ ನ ಮಮ। ಓಂ ವ್ಯಾನಾತ್ಮನೇ ಶ್ರೀ ಸಂಕರ್ಷಣಾಯ ಸ್ವಾಹಾ ವ್ಯಾನಾತ್ಮನೇ ಶ್ರೀ ಸಂಕರ್ಷಣಾಯ ಇದಂ ನ ಮಮ। ಓಂ ಉದಾನಾತ್ಮನೇ ಶ್ರೀ ಪ್ರದ್ಯುಮ್ನಾಯ ಸ್ವಾಹಾ ಉದಾನಾತ್ಮನೇ ಶ್ರೀ ಪ್ರದ್ಯುಮ್ನಾಯ ಇದಂ ನ ಮಮ। ಓಂ ಸಮಾನಾತ್ಮನೇ ಶ್ರೀ ಅನಿರುದ್ಧಾಯ ಸ್ವಾಹಾ ಸಮಾನಾತ್ಮನೇ ಶ್ರೀ ಅನಿರುದ್ಧಾಯ ಇದಂ ನ ಮಮ

77 ಪಾದಟಿಪ್ಪಣಿ 45 ನೋಡಿ.

78 ಪಾದಟಿಪ್ಪಣಿ 51 ನೋಡಿ

79 ಭೋಜಂ ತ್ವಾಮಿಂದ್ರ ವಯಂ ಹುವೇಮ ದದಿಷ್ಟ್ವಮಿಂದ್ರಾಪಾಂಸಿ ವಾಜಾನ್।
ಅವಿಡ್ಢೀಂದ್ರ ಚಿತ್ರಯಾ ನ ಊತೀ ಕೃಧಿ ವೃಷನ್ನಿಂದ್ರ ವಸ್ಯಸೋ ನಃ ॥

80 ಗಂಗೋದಕಂ ಸಮಾನೀತಂ ಹೇಮಕುಂಭೇನ ನಿರ್ಮಲಮ್।
ಗೃಹ್ಯತಾಂ ಮೇ ಹೃಷೀಕೇಶ ಪ್ರಸೀದ ಪುರುಷೋತ್ತಮ ॥

" ಅಮೃತಾಪಿಧಾನಮಸಿ " ಎನ್ನುತಲಿನ್ನೀಗ ಉತ್ತರಾಪೋಶನ[81] ನೀಡುವೆನು
ನಾ ಮತ್ತೆ ತಾನುಳಿದ ಆಪೋಶನದ ಆ ನೀರ ಬೇರಿಹ ಪಾತ್ರೆಗೆ ಹಾಕುವೆನು
ಎಡದ ಆ ಬಾಯನ್ನು ಮುಕ್ಕಳಿಪ ಪಾತ್ರೆಲಿ ದೇವನಿಗರ್ಪಿಪೆ ಗಂಡೂಷವ
ಕೊಡುತಲಿ ಕೈ ತೊಳೆಯೆ[82] ನೀರನು ನಂತರ ನೀರನಾಚಮನಕ್ಕೆ ನೀಡುವೆನು
ಈ ಮಧ್ಯೆ ಪಠಿಸುವೆ ದ್ವಾದಶಸ್ತೋತ್ರದ ಒಂದನೆಯಧ್ಯಾಯ ಭಕ್ತಿಯಲಿ
ಶ್ರೀಮಧ್ವಮುನಿಗಳ ಆನಂದ ಸಂಪೂರ್ಣ ಸ್ತೋತ್ರದ ಭಾವನ ಚಿಂತಿಸುತ

## [ದ್ವಾದಶಸ್ತೋತ್ರ—ಭಾವ

ವಂದನೆ ನಿನಗಯ್ಯ ವಂದ್ಯ ಸದಾನಂದ ಶ್ರೀವಾಸುದೇವ ನಿರಂಜನನೆ
ಇಂದಿರೆರಮಣನೆ ವರದಾತರಾದಂಥ ಬ್ರಹ್ಮರುದ್ರೇಂದ್ರರ್ಗೇ ವರವೀವನೆ
ಯಾವನ ಪೀಠಕೆ ಬ್ರಹ್ಮಾದಿ ಸುರರೆಲ್ಲ ತಲೆಬಾಗಿ ಕಿರೀಟ ತಾಕಿಪರೋ
ಯಾವನು ಮನಸಿನ ಕತ್ತಲೆಗರ್ಕನಾ ಶ್ರೀಪತಿಪಾದಕೆ ನಮಿಸುವೆನು
ಧ್ಯಾನಕೆ ಯೋಗ್ಯವೋ ಹಳದಿಹೊಂಬಣ್ಣದ ಅಂಬರ ಉಟ್ಟಂಥ ದಿವ್ಯ ಕಟಿ
ತಾನಲ್ಲಿ ಮೆರೆಸಿದೆ ಹೊಂಗೆಜ್ಜೆ ಉಡಿದಾರ ಮತ್ತದಾಸಿರಿಗೇ ಆಶ್ರಯವೋ
ಸುಂದರ ಆ ತ್ರಿವಳಿ ಪುಟ್ಟದು ಹೊಟ್ಟೆಯು ಜಗನೆಲ್ಲ ತನ್ನಲಿ ಅಡಗಿಸಿದೆ
ಅಂದದ ಅದನಪ್ಪೆ ಶ್ರೀಮಾತ್ರಳರ್ಹಳೋ ಧ್ಯಾನಾರ್ಹವಾದದ ನಮಿಸುವೆನು
ಸಿರಿದೇವಿಗಾವಾಸವಾದಂಥ ಹರಿಯೆದೆ ಅನಂತವಾನಂತ ಹರಹಿನದೋ
ಇರುತಿದ್ದು ಭುಜಮಧ್ಯೆ ಪರಿಮಿತಿ ತೋರುವ ಉರಸ್ಥಳ ಬಲುಬಲು ಸ್ಮರಣೀಯವೋ
ಪರಿಪುಷ್ಟ ಪರಿಪೂರ್ಣ ನಿಡಿತೋಳಕರದಲ್ಲಿ ಶಂಖಚಕ್ರಗದೆ ಪದ್ಮವಿವೆ
ನಿರುತವು ಜಗವನ್ನು ಕಾವುದಲ್ಲಿವುಗಳು ನಿರತವು ಚಿಂತಿಸಿರ್ಭುಜಗಳನು
ಬಿಡದಂತೆ ವೇದವ ಸರ್ವದಾ ಧ್ವನಿಸುವ ವೈಕುಂಠನಾಕಂಠ ಹೊಳೆದಿವೆಯೋ
ದೃಢವಾಗಿ ಮೆರೆದಿದೆ ಕೌಸ್ತುಭ ತಾನಲ್ಲಿ ಅಂತಹ ಸುಕಂಠ ಚಿಂತಿಪುದೋ
ಸಾಸಿರಸಾಸಿರ ಚಂದ್ರರ ಕಾಂತಿಯು ಬೆಳಗುವ ಶ್ರೀಪತಿ ಮುಖಧ್ಯಾನವು
ಸೂಸುವ ಭವತಾಪ ಕಳೆವುದು ಸ್ತೋತ್ರಕೆ ಬಹುವಾಗಿ ತಾನದು ಪಾತ್ರವಕೋ
ಜಗಕೊಬ್ಬನಾದೇವ ಗೋವಿಂದನೆಂದೆಂದೂ ಪರಿಪೂರ್ಣ ಆನಂದ ಬೀರುವನೋ
ನಗೆಮೊಗನಾತನು ಆನಂದಪದವನು ಈವನು ಆತನ ಧ್ಯಾನಿಪುದೋ

[81] ಮಹಾಲಕ್ಷ್ಮ್ಯಾ ದೀಯಮಾನಂ ಕರೇ ತೇ ದಕ್ಷಿಣೇಽನಘ।
ಉತ್ತರಾಪೋಶನಂ ದಿವ್ಯ ಪಿಬ ದೇವ ರಮಾಪತೇ॥

[82] ಚಂದನಂ ಚ ಸಕರ್ಪೂರಂ ಕಸ್ತೂರ್ಯಾದಿ ಸಮನ್ವಿತಮ್।
ಕರೋದ್ವರ್ತನಕಂ ದೇವ ಪ್ರೀತ್ಯರ್ಥಂ ಪ್ರತಿಗೃಹ್ಯತಾಮ್॥



ಭವತಾಪಹಾರಕ ಆನಂದಸಾಗರ ಪ್ರೀತಿಯದುಕ್ಕುವ ನೋಟದವ
ಅವ ರಾಮಚಂದ್ರನು ಆನಂದಪೂರ್ಣನು ಅವನ ಆ ನೋಟವ ಸ್ಮರಿಸುವೆನು
ಪರಮೇಷ್ಟಿ ಇತ್ಯಾದಿ ಪದಗಳ ಬೇಡಲು ಬ್ರಹ್ಮಾದ್ಯರ್ಗವುಗಳ ನೀಡುವನೋ
ಪರಮವಿಮುಕ್ತಿಯ ನೀಡುವ ದೇವನ ಹುಬ್ಬಿನ ಚಲನವ ಧ್ಯಾನಿಪುದೋ
ಎಂತೆಂತು ಬಿಡದಂತೆ ಆತನ ಗುಣಗಳ ಚಿಂತಿಸಿ ನೋಡುವ ಬ್ರಹ್ಮಾದ್ಯರು
ಅಂತ್ಯವ ಕಾಣರೋ ಅಂಥ ಅನಂತನ್ನ ಚಿಂತಿಸಿರೆಂದೆಂದೂ ಮತ್ತಂತ್ಯದಿ]

## ಸುಫಲ

ತೆಂಗದು ಕಿತ್ತಿಳೆ ಬಾಳೆಯು ಸಿಹಿದ್ರಾಕ್ಷಿ ದಾಳಿಂಬೆ ಖರ್ಜೂರಮಾವ್ಹಲಸು
ಅಂಗಜಜನಕನೆ ಫಲಗಳಿವೆಲ್ಲವ ಭಕ್ತಿಯಿಂದೀಗ ನಾನೊಪ್ಪಿಸುವೆ

## ಪುಷ್ಪ - ತಾಂಬೂಲ - ದಕ್ಷಿಣೆ

ಮೂಲಮಂತ್ರದಿಂ ನಾಂ ಎರಡೊಂದು ಹೂಗಳ ಅರ್ಪಿಸಿ ತಾಂಬೂಲ ಒಪ್ಪಿಸುವೆ[83]
ಏಲಕ್ಕಿ ಲವಂಗ ಕೇಸರಿ-ಕರ್ಪೂರಮಿಶ್ರಿತ ಅಡಿಕೆಯು ಸುಣ್ಣ ಸಹ
ಸ್ವೀಕಾರ ಮಾಡೀಗ ವಿಭುವೆ ನೀನೆನ್ನುತ ಸುಗಂಧ-ಸ್ವಾದಿಷ್ಟವದೆನ್ನುವೆ
" ನಾಕಸ್ಯ ಪೃಷ್ಠೇ "[84] ಎಂಬಂಥ ಮಂತ್ರದಿಂ ದಕ್ಷಿಣೆ ನಂತರ ನೀಡುವೆನು
ಆ ಸ್ವರ್ಣಗರ್ಭನಿಂ ಬಂದಂಥ ಚಿನ್ನವು ಅಗ್ನಿಗೆ ಹೊಂಬಣ್ಣಕಾರಣವು
ಈ ಸ್ವರ್ಣದಕ್ಷಿಣೆ ಅನಂತಪುಣ್ಯದ ಫಲವನು ಶಾಂತಿಯ ತಂದೀವುದು[85]

## ಪುನರ್ಧೂಪ[86]

ಉತ್ಪತ್ತಿ ಇಲ್ಲದ ಅನಂತಗುಣಗಳ ಉತ್ತಮ ದೇಹಿಯೇ ತಾನಾಗಿಹ
ಸ್ತುತ್ಯನು ಶ್ರೀವ್ಯಾಸಅವತಾರಿ ಶ್ರೀಹರಿ ಜ್ಞಾನದ ಕಿರಣದ ಸೂರ್ಯನವ

[83] ಪೂಗೀಫಲ ಸಮಾಯುಕ್ತಂ ನಾಗವಲ್ಲೀದಲೈರ್ಯುತಮ್।
ಕರ್ಪೂರಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್॥

[84] ನಾಕಸ್ಯ ಪೃಷ್ಠೇ ಅಧಿ ತಿಷ್ಠತಿ ಶ್ರಿತೋ ಯಃ ಪೃಣಾತಿ ಸ ಹ ದೇವೇಷು ಗಚ್ಛತಿ।
ತಸ್ಮಾ ಆಪೋ ಘೃತಮರ್ಷಂತಿ ಸಿಂಧವ...ಸ್ತಸ್ಮಾ ಇಯಂ ದಕ್ಷಿಣಾ ಪಿನ್ವತೇ ಸದಾ॥

[85] ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂ ವಿಭಾವಸೋಃ।
ಅನಂತಪುಣ್ಯಫಲದಂ ಅತಃ ಶಾಂತಿಂ ಪ್ರಯಚ್ಛ ಮೇ॥

[86] ಜಯತ್ಯಜೋಽಖಂಡಗುಣೋರುಮಂಡಲಃ ಸದೋದಿತೋ ಜ್ಞಾನಮರೀಚಿಮಾಲೀ।
ಸ್ವಭಕ್ತಹಾರ್ದೋಚ್ಛತಮೋ ನಿಹಂತಾ ವ್ಯಾಸಾವತಾರೋ ಹರಿರಾತ್ಮಭಾಸ್ಕರಃ॥

ತನ್ನಯ ಭಕ್ತರ ಹೃದಯದಿ ತುಂಬಿದ್ದ ಹೆಚ್ಚಾದ ಕತ್ತಲ ಕಳೆಯುತಲಿ
ಉನ್ನತ ಉತ್ತಮ ತನ್ನಿಂದ ತಾನಾಗೇ ಬೆಳಗುವ ಬೆಳಕನು ಬೀರುವವ
ಉತ್ಪತ್ತಿ ಇಲ್ಲದ ಅಕ್ಷಯಸುಖದ ಸ್ವರೂಪದೇಹವ ಉಳ್ಳವನು
ಉತ್ತಮ ಐಶ್ವರ್ಯ ಶೋಭೆಯಿಂ ಕಾಂತಿಯಿಂ ಎಂದೆಂದೂ ತೋರುವ ವ್ಯಾಪ್ತಹರಿ
ರಾಮಾವತಾರದಿ ಚಂದ್ರನ ಅಂದದಿ ಭಕ್ತರ ಸಂಸಾರದುಃಖಗಳ
ನಾಮಾವಶೇಷವ ಮಾಡುತ ಪಾಪವ ಅರಿಗಳನೆಲ್ಲರ ಕಳೆಯುವನು
ಅಸಮ ಸಾಮರ್ಥ್ಯವೇ ನೀರಾಗಿ ತಾನುಳ್ಳ ಸಾಗರ ಶ್ರೀಕೃಷ್ಣ ಅವತಾರವು
ಅಸಂಖ್ಯ ಗುಣರತ್ನಕ್ಕಾಗರಪೂರ್ಣವು ತನ್ನದೇ ತಾನಾದ ವೈಭವವ
ಸರ್ವದಾ ಮೆರೆಸುತ ಜ್ಞಾನಿಗಳೆಂಬುವ ನದಿಗಳ ತನ್ನೊಳು ಸೆಳೆಯುತಲಿ
ಸರ್ವರೊಳುತ್ತಮ ಸರ್ವದಾ ಶ್ರೀಹರಿ ಎಂದೆಂದೂ ಸಾಗರದಂತಿಹನು
ಚಿಂತನೆಗೆಟುಕದ ಗುಣಗಳಿಂ ಪೂರ್ಣನು ಸಮಸ್ತ ದೇವರ್ಕಳಿಂ ವಂದ್ಯನವ
ಸಂತತ ಸೌತ್ತ್ಯನು ಮುಕ್ತರಮುಕ್ತರಿಂ ಬ್ರಹ್ಮರುದ್ರಾದ್ಯರ್ಗೆ ಗುರುವವ ತಾ
ಸಮಗ್ರ ಸದ್ಗುಣಸಾಗರ ಆತನು ದೋಷಾತಿದೂರನು ಕಮಲಾಕ್ಷನು
ರಮೆಯರಸ ಹರಿಯು ಜ್ಞಾನದ ಮಾನದ ದುರ್ಜನವಿದಾರಿ ಸರ್ವೋತ್ಕೃಷ್ಟ
ಗಣನೆಗೆ ಸಿಲ್ಕದ ಉತ್ತಮ ಗುಣಗಳ ಶರಧಿಯು ತಾನವ ಜಗತ್ಕರ್ತ
ಗುಣಪರಿಪೂರ್ಣನು ವಿದ್ಯೆಗಳೆಲ್ಲಕೂ ಅಧಿಪತಿ ಆದಾತ ಜಗದ್ಗುರು
ಅನಂತಶಕ್ತನು ಬ್ರಹ್ಮಾದ್ಯರ್ಗೊಡೆಯನು ನಿರ್ದೋಷವಾದಂಥ ದೇಹದವ
ಮಣೀಂದ್ರನೀಲದ ಮೈಬಣ್ಣವಾತಗೆ ಕೆಂಪವು ಆತನ ಪಾದನೇತ್ರ
ಆತನ ತುಟಿಯು ಕೈಉಗುರುನಾಲಿಗೆ ತುದಿಗಳೆಲ್ಲವೂ ಕೆಂಬಣ್ಣವು
ಆತನ ಕೈಲಿವೆ ಪಾದಗಳಲ್ಲಿವೆ ಶ್ರೀಚಕ್ರ ಶ್ರೀಪದ್ಮರೇಖೆಗಳು

---

ಜಯತ್ಯಜೋಽಕ್ಷೀಣ ಸುಖಾತ್ಮಬಿಂಬಃ ಸ್ವೈಶ್ವರ್ಯಕಾಂತಿಪ್ರತತಸ್ಸದೋದಿತಃ ।
ಸ್ವಭಕ್ತಸಂತಾಪದುರಿಷ್ಟಹಂತಾ ರಾಮಾವತಾರೋ ಹರಿರೀಶಚಂದ್ರಮಾಃ ।
ಜಯತ್ಯಸಂಖ್ಯೋರುಬಲಾಂಬುಪೂರೋ ಗುಣೋಚ್ಚರತ್ನಾಕರ ಆತ್ಮವೈಭವಃ
ಸದಾಸದಾತ್ಮಜ್ಞನದೀಭಿರಾಪ್ಯಃ ಕೃಷ್ಣಾವತಾರೋ ಹರಿರೇಕಸಾಗರಃ ।
ಜಯತಿ ಹರಿರಚಿಂತ್ಯಃ ಸರ್ವದೇವೈಕವಂದ್ಯಃ
ಪರಮಗುರುರಭೀಷ್ಟಾವಾಪ್ತಿದಃ ಸಜ್ಜನಾನಾಮ್ ।
ನಿಖಿಲಗುಣಗಣಾರ್ಣೋ ನಿತ್ಯನಿರ್ಮುಕ್ತದೋಷಃ
ಸರಸಿಜನಯನೋಽಸೌ ಶ್ರೀಪತಿರ್ಮಾನದೋ ನ ।
ಅಗಣ್ಯದಿವ್ಯೋರುಗುಣಾರ್ಣವಃ ಪ್ರಭುಃ ಸಮಸ್ತವಿದ್ಯಾಧಿಪತಿರ್ಜಗದ್ಗುರುಃ ।
ಅನಂತಶಕ್ತಿರ್ಜಗದೀಶ್ವರೇಶ್ವರಃ ಸಮಸ್ತದೋಷಾತಿವಿದೂರವಿಗ್ರಹಃ ।
ಶುಭಮರಕತವರ್ಣೋ ರಕ್ತಪಾದಾಬ್ಜನೇತ್ರಾ-
ಧರಕರನಖರಸನಾಗ್ರಶ್ಚಕ್ರಶಂಖಾಬ್ಜರೇಖಃ ।



ಉತ್ತಮ ಬೆಳ್ಳನೆ ಸೂರ್ಯಸತ್ಕಾಂತಿಯ ಜಿಂಕೆಯ ಚರ್ಮವ ಉಟ್ಟವೆ ತಾ
ಉತ್ತಮ ಥಳಥಳ ಮಿಂಚುವ ಜಟೆಗಳ ಮಧ್ಯದ ಶಿಖೆಗಳ ಮೆರೆದಿಹನು
ಚೆನ್ನಾದ ಹರಹಿನ ಎದೆಯದು ಭುಜಗಳು ಉನ್ನತ ಆತಗೆ ದೇವನಿಗೆ
ಚೆನ್ನಾದ ತಾವರೆ ಹೂದಳ ಹೋಲುವ ಕಣ್ಗಳನುಳ್ಳವ ಸ್ವಾಮಿಯವ
ಸುಂದರ ಸಿರಿಮೊಗ ತ್ರಿರೇಖಾಮಧ್ಯವು ಶಂಖದ ತೆರನಾದ ಉನ್ನತಕಂಠ
ಚಂದದಿ ವೇದವ ಉಚ್ಚರಿಪ ಆ ಮುಖ ಅನಂತಚಂದ್ರರ ಮೀರಿಹುದು
ತಾ ಜ್ಞಾನಮುದ್ರೆಯ ಅಭಯದ ಮುದ್ರೆಯ ತೋರುತಲಿರುವುವು ಕೈಗಳವು
ಯಜ್ಞೋಪವೀತವ ಅಜಿನವ ಮೌಂಜಿಯ ಧರಿಸುತ ತಾ ಬಲು ಶೋಭಿಸಿಹ
ಉನ್ನತದಜ್ಞಾನ ಸರ್ಪವು ಕಚ್ಚಿಹ ಭಕ್ತರ ಪ್ರಸನ್ನ ನೋಟದಿಂದ
ಇನ್ನು ತಾ ಬದುಕಿಸಿ ವ್ಯಾಸಾವತಾರಿಯು ಜಗವೆಲ್ಲ ಮೀರುತ ಬೆಳೆದಿಹ ತಾ
ಎಣಿಸಲು ಬಾರದ ಗುಣಗಳಿಗೇಕೈಕ ಆಶ್ರಯ ಸಮಸ್ತ ವಿಷಯಗಳ
ಜ್ಞಾನದ ಕಿರಣದ ಪ್ರಭೆಯನು ಸುತ್ತ ತಾ ಹೊಮ್ಮಿಸಿ ಬೆಳಗಿಸಿ ಶೋಭಿಸಿಹ
ಅನಾದಿಯಜ್ಞಾನ ಕತ್ತಲ ನೀಗುವ ಮೋಕ್ಷದ ಆನಂದ ಬ್ರಹ್ಮಾದ್ಯರ್ಗೆ
ತಾನೀವ ದೇವನು ಶ್ರೀಹರಿಯಾತಗೆ ನಮೋ ನಮೋ ನಮೋ ಎನ್ನುವೆನು]
ಈಪರಿ ದೇವನ ಹೊಗಳುವವಾದಂಥ " ಜಯತ್ಯಸಂಖ್ಯೋರು " ಮುಂತಾದ ಆ
ಧೂಪದ ಆರತಿ ಸಮಯದ ಮಂತ್ರವ ಪಠಿಸುತ ಧೂಪವ ಒಪ್ಪಿಸುವೆ

## ಮಂಗಳಾರತಿ

" ಅರ್ಚತ ಪ್ರಾರ್ಚತ "[87] ಎಂಬಂಥ ಮಂತ್ರವ ಪಠಿಸುತ ಮಂಗಳಆರತಿಯ
ಹೆಚ್ಚಿನ ಭಕ್ತಿಯ ಭಾವವು ಮನದಲಿ ತಾನುಕ್ಕಿ ಆರತಿ ಬೆಳಗುವೆನು

---

ರವಿಕರವರಗೌರಂ ಚರ್ಮಚೈಣಂ ವಸಾನ-
ಸ್ಫಟಿಕಮಲ ಜಟಾಸಂದೀಪ್ತಚೂಡಂ ದಧಾನಃ ।
ವಿಸ್ತೀರ್ಣವಕ್ಷಾಃ ಕಮಲಾಯತಾಕ್ಷೋ ಬೃಹದ್ಭುಜಃ ಕಂಬುಸಮಾನಕಂಠಃ ।
ಸಮಸ್ತವೇದಾನ್ಮುಖತಃ ಸಮುದ್ಗಿರನ್ — ಅನಂತ ಚಂದ್ರಾಧಿಕಕಾಂತಿಸನ್ಮುಖಃ ।
ಪ್ರಬೋಧಮುದ್ರಾಭಯದೋರ್ಧ್ವಯಾನ್ವಿತೋ
ಯಜ್ಞೋಪವೀತಾಜಿನ ಮೇಖಲೋಲ್ಲಸನ್ ।
ದೃಶಾ ಮಹಾಜ್ಞಾನಭುಜಂಗದಷ್ಟ-
ಮಂಜೀವಯಾನೋ ಜಗದತ್ಯರೋಚತ ।
ನಮೋ ನಮೋಽಗಣ್ಯಗುಣೈಕಧಾಮ್ನೇ ಸಮಸ್ತವಿಜ್ಞಾನಮರೀಚಿಮಾಲಿನೇ ।
ಅನಾದ್ಯವಿಜ್ಞಾನತಮೋನಿಹಂತ್ರೇ ಪರಾಮೃತಾನಂದಪದಪ್ರದಾಯಿನೇ ।
[87] ಅರ್ಚತ ಪ್ರಾರ್ಚತ ಪ್ರಿಯಮೇಧಾಸೋ ಅರ್ಚತ
ಅರ್ಚಂತು ಪುತ್ರಕಾ ಉತ ಪುರಂ ನ ಧೃಷ್ಣ್ವರ್ಚತ

[ಅರ್ಚಿಸಿರರ್ಚಿಸಿ ಚೆನ್ನಾಗಿ ಅರ್ಚಿಸಿ ಯಜ್ಞಾದಿ ಕರ್ಮದಿ ಧ್ಯಾನದಿಂದ
ಅರ್ಚಿಸಿರರ್ಚಿಸಿ ಜ್ಞಾನಿಗಳೆಲ್ಲರೂ ಹಿರಿಯರು ಕಿರಿಯರು ಶ್ರೀಹರಿಯ
ಜ್ಞಾನದ ಬಯಕೆಯ ಎಲ್ಲರೂ ಪೂಜಿಸಿ ಧ್ಯಾನಾದಿ ಯಜ್ಞಾದಿ ಕರ್ಮಗಳಿಂ
ತಾನವ ಹರಿಯು "ದೇಹವು ದೇಹಾಭಿಮಾನಿಯು ಪ್ರತಿಮೆಯು" ಎಂದೆನ್ನದೆ
ಲಕ್ಷ್ಮಿಯಿಂದುದಿಸುತ ಜ್ಞಾನವು ಭಕ್ತಿಯು ಲಕ್ಷ್ಮಿಯ ಎಡೆಗೇ ಹರಿಯುತಲಿ
ಮೋಕ್ಷವ ಸಂಪದ ನೀಡುತ ಕಾವುದು ಜ್ಞಾನವ ಭಕ್ತಿಯ ಹೊಗಳುವರ್ಗೆ
ಲಕ್ಷ್ಮಿಯ ಭಜಿಸುತಲಾನಂದಪಡುವರ್ಗೆ ಮೋಕ್ಷವು ಸಂಪದ ನಿಶ್ಚಯವು
ಆ ಕ್ಷೀರಸಾಗರ ಶ್ರೀಹರಿಮಂದಿರದಲ್ಲಿಷ್ಟವನ್ನವರು ಪಡೆಯುವರು
ಲಕ್ಷ್ಮಿಯೇ ಈವಳು ಶ್ರೀಹರಿಭಜಕರ್ಗೆ ಮೋಕ್ಷವ ಸಂಪದವೆಲ್ಲವನು
ಲಕ್ಷ್ಮಿಯ ಮಹಿಮೆ ಅರಿತರ್ಗೆ ಸಂತತಿ ಪಶು-ಸಂಪದ ತಾ ದೊರಕುವುದು]
"ಸಾಮ್ರಾಜ್ಯಂ ಭೌಜ್ಯಂ ಸ್ವಾರಾಜ್ಯಂ ವೈರಾಜ್ಯಂ" ಎಂಬಂಥ ಮಂತ್ರವ ಪಠಿಸುತಲಿ
ಸೀಮೆಯ ಕಾಣದ ಮಹಿಮೆಯ ದೇವಗೆ ಮಂಗಳಆರತಿ ಬೆಳಗುವೆನು
ಮೂರ್ಬಾರಿ ಪಾದಕೆ ಮೂರ್ಬಾರಿ ಮಧ್ಯಕೆ ಮೂರ್ಬಾರಿ ಮುಖಕ್ಕೆ ಆರತಿಯ
ಮೂರ್ಬಾರಿ ಸರ್ವಾಂಗಕ್ಕಾರತಿ ಬೆಳಗುವೆ ಚಕ್ರ ಆಕಾರದಿಂ ನಾನೀಗಲೆ
ಆರತಿ ಸಮಯದಿ ಝಾಂಗಟೆ ಗಂಟೆಯು ತಾಳವು ಇತ್ಯಾದಿ ವಾದ್ಯಗಳ
ಬಾರಿಸಿ ಆ ನಾದಸಹಿತದಿ ಬೆಳಗುವೆ ದೇವಗೆ ಮಂಗಳಆರತಿಯ
ಶ್ರೀರಮೆಯರಸನ ಸುವ್ಯಾಪ್ತರೂಪಕೆ ಮತ್ತಿನ್ನು ಅಣುರೂಪ ವಟುರೂಪಕೆ
ತಾರುಣ್ಯರೂಪಕೆ ಮೇಲಿನ್ನು ಶ್ರೀಹರಿಯಿಂದಲಿ ತೊಡಗುತ ದೇವೇಂದ್ರನ[88]
ತನಕದ ಆ ಮಹಾ ದೇವರ್ಕಳೆಲ್ಲರ್ಗೆ ಅವರೆಲ್ಲ ಪುತ್ರರ್ಗೆ ಮತ್ತಿತರ
ಘನ ದೇವರ್ಕಳ್ಗೆ ಅವರವಟುತರುಣ ರೂಪಗಳೆಲ್ಲಕೂ ನಮಿಸುವೆನು

---

ನಿಷುಸೀದ ಗಣಪತೇ... (ಪಾದಟಿಪ್ಪಣಿ 23 ನೋಡಿ)
ಶ್ರಿಯೇ ಜಾತಃ ಶ್ರಿಯ ಆ ನಿರಿಯಾಯ ಶ್ರಿಯಂ ವಯೋ ಜರಿತೃಭ್ಯೋ ದಧಾತಿ
ಶ್ರಿಯಂ ವಸಾನಾ ಅಮೃತತ್ವಮಾಯನ್ ಭವಂತಿ ಸತ್ಯಾ ಸಮಿಥಾಮಿತದ್ರೌ ।
ಶ್ರಿಯ ಏವೈನಂ ತಚ್ಛ್ರಿಯಮಾ ದಧಾತಿ ಸಂತತಮೃಚಾವಷಟ್ಕೃತ್ಯಂ ।
ಶ್ರಿಯ ಏವೈನಂ ತಚ್ಛ್ರಿಯಮಾ ದಧಾತಿ ಸಂತತಮೃಚಾವಷಟ್ಕೃತ್ಯಂ
ಸಂತತ್ಯೈ ಸಂಧೀಯತೇ ಪ್ರಜಯಾ ಪಶುಭಿರ್ಯ ಏವಂ ವೇದ ।
ಸಾಮ್ರಾಜ್ಯಂ ಭೌಜ್ಯಂ ಸ್ವಾರಾಜ್ಯಂ ವೈರಾಜ್ಯಂ ಪಾರಮೇಷ್ಠ್ಯಂ ।
ರಾಜ್ಯಂ ಮಹಾರಾಜ್ಯಮಾಧಿಪತ್ಯಮಯಂ ಸಮಂತ ಪರ್ಯಾಯೀ ಸ್ಯಾತ್ ।
ಸಾರ್ವಭೌಮಃ ಸಾರ್ವಾಯುಷ ಆಂತಾದಾಪರಾರ್ಧಾತ್ ಪೃಥಿವ್ಯೈ
ಸಮುದ್ರಪರ್ಯಂತಾಯಾ ಏಕರಾಳಿತಿ
ಓಂ ನಮೋ ನಾರಾಯಣಾಯ ನೀರಾಜನಂ ಸಮರ್ಪಯಾಮಿ



ದೇವರ್ಕಳೆಲ್ಲರೆ ನಮ್ಮಯ ಶಕ್ತಿಯ ಮಿತಿಯಲ್ಲಿ ನಿಮ್ಮನು ಪೂಜಿಸೆವು
ಈ ವಿಧ ಪೂಜಿಸಲಾಗದೆ ಇದ್ದರೂ ನಿಮ್ಮಯ ಸೋತ್ರವ ತಪ್ಪಿಸೆವು

## ಅಷ್ಟಪುಷ್ಪಸಮರ್ಪಣೆ

ಶ್ರೀಹರಿಗಾ ಮೂಲಮಂತ್ರದಿಂ ಅರ್ಪಿಪೆ ಮಾನಸಪುಷ್ಪಗಳೆಂಟರನು[89]
ಅಹಿಂಸೆ ದಮೆಯು ದಯಾ ಕ್ಷಮೆ ಜ್ಞಾನ ತಪ ಧ್ಯಾನ ಸತ್ಯವೇ ಅವೆಂಟೆಂದು
ಬೊಗಸೆಲಿ ಹೂಗಳ ಹಿಡಿಯುತ ನಂತರ ದೇವಂಗೆ ಪುಷ್ಪದ ಅಂಜಲಿಯ
ನಿಗಿಲಾಗಿ ವೇದೋಕ್ತ ಪುರಾಣದಲ್ಲುಕ್ತ ಮಂತ್ರದ ಸಹಿತದಿ ಅರ್ಪಿಸುವೆ

## ಮಂತ್ರಪುಷ್ಪ[90]

[ತಂದೆಯು ತಾನಾಗಿ ಕಾವನು ತಾನಾಗಿ ನಿಯಮನ ಮಾಡುತ ತಾನಿರುತ
ಚಂದದ ಆ ತೇಜೋಲೋಕಗಳೆಲ್ಲವ ಚೆನ್ನಾಗಿ ಬಲ್ಲವ ಯಾವನವ
ಹೆಸರಿತ್ತು ಸುರರಿಗೆ ಪ್ರತಿಪಾದ್ಯ ತಾನಾಗಿ ಯಾವಾತ ಬಲುವಾಗಿ ಬೆಳಗಿಹನೋ
ವಿಷಯವು ತಾನವ ಬ್ರಹ್ಮಜಿಜ್ಞಾಸೆಗೆ ಸಾಗವುಪ್ರಾಣಿಗಳವನಲ್ಲಿಗೆ
ರಾಜಾಧಿರಾಜನೆ ಬಲು ಬಲವಂತನೆ ಕುಬೇರ.ವೈಶ್ರವಣ ನಾಮಕನೆ
ತೇಜನೆ ಶ್ರೀಹರಿ ಕಾಮಿತವೀಯುತ ಕಾಯಯ್ಯ ಮಹರಾಜ ನಮಿಸುವೆನು]
ರಾಜಾಧಿರಾಜರ್ಗೇ ಸಲ್ಲುವ ಸೇವೆಯ ದೇವನೆ ನಿನಗೀಗ ಒಪ್ಪಿಸುವೆ
ಶ್ರೀಜಗದೀಶನೇ ಪಠಿಸುತ ಆ ಮೂಲಮಂತ್ರವನವುಗಳ ಒಪ್ಪಿಸುವೆ

---

88 ನಮೋ ಮಹದ್ಭ್ಯೋ ನಮೋ ಅರ್ಭಕೇಭ್ಯೋ
ನಮೋ ಯುವಭ್ಯೋ ನಮೋ ಆಶಿನೇಭ್ಯಃ ।
ಯಜಾಮ ದೇವಾನ್ ಯದಿ ಶಕ್ನವಾಮ
ಮಾ ಜ್ಯಾಯ ಸಃ ಶಂಸಮಾವೃಕ್ಷಿ ದೇವಾಃ ॥

89 ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯನಿಗ್ರಹಃ ।
ಸರ್ವಭೂತದಯಾಪುಷ್ಪಂ ಕ್ಷಮಾಪುಷ್ಪಂ ವಿಶಿಷ್ಯತೇ ॥
ಜ್ಞಾನಪುಷ್ಪಂ ತಪಃಪುಷ್ಪಂ ಧ್ಯಾನಪುಷ್ಪಂ ಚ ಸಪ್ತಮಮ್ ।
ಸತ್ಯಂ ಚೈವಾಷ್ಟಮಂ ಪುಷ್ಪ—ಮೇಭಿಸ್ತುಷ್ಯತಿ ಕೇಶವಃ ॥

ಸಮರ್ಪಣ ಮಂತ್ರ—
ಆರಾಧಯಾಮಿ ಮಣಿಸನ್ನಿಭಮಾತ್ಮಬಿಂಬೇ
ಮಾಯಾಪುರೇ ಹೃದಯಪಂಕಜಸನ್ನಿವಿಷ್ಟಮ್ ।
ಶ್ರದ್ಧಾನದೀ ವಿಮಲ ಚಿತ್ತಜಲಾಭಿಷೇಕಂ
ಭಾವಷ್ಟಪುಷ್ಪಾ ವಿಧಿನಾ ಹರಿಮರ್ಚಯಾಮಿ ॥

ಚಾಮರ ಹಾಕುವೆ ಕನ್ನಡಿ ತೋರುವೆ ಛತ್ರವ ಹಿಡಿಯುತ್ತ ವಾಹನವ
ನಾ ಮತ್ತೆ ಚಿಂತಿಸಿ ಗೀತವ ಹಾಡುವೆ ನರ್ತನ ಮಾಡುವೆ ಸೇವೆಯೆಂದು
ವಾದ್ಯದ ಸೇವೆಯ ಸಲ್ಲಿಸಿ ನಂತರ ವ್ಯಜನದಿಂ ಗಾಳಿಯ ಹಾಕುತಲಿ
ಆದ್ಯರಿಗಾದ್ಯಗೆ ನಂತರ ಉಯ್ಯಾಲೆ ಧ್ವಜವು ಪತಾಕೆಗಳೊಪ್ಪಿಸುವೆ

### ಶಂಖಭ್ರಮಣ[91]

ಪ್ರದಕ್ಷಿಣಾಕಾರ ಶಂಖದಿ ನೀರ್ತುಂಬಿ ದೇವಗ್ನಿವಾಳಿಸಿ ಮೂರ್ಬಾರಿ
ಅದನೀಗ ನಾ ಬೇರೆ ಪ್ರೋಕ್ಷಣಜಲವೆಂದು ಪಾತ್ರೆಲಿ ಸುರಿಯುತ ತೆಗೆದಿಡುವೆ
ನೀರನು ಶಂಖದಿ ತುಂಬುತ ಮುಟ್ಟುತ "ಧೇನು"ವೇ ಮೊದಲಾದ ಮುದ್ರೆಗಳ
ತೋರುತ ಆ ಮೂಲಮಂತ್ರವ ನಾನೆಂಟು ಬಾರಿಗೆ ಭಕ್ತಿಲಿ ಪಠಿಸುವೆನು

### ಪ್ರದಕ್ಷಿಣೆ-ನಮಸ್ಕಾರ

ನಂತರ ಮಾಡುವೆ ಪ್ರದಕ್ಷಿಣೆ ಹಾಕುತ ನಮಸ್ಕಾರ ನೇಮದಿ ಶ್ರೀಹರಿಗೆ
ಚಿಂತಿಸಿ ಪಠಿಸುತ "ಯಾನಿಕಾನಿಚೇ"ತ್ಯಾದಿ[92] ಮಂತ್ರವ ಭಕ್ತಿಯ ಭಾವದಿಂದ
[ನಾ ಜನ್ಮಜನ್ಮದಿ ಮಾಡಿದ ಉನ್ನತ ಪಾಪದ ನಾಶಕಿದೆನ್ನುತಲಿ
ಹೇ ಜಗದೀಶನೇ ಪ್ರದಕ್ಷಿಣೆ ಸಹವಾಗಿ ನಮಸ್ಕಾರವನ್ನೀಗ ಮಾಡುತಿಹೆ
ನಾ ಪಾಪಿ ಸರ್ವದಾ[93] ಪಾಪದಿ ರತನು ಪಾಪಾತ್ಮ ಪಾಪದ ಹೊರೆಯುವನು
ಶ್ರೀಪತಿ ಕೃಷ್ಣನೇ ಪಾಪಗಳೆಣಿಸದೆ ಕರುಣಾಳು ಪಾಲಿಸೋ ದಯದಿಂದಲಿ

---

[90] ಯೋ ನಃ ಪಿತಾ ಜನಿತಾ ಯೋ ವಿಧಾತಾ ಧಾಮಾನಿ ವೇದ ಭುವನಾನಿ ವಿಶ್ವಾ।
ಯೋ ದೇವಾನಾಂ ನಾಮಧಾ ಏಕ ಏವ ತಂ ಸಂಪ್ರಶ್ನಂ ಭುವನಾ ಯಂತ್ಯನ್ಯಾ॥ ಸ್ವಸ್ತಿ॥
ಓಂ ರಾಜಾಧಿರಾಜಾಯ ಪ್ರಸಹ್ಯ ಸಾಹಿನೇ ನಮೋ ವಯಂ ವೈಶ್ರವಣಾಯ ಕುರ್ಮಹೇ।
ಸಮೇ ಕಾಮಾನ್ ಕಾಮಕಾಮಾಯ ಮಹ್ಯಂ ಕಾಮೇಶ್ವರೋ ವೈಶ್ರವಣೋ ದಧಾತು।
ಕುಬೇರಾಯ ವೈಶ್ರವಣಾಯ ಮಹಾರಾಜಾಯ ನಮಃ॥
ಯೋ ವೈತಾ ಬ್ರಹ್ಮಣೋ ವೇದಾ—ನಮೃತೇ ನಾವೃತಾಂ ಪುರೀಮ್।
ತಸ್ಮೈ ಬ್ರಹ್ಮ ಚ ಬ್ರಹ್ಮಾ ಚ ಆಯುಷ್ಕೀರ್ತಿಂ ಪ್ರಜಾಂ ದದುಃ॥

[91] ಇಮಾ ಆಪಃ ಶಿವತಮಾ ಇಮಾ ವಿಶ್ವಸ್ಯ ಭೇಷಜೀಃ।
ಇಮಾ ರಾಷ್ಟ್ರಸ್ಯ ವರ್ಧನೀಃ ಇಮಾ ರಾಷ್ಟ್ರಭೃತೋಽಮೃತಾಃ।
ಇಮಾ ಆಪಃ ಶಿವಾ ಶುದ್ಧಾಃ ಶೀತಲಾಃ ಸಂತು ಪೂತಾಃ ಸೂರ್ಯಸ್ಯ ರಶ್ಮಿಭಿಃ।

[92] ಯಾನಿ ಕಾನಿ ಚ ಪಾಪಾನಿ ಜನ್ಮಾಂತರ ಕೃತಾನಿ ಚ।
ತಾನಿ ತಾನಿ ವಿನಶ್ಯಂತಿ ಪ್ರದಕ್ಷಿಣ ಪದೇಪದೇ।

[93] ಪಾಪೋಽಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ।
ತ್ರಾಹಿ ಮಾಂ ಕೃಪಯಾ ಕೃಷ್ಣಾ ಶರಣಾಗತವತ್ಸಲ॥
ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ।
ತಸ್ಮಾತ್ ಕಾರುಣ್ಯಭಾವೇನ ರಕ್ಷರಕ್ಷ ಜನಾರ್ದನ॥



ನಿನ್ನನು ಬಿಟ್ಟರೆ ಬೇರಿನ್ನು ಗತಿಯಿಲ್ಲ ದೇವೇಶನಾದಂಥ ಜನಾರ್ದನ
ನನ್ನನು ಬಿಡದಂತೆ ದಯದಿಂದಲೀಗ ನೀ ಕಾಪಾಡು ದೇವನೆ ಎನ್ನುತಿಹೆ
ಸಾಸಿರಸಾಸಿರಸಂಖ್ಯೆಯ ಅಪರಾಧ[94] ಹಗಲುರಾತ್ರ್ಯೆನ್ನದೆ ಮಾಡುತಿಹೆ
ಈಶ ಜನಾರ್ದನ ಕರುಣೆಯ ತೋರುತ ಕ್ಷಮಿಸುವುದೀಗ ನೀ ಬಿಡದಂತಲೆ]
ಆದಷ್ಟು ಶ್ರೀ "ಈಶಾವಾಸ್ಯ"ವೇ ಮೊದಲಾದ ಉಪನಿಷತ್‌ಗಳ ಪಾರಾಯಣ
ನೇಮದಿ ಮಾಡುವೆ ಪೂಜೆಯು ಸಾಂಗವು ತಾನಾಗಲೆಂದೀಗ ವೇಗದಲಿ
ಏರುತ ಪೂಜೆಯಕಟ್ಟೆಯ ಶ್ರೀಹರಿಧ್ಯಾನವ ಮನದಲಿ ಮಾಡುತಲೆ
ನೂರೆಂಟು ಬಾರಿಯ "ಅಷ್ಟಾಕ್ಷರ" ಜಪ ಮಾಡುವೆ ಭಕ್ತಿಲಿ ಬಿಡದೀಗ ನಾ

### ರಮಾಪೂಜಾ—ನೈವೇದ್ಯ

ಶ್ರೀರಮಾದೇವಿಯ ಪೂಜೆಯ ಮಾಡಲು ಬೇಗನೆ ಅನುವಾಗಿ ಅಭಿಷೇಕದ
ನೀರನು ಎರೆಯುತ ಆಂಭ್ರಣಿಸೂಕ್ತವ ಪಠಿಸುತ ದೇವಿಯ ಪೂಜಿಸುವೆ
ಪೂಜೆಯ ಕಾಲದಿ ಶ್ರೀಲಕ್ಷ್ಮೀಮಂತ್ರವ[95] ಪಠಿಸುತ ಭಕ್ತಿಲಿ ಒಪ್ಪಿಸುವೆ
ಆ ಜಗನ್ಮಾತೆಗೆ ತೀರ್ಥನಿರ್ಮಾಲ್ಯವ ಗಂಧವ ಪುಷ್ಪವ ನೈವೇದ್ಯವ

### ಶ್ರೀಮುಖ್ಯಪ್ರಾಣ ಪೂಜಾ—ನೈವೇದ್ಯ

ಶ್ರೀಮುಖ್ಯಪ್ರಾಣನ ಪೂಜೆಯ ಕಾಲಕೆ ಅಭಿಷೇಕ ಮಾಡಲು ಶ್ರೀ "ಬಳಿತ್ಥಾ"[96]
ಆ ಮಹಾಸೂಕ್ತವ ಭಕ್ತಿಯಿಂ ಪಠಿಸುತ ಉಪಚಾರವೆಲ್ಲವ ಸಲ್ಲಿಸುವೆ

---

[94] ಅಪರಾಧಸಹಸ್ರಾಣಿ ಕ್ರಿಯಂತೇಽಹರ್ನಿಶಂ ಮಯಾ।
ತಸ್ಮಾತ್ ಕಾರುಣ್ಯಭಾವೇನ ರಕ್ಷರಕ್ಷ ಜನಾರ್ದನ॥
ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂಜಗತ್।
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ಧನಮ್॥

[95] ಸದ್ಯಷ್ಟಂ ಸೂಕ್ತಮಖಿಲಂ ಕಾಮದಂ ಹರಿತುಷ್ಟಿದಮ್।
ವಾಚೋಽಂಭೃಣ್ಯಾಃ ಶ್ರಿಯೋಽಂಗಾನಿ ಶ್ರೀಲಕ್ಷ್ಮೀರ್ಮೇಂದಿರಾರಮಾ॥
ಕೌಶೇಯಪೀತವಸನಾಮರವಿಂದನೇತ್ರಾಂ
ಪದ್ಮದ್ವಯಾಭಯ ವರೋನ್ನತಪದ್ಮಹಸ್ತಾಮ್।
ಉದ್ಯಚ್ಛತಾರ್ಕಸದೃಶಾಂ ಪರಮಾಂಕಸಂಸ್ಥಾಂ
ಧ್ಯಾಯೇದ್ವಿಧೀಶನುತ ಪಾದಯುಗಾಂ ಧರಿ(ಜನಿ)ತ್ರೀಮ್॥

[96] ಪರಿಶಿಷ್ಟ ನೋಡಿ

[ಬಳಿತ್ಥಾಸೂಕ್ತಭಾವ

ತನ್ನಯ ಆ " ಮೂಲ "ರೂಪದ ಅದ್ಭುತ ಗುಣಗಳ ತನ್ನಯ ಆ " ಮೊದಲ "
ಉನ್ನತ ಜ್ಞಾನದ " ಹನುಮ "ದವತಾರದಿ ಚೆನ್ನಾಗಿ ತೋರಿಹ ಮುಖ್ಯಪ್ರಾಣ
ಆತನು ಶ್ರೀಹರಿಯಿಂದಲೇ ಹುಟ್ಟುತ ಹರಿಯಾಜ್ಞೆಯಿಂದಲೇ ಕಲ್ಯಾದ್ಯರ
ಅತಿಶಯದುಪಟಳ ಸಹಿಸುವ ಬಲಜ್ಞಾನ ವೇಗದ ಜಗಧಾರಿ ಮುಖ್ಯಪ್ರಾಣ
ಮತಿವಂತ " ಹನುಮ "ನು ಜ್ಞಾನಸ್ವರೂಪಿ ಶ್ರೀ " ರಾಮ "ನ ಹತ್ತಿರ ಕ್ರೀಡಿಸುತ
ಅತಿಶಯ ಸೇವೆಯು ಸಾಧಿಸಿ ಆ ಸತ್ಯವಂತನ " ಧೇನಾ " ಎಂತೆಂಬುವ
ದೇವರ್ಕಳೆಲ್ಲರ ಪೋಷಿಪ ಅಮೃತದ ಸೋನೆಯ ಸತ್ಯದ ನುಡಿಗಳನು
ದೇವಿ " ಶ್ರೀಸೀತೆ "ಗೆ ಭಾವದಿಂ ಒಯ್ದಿತ್ತು " ರಾಮ "ಗೆ ಉತ್ತರ ತಂದಿತ್ತನೋ
ದ್ವಿತೀಯ ಅವತಾರ " ಬಲಭೀಮ " ರೂಪವು ಕುರುಕುಲವಿನಾಶಿ " ಪೃಕ್ಷ"ನೆಂಬಾ
ಖ್ಯಾತಿಯ ಹೆಸರಲಿ ಬಹು ಅನ್ನ ಉಣ್ಣುತ ತಾ " ನಿತ್ಯ "ನಾಮಕನಾಗಿಹುದೋ
ಹರಿಯನ್ನು ತಿಳಿಸುವ ಏಳ್ವೇದ ಮುಂತಾದ ಆ " ವಿದ್ಯಾಮಾತೆ"ಯರ ಮಡಿಲಿನಲಿ
ನಿರುತವು ಮಲಗಿದ್ದು ನಿದ್ರೆಯಲಿದ್ದಂತೆ ಸದ್ವಿದ್ಯಾಧ್ಯಾನದಿ ಇರುತಿಹುದೋ
ವೇದಾಭಿಮಾನಿ " ಶ್ರೀ ಲಲನೆ ಭೂ ದುರ್ಗೆ "ರು ಜ್ಞಾನವು ಪೂರ್ಣವು ಆಗಲಿಕೆ
ಆ ದೇವ ವಾಯುವ ಮೂರನೆ ಆ " ದಶಪ್ರಮತಿ " ಸುರೂಪವ ಸೃಜಿಸಿದರೊ,
ಮೂರನೇ ಅವತಾರವಿದರಲಿ " ಶ್ರೀವಾಯು "ದೇವನು ಪಂಡಿತಜನರನೆಲ್ಲ
ಕರೆಯುತ ಹತ್ತಿರ ಸನ್ಮಾರ್ಗದರ್ಶನ ಮಾಡುತ ಮೇಲಿನ್ನು ರಕ್ಷಿಸುತ
ಉನ್ನತ ಜ್ಞಾನದ ತನ್ನಯ ತೃತೀಯ ರೂಪದೀ ಕಾರ್ಯವ ವಾಯುದೇವ
ಚೆನ್ನಾಗಿ ಮಾಡಿರೆ ರುದ್ರಾದ್ಯರೆಲ್ಲರೂ ಸೂರಿಗಳೆಲ್ಲರೂ ಸುಖಿಸಿದರು
" ಮಧ್ವ" ಎಂತೆಂಬುವ ನಾಮದಿ "ಶ್ರೀವಾಯು" ರುದ್ರಾದ್ಯರೆಲ್ಲರ್ಗೆ ಸುಮ್ಮಾನದಿ
ಹೃದ್ಗುಹಾವಾಸಿ ಶ್ರೀ" ಹರಿ "ಯೇ ತಾ ಽತಿಯೆಂದು ಶಾಸ್ತ್ರಾರ್ಥ ಮಥಿಸುತ
ತೋರಿದರೊ

ಆ ಯಾವಕಾರಣ ಉತ್ತಮ ತಂದೆಯು ಶ್ರೀಹರಿಯಾತನ ಪ್ರೇರಣೆಲಿ
ಆ ಯಾವ ಪ್ರಶ್ನೆಗಳ್ರೂಪದ ದಂಟನು ಹಲ್ಲಲಿ ಜಗಿಯುತ ಬಿಸುಡುವರೋ
ಅದಾವ ಕಾರಣ ಲಕ್ಷ್ಮೀನಾರಾಯಣರು " ಮಧ್ವ "ರುತ್ಪತ್ತಿಯ ಯುಗಯುಗದಿ
ವಿಧಿಸಿರೆ ಮೂರನೇ ಅವತಾರವಿದರಲಿ ಉನ್ನತದಯದಿವರು ವಿಪ್ರರಾಗಿ
ದೈತ್ಯರು ದೂಷಣೆ ಮುಂತಾದ ಆ ದುಷ್ಟಮಾರ್ಗದಿ ಸೆಣೆಸಿರೆ ಹಿಂಸಿಸದೆ
ಮುಕ್ತರು ಬ್ರಹ್ಮತ್ಯ ಮುಂತಾದ ದೋಷದಿಂ ತಾವಾಗಿ ಬಲುಬಲು ಬೆಳಗಿದರೋ
ತ್ರೇತೆಲಿ ದ್ವಾಪರದಿ ಮತ್ತಿನ್ನು ಕಲಿಯುಗದಿ. "ಶ್ರೀಮಹಾವಿಷ್ಣು "ವಿನಾಜ್ಞೆಯಿಂದ
ಮಾತೆರಾ " ಅಂಜನೆ ಕುಂತಿಯು ವಿಪ್ರನ ಪತ್ನಿ "ಯ ಉದರಗಳ್ಸೇರುತಲಿ
ತನ್ನಯ ಶಕ್ತಿಲಿ ಗರ್ಭದ ವಾಸದ ದುಷ್ಕರ್ಮಹಿಂಸೆಯಿಂ ದೂರಾಗುತ
ಚೆನ್ನಾಗಿ ಉತ್ಪತ್ತಿ ಪಡೆಯುತ ಬೆಳೆಯುತ ಅಭಿವೃದ್ಧಿಯನ್ನವರು ಹೊಂದಿದರೋ



ಪರಮಾತ್ಮನಾತನ ಪ್ರತಿಪಾದಿಪಂತಹ " ನಿತ್ಯ ಅನಾದಿ " " ಅಪೌರುಷೇಯ "
ಆ ಋಗಾದಿ ವಿದ್ಯೆಗಳರ್ಥವ ಸಕ್ರಮ ಸುಯೋಗ್ಯ ರೀತಿಲಿ ಚಿಂತಿಸುತ
ನಿಧಾನ ವ್ಯಾಖ್ಯೆಯ ನೀಡುತ "ಪಂಚರಾತ್ರರಾಮಾಯಣ ಭಾರತ" "ಪೌರುಷೇಯ"
ವಿಧಿಗಳ ಗ್ರಂಥಕೆ ವೇಗದಿ ಹೇಳುತ ಏಳ್ವಿದ್ಯೆಗಳರ್ಥವ ಬೆಳಗಿದರೊ ]

## ಗರುಡ-ಶೇಷರ ಪೂಜೆ

ಗರುಡನ ಶೇಷನ ಪೂಜಿಸಿ ತೀರ್ಥವ ಗಂಧನಿರ್ಮಾಲ್ಯವ ನೈವೇದ್ಯವ
ಗರುಷದಿ ಈಯುತ ಇತರ ದೇವರ್ಕಳ ಸ್ಮರಿಸುತ ಕೊಡುವೆನು ಪ್ರಸಾದವ
ಬ್ರಹ್ಮಾದಿ ಸನಕಾದಿ ಶುಕಾದಿಗಳಿಗೀಗ ತೀರ್ಥಪ್ರಸಾದವ ಈ ಪರಿ ನಾ
ಒಮ್ಮನದಿಂದಿತ್ತು ಹರಿಯ ಪ್ರಸಾದದ ಭಾಗವನವರ್ಗೀಗ ಒಪ್ಪಿಸುವೆ

## ತತ್ತ್ವನ್ಯಾಸ ಮಾತೃಕಾನ್ಯಾಸ

ತೀರ್ಥಪ್ರಸಾದಗಳೀಪರಿ ನಾನಿತ್ತು ಮಾಡುವೆ ಮತ್ತೊಮ್ಮೆ ಪ್ರತಿಮೆಯಲಿ
ಅರ್ಥಿಯಲಾ ತತ್ತ್ವ-ಮಾತೃಕಾನ್ಯಾಸವ ಪೂಜೆಯ ಮುಗಿಸುವ ಕಾಲದಲಿ
ಧ್ಯಾನಿಸಿ ಹರಿಯನು ಪಠಿಸುತಲಿ " ಆತ್ಮ ದೇವಾನಾಂ " ಎಂಬಂಥ ಋಙ್ಮಂತ್ರವ
ನಾನೀಗ ತೋರುವೆ ವಿಪರೀತ ಕ್ರಮದಿಂದ " ಆವಾಹನೇ "ತ್ಯಾದಿ ಮುದ್ರೆಗಳ

## ಪುನಃಪ್ರಾರ್ಥನೆ

97[ನೀನಿಂದು ಮಾಡಿಸಿದೀ ಪೂಜೆ ನಿನ್ನಯ ಪ್ರಸಾದ ತಾನದು ಬೇರಿಲ್ಲವೋ
ನಾ ಮತ್ತೆ ದಾಸನು ಲೌಕಿಕ-ವೈದಿಕ ವಿಧಿನಿಷೇಧಗಳರಿಯದವ

---

97 ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ ಚಾಖಿಲಮ್ ।
ತಥಾಽಪಿ ಮತ್ಕೃತಾ ಪೂಜಾ ತ್ವತ್ಪ್ರಸಾದೇನ ನಾನ್ಯಥಾ ॥
ನ ಜಾನೇ ಕರ್ಮ ಯತ್ಕಿಂಚಿನ್ನಾಪಿ ಲೌಕಿಕ ವೈದಿಕೇ ।
ನ ನಿಷೇಧ ವಿಧಿ ವಿಷ್ಣೋ ತವ ದಾಸೋಽಸ್ಮಿ ಕೇವಲಮ್ ॥
ಮಾದೃಶೋ ನ ಪರಃ ಪಾಪೀ ತ್ವಾದೃಶೋ ನ ದಯಾಪರಃ ।
ಇತಿ ಮತ್ವಾ ಜಗನ್ನಾಥ ರಕ್ಷ ಮಾಂ ಗರುಡಧ್ವಜ ॥
ತದ್ಭಕ್ತಿಸ್ತತ್ಫಲಂ ಮಹ್ಯಂ ತ್ವತ್ಪ್ರಸಾದಃ ಪುನಃಪುನಃ ।
ಕರ್ಮನ್ಯಾಸೋ ಹರೇರೇವಂ ವಿಷ್ಣೋಸ್ತೃಪ್ತಿಕರಃ ಸದಾ ॥
ಯಾಚೇಽಹಂ ತ್ವಾಂ ಹೃಷೀಕೇಶ ನಮಾಮಿ ಪುರುಷೋತ್ತಮ
ಹೃದಯೇ ಕುರು ಸಂವಾಸಂ ಶ್ರಿಯಾ ಸಹ ಜಗತ್ಪತೇ ॥

ನನ್ನಂಥ ಪಾಪಿಯು ಇನ್ನಿಲ್ಲ ನಿನ್ನಂಥ ಘನಕರುಣಿ ತಾನೆಲ್ಲಿ ಮತ್ತಿಲ್ಲವೋ
ಸನ್ನುತಮಹಿಮನೆ ಶ್ರೀಗರುಡವಾಹನ ನನ್ನಯ ರಕ್ಷಣೆ ನಿನ್ನ ಭಾರವೋ
ಬಿಡದಂತೆ ಆ ಭಕ್ತಿ ಆ ಫಲಪ್ರಸಾದ ಎನಗಿನ್ನು ದೊರಕಲಿ ಮತ್ತೆಮತ್ತೆ
ಹಿಡಿದೆಲ್ಲ ಕರ್ಮವು ಹರಿಪೂಜೆಗಾಗಿದ್ದು ಶ್ರೀವಿಷ್ಣುತೃಪ್ತಿಗೆ ಒದಗಿರಲಿ
ಶ್ರೀಭಾರತೀರಮಣ ಆ ಮುಖ್ಯಪ್ರಾಣನ ಒಳಗಿಹ ಶ್ರೀಲಕ್ಷ್ಮೀನಾರಾಯಣ
ಶ್ರೀಭೂದುರ್ಗೆರ ಸಹಿತದಿ ಈ ಪೂಜೆ ಪ್ರೀತಿಯಿಂ ಕೊಳ್ಳುತ ವರನೀವುದೋ ]

## ಪ್ರತ್ಯಾವಾಹನೆ

ಹಿಡಿಯುತ ಕೈಯಲಿ ತುಲಸಿಯ ಹೂಗಳ ಪ್ರಾರ್ಥನೆ ಸಲಿಸುತ ಭಕ್ತಿಯಲಿ
ಬೇಡುವೆ " ಏಹ್ಯೇಹಿ " ಎನ್ನುತ ಹರಿಯನು ಹೃದಯಕೆ ಮತ್ತೀಗ ಮರಳಲಿಕೆ
ಸ್ವಾಮಿಯೆ ಹೃಷೀಕೇಶ ಸಿರಿಸಹ ಹೃದಯದಿ ವಾಸಿಸೆ ಬಾರೆಂದು ಬೇಡುತಲಿ
ನೇಮದಿ ನಂತರ ಮಾಡುವೆ ಆ ತತ್ತ್ವ ಮಾತೃಕಾನ್ಯಾಸವ ನನ್ನಲಿ ನಾ

## ಕೃಷ್ಣಾರ್ಪಣ

ಧ್ಯಾನಿಸಿ " ಉದ್ಯದ್‌ಭಾಸ್ವತ್ " ಇತ್ಯಾದಿ ಮಂತ್ರದಿಂ ವಿಷ್ಣುವ ಮನದಲೀಗ
ನಾನಿನ್ನು ಈ ಪೂಜಾ ಕರ್ಮವ ಅರ್ಪಿಪೆ ಆ " ಯಸ್ಯ ಸ್ಮೃತ್ಯಾದಿ" ಮಂತ್ರದಿಂದ
ಯಾರ ಆ ಸಂಸ್ಮರಣೆ[98] ನಾಮದುಚ್ಚಾರಣೆ ತಪಸಿನ ಪೂಜೆಯು ಕರ್ಮದಲಿ
ತೋರಿಹ ಲೋಪವ ಪೂರ್ಣವಗೊಳಿಸುವದಾತನಚ್ಯುತನ್ನ ವಂದಿಸುವೆ
ನಾ ಮಾಡಿದಂತಹ ಕರ್ಮದಿ ತೋರಿಹ ಮಂತ್ರದ ಕ್ರಿಯೆಯು ಆ ಭಕ್ತಿಯು
ಆ ಮಹಾಲೋಪಗಳೆಲ್ಲವೂ ಪರಿಪೂರ್ಣವಾಗಲಿ ನಿನ್ನಿಂದ ರಮೆಯ ಪತಿ
ವ್ಯೈಮನ ಮಾತಿನ[99] ಇಂದ್ರಿಯಕಾರ್ಯವು ಬುದ್ಧಿಯು ಆತ್ಮವು ಇವುಗಳಿಂದ
ನಾ ಮಾಡಿದಂತಹ ಸ್ವಭಾವಕರ್ಮವು ಶ್ರೀಹರಿ ನಿನಗದು ಅರ್ಪಿತವೋ

---

[98] ಯಸ್ಯ ಸ್ಮೃತ್ಯಾಚ ನಾಮೋಕ್ತ್ಯಾ ತಪಃಪೂಜಾಕ್ರಿಯಾದಿಷು ।
ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಮ್ ॥
ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ರಮಾಪತೇ ।
ಯತ್ಕೃತಂ ತು ಮಯಾ ದೇವಾ ಪರಿಪೂರ್ಣಂ ತದಸ್ತು ಮೇ ॥

[99] ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥



## ಸಮಾಪನ

ಮುಚ್ಚುತ ಸಂಪುಟವೆಲ್ಲವ ದೇವರ ಪೆಟ್ಟಿಗೆಲ್ಲವುಗಳ ಭದ್ರಗೈವೆ
ಅಚ್ಯುತನಾ ಪೂಜೆ ಸಮಾಪ್ತಿವೇಳೆಲಿ ಪಠಿಸುವೆನಾದಷ್ಟು ಮನ್ಯುಸೂಕ್ತ[100]

## ವೈಶ್ವದೇವ—ಬಲಿಹರಣ—ಗೋಗ್ರಾಸ

ಪೂಜಿಸಿ ಅಗ್ನಿಯ ವಿಧಿ ವೈಶ್ವದೇವವ ಬಲಿಹರಣೇತ್ಯಾದಿ ಮುಗಿಸುತಲಿ
ಪೂಜಿಸಿ ತುಲಸಿಯ ಗೋಗ್ರಾಸವೀಯುತ ಗುರುವರರ್ಗೀವೆನು ಹಸ್ತೋದಕ
ಕೊಡುವೆನು ನಂತರ ತೀರ್ಥ ಗಂಧಾಕ್ಷತೆ ವಿಪ್ರರಿಗೆಲ್ಲರ್ಗೂ ನಾ ಮುದದಿ
ಹಿಡಿವೆನು ತೀರ್ಥವ ಗಂಧವ ಅಕ್ಷತೆ ತುಲಸಿಯ ಸಹಿತದಿ ನಂತರ ನಾ

## [ಮನ್ಯುಸೂಕ್ತಭಾವ

ಇಂದ್ರನ ರೂಪದಿಂ ನರಹರಿ ವಜ್ರವ ಬಾಣದ ತೆರದಲಿ ಧರಿಸಿಹನೆ
ಎಂದೆಂದೂ ನಿನ್ನಯ ಓಜದಿ ತೇಜದಿ ಸೃಷ್ಟಿಯ ಪೋಷಿಸಿ ನಿಲ್ಲಿಸಿಹೆ
ನಮ್ಮರಿ ದಾಸರು ಕ್ಷುದ್ರರು ಮತ್ತಿನ್ನು ಆರ್ಯರು ಶಕ್ತರು ಇವರೆಲ್ಲರ
ಸುಮಹಿಮ ನಿನ್ನಯ ಸಹಾಯದಿಂದಲಿ ಅನುಗ್ರಹದಿಂದಲಿ ಓಡಿಪೆವು
ನೀನೇವೆ ಇಂದ್ರನು ನೀನೇವೆ ಹೋತನು ನೀನೇವೆ ವರುಣನು ಮತ್ತಗ್ನಿಯು
ನಿನಗಾಗಿ ಸಂತಸದೀತಪಸ್ತೋತ್ರವು ದೇವನೆ ನಮ್ಮನು ರಕ್ಷಿಪುದು
ಓಡಿಸು ನಮ್ಮೆಲ್ಲ ಶತ್ರುಗಳನ್ನೀಗ ವೃತ್ರಾದಿ ಅಸುರರ ಕೊಂದವನೆ
ಬಿಡದಂತೆ ಒಳಗಣ ಶತ್ರುವ ಬೇಗನೆ ನಾಶವ ಮಾಡುತ ಸಂಪದವೀ
ಸರ್ವರ ಗೆಲಬಲ್ಲ ಓಜಸ್ವೀ ಸ್ವಯಂಭೂ ಚಿನ್ಮಯತೇಜನೆ ಅರಿಂದಮ
ಸರ್ವಜ್ಞ ಸಹಿಷ್ಣು ಬಲವೀರ್ಯವಂತನೆ ಗೆಲಿಪುದು ನಮ್ಮನು ಯುದ್ಧದಲಿ
ನಾನೆಂಥ ನಿರ್ಭಾಗ್ಯ ನಿನ್ನಯ ಪೂಜೆಯ ಮಾಡದೆ ಸಂಪದ ನೀಗಿದೆನು
ಸ್ಥಾನಭ್ರಷ್ಟನೆನ್ನ ನಿನ್ನವನೆಂಬುದ ಮರೆಯದೆ ಬಂದೀಗ ನೀ ಬಲವೀ
ಹೇ ಸಹಿಷ್ಣು ಶಕ್ತನೆ ಹೇ ವಜ್ರಧಾರಿಯೇ ಹೇ ವಿಶ್ವಧಾರನೆ ಬಂದೀಗೆನ್ನ
ನೀ ಸುತ್ತಮುತ್ತಿದ್ದು ಎಚ್ಚರವೀಯಯ್ಯ ಕೊಲ್ಲುವ ನಾವೀಗ ಶತ್ರುಗಳ
ಬಲಬದಿ ಬಾ ಈಗ ಅರ್ಪಿಪೆ ಮೊದಲಿಗೆ ಕುಡಿಯಲು ನಿನಗೆ ಸೋಮರಸ
ಬಲವೀವರಸವದ ಪಾನವ ಮಾಡುತ ಕೊಲ್ಲುವ ನಾವೀಗ ಶತ್ರುಗಳ
ನಿನ್ನಯ ಮುಂದಾಳುತನದಲಿ ಯೋಧರು ರಥವೇರಿ ಉತ್ಸಹದಿ ಶತ್ರುವೆಡೆ
ಉನ್ನತವೇಗದಿ ಬಾಣಗಳೆಸೆಯುತ ನುಗ್ಗಲಿ ಬೇಗನೆ ಅಗ್ನಿಯಾಗಿ

---

[100] ಪರಿಶಿಷ್ಟ ನೋಡಿ

ಸೇನಾನಿ ನೀನಾಗಿ ಸಹಿಷ್ಣು ನರಹರಿ ಜಯವಂತ ಬೇಗನೆ ಬೆಂಕಿಯಂತೆ
ನೀನೀಗ ವರ್ಧಿಸಿ ವೈರಿಯ ಗುರ್ತಿಸಿ ಸೋಲಿಸುತವರನು ಸಂಹರಿಸು
ಅರಿತಿಹೆ ನೀ ನಮ್ಮ ಸಾಮರ್ಥ್ಯವೆಲ್ಲವ ಸೋಲನು ಈಗಲೇ ಕಂಡಿರುವ
ಅರಿಗಳ ನಮ್ಮೊಶ ಗೈಯುತ ಉಳಿದಿಹ ಶತ್ರುಗಳೆಲ್ಲರ ಸಂಹರಿಸು
ಸ್ವತಂತ್ರ ನರಹರಿ ನಮಗಾಗಿ ವೈರಿಯ ರೋಗದಿಂ ರುಜಿನದಿಂ ಕಳೆಯುವುದೊ
ಖತಿದೋರುತವರನು ಉಳಿಯದಂತಾಗಿಸು ಉಗ್ರಪ್ರತಾಪವು ನಿಂದಚಲ
ಸ್ತೋತ್ರಸತ್ಪಾತ್ರನು ನೀನೊಬ್ಬನಲ್ಲವೇ ಯೋಧರ ನಡೆಸು ಯುದ್ಧದೀಗ
ಉತ್ತಮ ನಿನ್ನಯ ಬೆಂಬಲದಿ ವಿಜಯದ ಸಿಂಹದ ನಾದವ ಮೊಳಗಿಪೆವೊ
ಜಯವನು ಬಯಸುವ ಇಂದ್ರನ ತೆರದಲಿ ನೀನಾಗಿ ಅಧಿಪತಿ ರಕ್ಷಿಸು ಬಾ
ಪ್ರಿಯನುಡಿಯಾಡುತ ನಿನಗೆ ಸಂತೋಷವ ತರುವೆವು ಶಕ್ತನೆ ಸಹಿಷ್ಣುವೆ
ಹೇ ವಜ್ರಬಾಣನೆ ಸಂಪತ್ಸವೃದ್ಧನೇ ಉತ್ತಮ ಬಲವಂತ ಶತ್ರುಹಾರಿ
ಸೇವೆಯನೊಪ್ಪುತ ಪ್ರಸನ್ನ ನೀನಾಗಿ ಅತಿಧನವಂತರನಾಗಿಸೆಮ್ಮ
ವರುಣನು ನರಹರಿ ಶತ್ರುಗಳಲ್ಲಿಹ ಸಂಪದವೆಲ್ಲವ ವಿಭಜಿಸುತ
ದೊರಕಿಸಿಕೊಡಲಾಗ ಬೆದರುತ ಶತ್ರುಗಳೆಲ್ಲರೂ ದೇಶವ ಬಿಟ್ಟೋಡಲಿ]
ಶ್ರೀ ಜಯತೀರ್ಥರ ಕರುಣೆಯ ಬೇಡುತ ಶ್ರೀ ವಿಜಯರಾಯರ ಸ್ಮರಿಸುತ ನಾ
ಓಜೆಯ ಸ್ವಗುರುವರರನು ವಂದಿಸಿ ಮುಗಿಸುವೆನೀ ಅಲ್ಪಕೃತಿಯನ್ನು ನಾ

### ಗ್ರಂಥಋಣ

ಆ ದೇವಭಾಷೆಯ ಗಂಧವನರಿಯದ ನಾಸೀಗ ಬಲ್ಲವರ ಪ್ರಾಕೃತದ
ಆ ದೇವಪೂಜೆಯ ವರ್ಣನಾಗ್ರಂಥಗಳಲ್ಲರಿತಷ್ಟ ನಾನಿಲ್ಲಿ ತೋರಿರುವೆ

### ಮುಕ್ತಾಯ—ಸಮರ್ಪಣೆ

ಶ್ರೀಶಕೆ ಸಾವಿರದ ಒಂಭೈನೂರಾಎಂಟು ವತ್ಸರ ಅಕ್ಷಯ ಮಾಘದಲಿ
ಆ ಸಮೀರನವತಾರ ಶ್ರೀಮಧ್ವರದೃಶ್ಯರಾದಂಥ ದಿನವದು ಬಂದಿರಲು
ಮುಗಿದಂಥ ಈ ಕೃತಿ ಶ್ರೀಹರಿ ಪಾಮರಗೆ ಕರುಣದಿ ಇತ್ತಂಥ ಹೂವದೆಂದು
ಬಗೆಯುತಲಾತನ ಚರಣಗಳಲ್ಲಿದನ ಭಕ್ತಿಯ ಭಾವದಿಂ ಅರ್ಪಿಸುವೆ

### ಅಂಕಿತಲೇಖನ

ದೇವನು ಶ್ರೀ ಸೀತಾರಾಮವಿಠ್ಠಲನು ಈ ಪರಿ ನುಡಿಯಲು ಪ್ರೇರಿಸಿರೆ
ಆವದೂ ನನ್ನದು ಎನ್ನದೆ ಬೇಡುವೆ ಸಜ್ಜನರಾಶೀರ್ವಚನವನು

ಶ್ರೀಮಧ್ವೇಶಾರ್ಪಣಮಸ್ತು

ಸಂಪೂರ್ಣ

# ಪರಿಶಿಷ್ಟ

## ಬ್ರಹ್ಮಪಾರಸ್ತೋತ್ರ

ಪ್ರಚೇತಸ ಊಚುಃ—
ಬ್ರಹ್ಮಪಾರಂ ಮುನೇ ಶ್ರೋತು—ಮಿಚ್ಛಾಮಃ ಪರಮಂ ಸ್ತವಮ್ ।
ಜಪತಾ ಕಂಡುನಾ ದೇವೋ ಯೇನಾರಾಧ್ಯತ ಕೇಶವಃ ॥

ಸೋಮ ಉವಾಚ—
ಪಾರಂ ಪರಂ ವಿಷ್ಣುರನಂತಪಾರಃ ಪರಃ ಪರಾಣಾಮಪಿ ಪಾರಪಾರಃ ।
ಸ ಬ್ರಹ್ಮಪಾರಃ ಪರಪಾರಭೂತಃ ಪರಃ ಪರೇಭ್ಯಃ ಪರಮಾರ್ಥರೂಪೀ ॥
ಸ ಕಾರಣಂ ಕಾರಣತಸ್ತತೋಽಪಿ ತಸ್ಯಾಪಿ ಹೇತುಃ ಪರಹೇತುಹೇತುಃ ।
ಕಾರ್ಯೇಷು ಚೈವಂ ಸ ಹಿ ಕರ್ಮಕರ್ತೃ ರೂಪೈರಶೇಷೈರವತೀಹ ಸರ್ವಮ್ ॥
ಬ್ರಹ್ಮಪ್ರಭುರ್ಬ್ರಹ್ಮ ಸ ಸರ್ವಭೂತೋ ಬ್ರಹ್ಮಪ್ರಜಾನಾಂ ಪತಿರಚ್ಯುತೋಽಸೌ ।
ಬ್ರಹ್ಮಾವ್ಯಯಂ ನಿತ್ಯಮಜಂ ಸ ವಿಷ್ಣು—ರಪಕ್ಷಯಾದ್ಯೈರಖಿಲೈರಸಂಗೀ ॥
ಬ್ರಹಾಕ್ಷರಮಜಂ ನಿತ್ಯಂ ಯಥಾಽಸೌ ಪುರುಷೋತ್ತಮಃ ।
ತಥಾ ರಾಗಾದಯೋ ದೋಷಾಃ ಪ್ರಯಾಂತು ಪ್ರಶಮಂ ಮಮ ॥
ಏತದ್ವೈ ಬ್ರಹ್ಮಪಾರಾಖ್ಯಂ ಸಂಸ್ತವಂ ಪರಮಂ ಪಠನ್ (ಜಪನ್) ।
ಅವಾಪ ಪರಮಂ ಸಿದ್ಧಿಂ ಸ ಸಮಾರಾಧ್ಯ ಕೇಶವಮ್ ॥

---

## ಜಿತಂತೇ ಸ್ತೋತ್ರ

ಬ್ರಹ್ಮೋವಾಚ—
ಜಿತಂತೇ ಪುಂಡರೀಕಾಕ್ಷ ಪೂರ್ಣಷಾಡ್ಗುಣ್ಯವಿಗ್ರಹ ।
ಪರಾನಂದ ಪರಬ್ರಹ್ಮನ್—ನಮಸ್ತೇ ಚತುರಾತ್ಮನೇ ೧
ನಮಸ್ತೇ ಪೀತವಸನ ನಮಃ ಕಟಕಧಾರಿಣೇ ।
ನಮೋ ನೀಲಾಲಕ ಬದ್ಧ—ವೇಣೀಸುಂದರ ಪುಂಗವ ೨
ಸ್ಫುರದ್ವಲಯಕೇಯೂರ—ನೂಪುರಾಂಗದಭೂಷಣೈಃ ।
ಶೋಭನೈರ್ಭೂಷಿತಾಕಾರ ಕಲ್ಯಾಣಗುಣರಾಶಯೇ ೩
ಕರುಣಾಪೂರ್ಣಹೃದಯ ಶಂಖಚಕ್ರಗದಾಧರ ।
ಅಮೃತಾನಂದಪೂರ್ಣಾಭ್ಯಾಂ ಲೋಚನಾಭ್ಯಾಂ ವಿಲೋಕಯ ೪

ಕೃಶಂ ಕೃತಘ್ನಂ ದುಷ್ಕರ್ಮ—ಕಾರಿಣಂ ಪಾಪಭಾಜನಮ್ ।
ಅಪರಾಧಸಹಸ್ರಾಣಾ—ಮಾಕರಂ ಕರುಣಾಕರ ೫
ಕೃಪಯಾ ಮಾಂ ಕೇವಲಯಾ ಗೃಹಾಣ ಮಧುರಾಧಿಪ ।
ವಿಷಯಾರ್ಣವಮಗ್ನಂ ಮಾ—ಮುದ್ಧರ್ತುಂ ತ್ವಮಿಹಾರ್ಹಸಿ ೬
ಪಿತಾ ಮಾತಾ ಸುಹೃದ್ಬಂಧುರ್—ಭ್ರಾತಾ ಪುತ್ರಸ್ತ್ವಮೇವ ಮೇ ।
ವಿದ್ಯಾ ಧನಂ ಚ ಕಾಮಶ್ಚ ನಾನ್ಯತ್ ಕಿಂಚಿತ್ತ್ವಯಾ ವಿನಾ ೭
ಯತ್ರಕುತ್ರ ಕುಲೇ ವಾಸೋ ಯೇಷು ಕೇಷು ಭವೋಽಸ್ತು ಮೇ ।
ತವ ದಾಸ್ಯೈಕಭಾವೇ ಸ್ಯಾತ್ ಸದಾ ಸರ್ವತ್ರ ಮೇ ರತಿಃ ೮
ಮನಸಾ ಕರ್ಮಣಾ ವಾಚಾ ಶಿರಸಾ ವಾ ಕಥಂಚನ ।
ತ್ವಾಂ ವಿನಾ ನಾನ್ಯಮುದ್ದಿಶ್ಯ ಕರಿಷ್ಯೇ ಕಿಂಚಿದಪ್ಯಹಮ್ ೯
ಪಾಹಿ ಪಾಹಿ ಜಗನ್ನಾಥ ಕೃಪಯಾ ಭಕ್ತವತ್ಸಲ ।
ಅನಾಥೋಽಹಮಧನ್ಯೋಽಹ—ಮಕೃತಾರ್ಥೋ ಹ್ಯಕಿಂಚನಃ ೧೦
ನೃಶಂಸಃ ಪಾಪಕೃತ್ ಕ್ರೂರೋ ವಂಚಕೋ ನಿಷ್ಠುರಃ ಶಠಃ (ಸದಾ) ।
ಭವಾರ್ಣವನಿಮಗ್ನಂ ಮಾ—ಮನನ್ಯಕರುಣೋದಧೇ ೧೧
ಕರುಣಾಪೂರ್ಣದೃಷ್ಟಿಭ್ಯಾಂ ದೀನಂ ಮಾಮವಲೋಕಯ ।
ತ್ವದಗ್ರೇ ಪತಿತಂ ತ್ಯಕ್ತುಂ ತಾವಕಂ ನಾರ್ಹಸಿ ಪ್ರಭೋ ೧೨
ಮಯಾ ಕೃತಾನಿ ಪಾಪಾನಿ ತ್ರಿವಿಧಾನಿ ಪುನಃಪುನಃ ।
ತ್ವತ್ಪಾದಪಂಕಜಂ ಪ್ರಾಪ್ತುಂ ನಾನ್ಯತ್ತ್ವತ್ಕರುಣಾಂ ವಿನಾ ೧೩
ಸಾಧನಾನಿ ಪ್ರಸಿದ್ಧಾನಿ ಯಾಗಾದೀನ್ಯಬ್ಜಲೋಚನ ।
ತ್ವದಾಜ್ಞಯಾ ಪ್ರಯುಕ್ತಾನಿ ತ್ವಾಮುದ್ದಿಶ್ಯ ಕೃತಾನಿ ವೈ ೧೪
ಭಕ್ತ್ಯೈಕಲಭ್ಯಃ ಪುರುಷೋತ್ತಮೋ ಹಿ ಜಗತ್ಪ್ರಸೂತಿಸ್ಥಿತಿನಾಶಹೇತುಃ ।
ಅಕಿಂಚನಂ ನಾನ್ಯಗತಿಂ ಶರಣ್ಯ ಗೃಹಾಣ ಮಾಂ ಕ್ಲೇಶಿನಮಂಬುಜಾಕ್ಷ ೧೫
ಧರ್ಮಾರ್ಥಕಾಮಮೋಕ್ಷೇಷು ನೇಚ್ಛಾ ಮಮ ಕದಾಚನ ।
ತ್ವತ್ಪಾದಪಂಕಜಂ ಸಾಧೋ—ರ್ಜೀವಿತಂ ದೀಯತಾಂ ಮಮ ೧೬
ಕಾಮಯೇ ತಾವಕತ್ವೇನ ಪರಿಚರ್ಯಾಸು ವರ್ತನಮ್ ।
ನಿತ್ಯಂ ಕಿಂಕರಭಾವೇನ ಪರಿಗೃಹ್ಣೀಷ್ವ ಮಾಂ ವಿಭೋ ೧೭
ಲೋಕಂ ವೈಕುಂಠನಾಮಾನಂ ದಿವ್ಯಂ ಷಾಡ್ಗುಣ್ಯಸಂಯುತಮ್ ।
ಅವೈಷ್ಣವಾನಾಮಪ್ರಾಪ್ಯಂ ಗುಣತ್ರಯವಿವರ್ಜಿತಮ್ ೧೮
ನಿತ್ಯಸಿದ್ಧೈಃ ಸಮಾಕೀರ್ಣಂ ತ್ವನ್ಮಯೈಃ ಪಾಂಚಕಾಲಿಕೈಃ ।
ಸಭಾಪ್ರಾಸಾದಸಂಯುಕ್ತಂ ವನೈಶ್ಚೋಪವನೈಃ ಶುಭೈಃ ೧೯
ವಾಪೀಕೂಪತಟಾಕೈಶ್ಚ ವೃಕ್ಷಷಂಡೈಃ ಸುಮಂಡಿತಮ್ ।
ಅಪ್ರಾಕೃತಸುರೈರ್ವಂದ್ಯ—ಮಯುತಾರ್ಕಸಮಪ್ರಭಮ್ ೨೦



ಪ್ರಕೃಷ್ಟಸತ್ತ್ವರಾಶಿಂ ತ್ವಾಂ ಕದಾ ದ್ರಕ್ಷ್ಯಾಮಿ ಚಕ್ಷುಷಾ ।
ಕ್ರೀಡಂತಂ ರಮಯಾ ಸಾರ್ಧಂ ಲೀಲಾಭೂಮಿಷು ಕೇಶವಮ್ ೨೧
ಮೇಘಶ್ಯಾಮಂ ವಿಶಾಲಾಕ್ಷಂ ಕದಾದ್ರಕ್ಷ್ಯಾಮಿ ಚಕ್ಷುಷಾ ।
ಉನ್ನಸಂ ಚಾರುದಶನಂ ಬಿಂಬೋಷ್ಠಂಚ ಶುಭಾನನಮ್ ೨೨
ವಿಶಾಲವಕ್ಷಸಂ ಶ್ರೀಶಂ ಕಂಬುಗ್ರೀವಂ ಜಗದ್ಗುರುಮ್ ।
ಆಜಾನುಬಾಹುಪರಿಘ - ಮುನ್ನತಾಂಸಂ ಮಧುದ್ವಿಷಮ್ ೨೩
ತನೂದರಂ ನಿಮ್ನನಾಭಿ—ಮಾಪೀನಜಘನಂ ಹರಿಮ್ ।
ಕರಭೋರುಂ ಶ್ರಿಯಃ ಕಾಂತಂ ಕದಾ ದ್ರಕ್ಷ್ಯಾಮಿ ಚಕ್ಷುಷಾ ೨೪
ಶಂಖಚಕ್ರಗದಾಪದ್ಮೈ—ರಂಕಿತಂ ಪಾದಪಂಕಜಮ್ ।
ಶರಚ್ಚಂದ್ರಶತಾಕ್ರಾಂತ—ನಖರಾಜಿವಿರಾಜಿತಮ್ ೨೫
ಸುರಾಸುರೈರ್ವಂದ್ಯಮಾನಂ—ಋಷಿಭಿರ್ವಂದಿತಂ ಸದಾ ।
ಮೂರ್ಧಾನಂ ಮಾಮಕಂ ದೇವ ತಾವಕಂ ಮಂಡಯಿಷ್ಯತಿ ೨೬
ಕದಾ ಗಂಭೀರಯಾ ವಾಚಾ ಶ್ರಿಯಾ ಯುಕ್ತೋ ಜಗತ್ಪತೇ ।
ಚಾಮರವ್ಯಗ್ರಹಸ್ತಂ ಮಾ—ಮೇವಂ ಕುರ್ವಿತಿ ವಕ್ಷ್ಯಸಿ ೨೭
ಕದಾಽಹಂ ರಾಜರಾಜೇನ ಗಣನಾಥೇತ ನೋದಿತಃ ।
ಚರೇಯಂ ಭಗವತ್ಪಾದ—ಪರಿಚರ್ಯಾನುವೃತ್ತಿಷು ೨೮
ಶಾಂತಾಯ ಸುವಿಶುದ್ಧಾಯ ತೇಜಸೇ ಪರಮಾತ್ಮನೇ ।
ನಮಃ ಸರ್ವಗುಣಾತೀತ—ಷಾಡ್ಗುಣ್ಯಾಯಾದಿವೇಧಸೇ ೨೯
ಸತ್ಯಜ್ಞಾನಾನಂತಗುಣ—ಬ್ರಹ್ಮಣೇ ಚತುರಾತ್ಮನೇ ।
(ನಮೋ ಭಗವತೇ ವಿಷ್ಣೋ ವಾಸುದೇವಾಮಿತದ್ಯುತೇ)
ಚತುಃಪಂಚನವವ್ಯೂಹ ದಶದ್ವಾದಶಮೂರ್ತಯೇ ೩೦
ನಮೋಽನಂತಾಯ ವಿಶ್ವಾಯ ವಿಶ್ವಾತೀತಾಯ ಚಕ್ರಿಣೇ ।
ನಮಸ್ತೇ ಪಂಚಕಾಲಜ್ಞ ಪಂಚಕಾಲಪರಾಯಣ ೩೧
ಪಂಚಕಾಲೈಕಮನಸಾಂ ತ್ವಮೇವ ಗತಿರವ್ಯಯಃ ।
ಸ್ವಮಹಿಮ್ನಿ ಸ್ಥಿತಂ ದೇವಂ ನಿರ್ವಿಕಾರಂ ನಿರಂಜನಮ್ ೩೨
ಅಪ್ರಮೇಯಮಜಂ ವಿಷ್ಣುಂ ಶರಣಂ ತ್ವಾಂ ನತೋಽಸ್ಮ್ಯಹಮ್ ।
ಗುಣಾತೀತಂ ಪರಂ ಶಾಂತ—ಮಬ್ಜನಾಭಂ ಸುರೇಶ್ವರಮ್ ೩೩
ತುರೀಯಾದ್ಯತಿರಿಕ್ತಂ ತ್ವಾಂ ಕೌಸ್ತುಭೋದ್ಭಾಸಿವಕ್ಷಸಮ್ ।
ವಿಶ್ವರೂಪಂ ವಿಶಾಲಾಕ್ಷಂ ಕದಾ ದ್ರಕ್ಷ್ಯಾಮಿ ಚಕ್ಷುಷಾ ೩೪
ಮೋಕ್ಷಂ ಸಾಲೋಕ್ಯಸಾರೂಪ್ಯಂ ಪ್ರಾರ್ಥಯೇ ನ ಧರಾಧರ ।
ಇಚ್ಛಾಮಿ ಹಿ ಮಹಾಭಾಗ ಕಾರುಣ್ಯಂ ತವ ಸುವ್ರತ ೩೫

ಸಕಲಾಚರಣಾತೀತಃ  ಕಿಂಕರೋಽಸ್ಮಿ ತವಾನಘ ।
ಪುನಃಪುನಃ ಕಿಂಕರೋಽಸ್ಮಿ  ತವಾಹಂ ಪುರುಷೋತ್ತಮ ೩೬
ಆಸನಾದ್ಯನುಯಾಗಾಂತ—ಮರ್ಚನಂ ಯನ್ಮಯಾ ಕೃತಮ್ ।
ಭಾವಹೀನಂ ಕ್ರಿಯಾಹೀನಂ  ಮಂತ್ರಹೀನಮಭಕ್ತಿಕಮ್ ೩೭
ತತ್ಸರ್ವಂ ಕ್ಷಮ್ಯತಾಂ ದೇವ  ದೀನಂ ಮಾಮಾತ್ಮಸಾತ್ಕುರು ।
ಇತಿ ಸ್ತೋತ್ರೇಣ ದೇವೇಶಂ  ಸ್ತುತ್ವಾ ಮಧುನಿಘಾತಿನಮ್ ೩೮
ಯಾಗಾವಸಾನಸಮಯೇ  ದೇವದೇವಸ್ಯ ಚಕ್ರಿಣಃ ।
ನಿತ್ಯಂ ಕಿಂಕರಭಾವೇನ  ಸ್ವಾತ್ಮಾನಂ ವಿನಿವೇದಯೇತ್ ೩೯

---

## ದ್ವಾದಶಸ್ತೋತ್ರ—ಮೊದಲನೇ ಅಧ್ಯಾಯ

ವಂದೇ ವಂದ್ಯಂ ಸದಾನಂದಂ  ವಾಸುದೇವಂ ನಿರಂಜನಮ್ ।
ಇಂದಿರಾಪತಿಮಾದ್ಯಾದಿ—ವರದೇಶವರಪ್ರದಮ್ ೧
ನಮಾಮಿ ನಿಖಿಲಾಧೀಶ—ಕಿರೀಟಾಘೃಷ್ಟಪೀಠವತ್ ।
ಹೃತ್ತಮಃಶಮನೇಽರ್ಕಾಭಂ  ಶ್ರೀಪತೇಃ ಪಾದಪಂಕಜಮ್ ೨
ಜಾಂಬೂನದಾಂಬರಾಧಾರಂ  ನಿತಂಬಂ ಚಿಂತ್ಯಮೀಶಿತುಃ ।
ಸ್ವರ್ಣಮಂಜೀರಸಂವೀತ—ಮಾರೂಢಂ ಜಗದಂಬಯಾ ೩
ಉದರಂ ಚಿಂತಮೀಶಸ್ಯ  ತನುತ್ವೇಽಪ್ಯಖಿಲಂಭರಮ್ ।
ವಲಿತ್ರಯಾಂಕಿತಂ ನಿತ್ಯ—ಮುಪಗೂಢಂ ಶ್ರಿಯೈಕಯಾ ೪
ಸ್ಮರಣೀಯಮುರೋ ವಿಷ್ಣೋ—ರಿಂದಿರಾವಾಸಮುತ್ತಮಮ್ ।
ಅನಂತಮಂತವದಿವ  ಭುಜಯೋರಂತರಂ ಗತಮ್ ೫
ಶಂಖಚಕ್ರಗದಾಪದ್ಮ—ಧರಾಶ್ಚಿಂತ್ಯಾ ಹರೇರ್ಭುಜಾಃ ।
ಪೀನವೃತ್ತಾ ಜಗದ್ರಕ್ಷಾ—ಕೇವಲೋದ್ಯೋಗಿನೋಽನಿಶಮ್ ೬
ಸಂತತಂ ಚಿಂತಯೇತ್ಕಂಠಂ  ಭಾಸ್ವತ್ಕೌಸ್ತುಭಭಾಸಕಮ್ ।
ವೈಕುಂಠಸ್ಯಾಖಿಲಾ ವೇದಾಃ  ಉದ್ಗೀರ್ಯಂತೇಽನಿಶಂ ಯತಃ ೭
ಸ್ಮರೇತ ಯಾಮಿನೀನಾಥ—ಸಹಸ್ರಾಮಿತಕಾಂತಿಮತ್ ।
ಭವತಾಪಾಪನೋದೀಡ್ಯಂ  ಶ್ರೀಪತೇರ್ಮುಖಪಂಕಜಮ್ ೮
ಪೂರ್ಣಾನನ್ಯಸುಖೋದ್ಭಾಸಿ  ಮಂದಸ್ಮಿತಮಧೀಶಿತುಃ ।
ಗೋವಿಂದಸ್ಯ ಸದಾ ಚಿಂತ್ಯಂ  ನಿತ್ಯಾನಂದಪದಪ್ರದಮ್ ೯
ಸ್ಮರಾಮಿ ಭವಸಂತಾಪ—ಹಾನಿದಾಮೃತಸಾಗರಮ್ ।
ಪೂರ್ಣಾನಂದಸ್ಯ ರಾಮಸ್ಯ  ಸಾನುರಾಗಾವಲೋಕನಮ್ ೧೦



ಧ್ಯಾಯೇದಜಸ್ರಮೀಶಸ್ಯ  ಪದ್ಮಜಾದಿಪ್ರತೀಕ್ಷಿತಮ್ ।
ಭ್ರೂಭಂಗಂ ಪಾರಮೇಷ್ಠ್ಯಾದಿ—ಪದದಾಯಿ ವಿಮುಕ್ತಿದಮ್ ೧೧
ಸಂತತಂ ಚಿಂತಯೇಽನಂತ—ಮಂತಕಾಲೇ ವಿಶೇಷತಃ ।
ನೈವೋದಾಪುರ್ಗೃಣಂತೋಽಂತಂ  ಯದ್ಗುಣಾನಾಮಜಾದಯಃ ೧೨

## ಶ್ರೀಸೂಕ್ತ

ಹರಿಃ ಓಂ॥ ಹಿರಣ್ಯವರ್ಣಾಂ ಹರಿಣೀಂ  ಸುವರ್ಣರಜತಸ್ರಜಾಮ್ ।
ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ  ಜಾತವೇದೋ ಮ ಆ ವಹ ॥
ತಾಂ ಮ ಆ ವಹ ಜಾತವೇದೋ  ಲಕ್ಷ್ಮೀಮನಪಗಾಮಿನೀಮ್ ।
ಯಸ್ಯಾಂ ಹಿರಣ್ಯಂ ವಿಂದೇಯಂ  ಗಾಮಶ್ವಂ ಪುರುಷಾನಹಮ್ ॥
ಅಶ್ವಪೂರ್ವಾಂ ರಥಮಧ್ಯಾಂ  ಹಸ್ತಿನಾದಪ್ರಬೋಧಿನೀಮ್ ।
ಶ್ರಿಯಂ ದೇವೀಮುಪ ಹ್ವಯೇ  ಶ್ರೀರ್ಮಾ ದೇವೀ ಜುಷತಾಮ್ ॥
ಕಾಂ ಸೋಽಸ್ಮಿತಾಂ ಹಿರಣ್ಯಪ್ರಾಕಾರಾ—
ಮಾರ್ದ್ರಾಂ ಜ್ವಲಂತೀಂ ತೃಪ್ತಾಂ ತರ್ಪಯಂತೀಮ್ ।
ಪದ್ಮೇ ಸ್ಥಿತಾಂ ಪದ್ಮವರ್ಣಾಂ  ತಾಮಿಹೋಪ ಹ್ವಯೇ ಶ್ರಿಯಮ್ ॥
ಚಂದ್ರಾಂ ಪ್ರಭಾಸಾಂ ಯಶಸಾ ಜ್ವಲಂತೀಂ
ಶ್ರಿಯಂ ಲೋಕೇ ದೇವಜುಷ್ಟಾಮುದಾರಾಮ್ ।
ತಾಂ ಪದ್ಮಿನೀಮೀಂ ಶರಣಮಹಂ ಪ್ರ-
ಪದ್ಯೇಽಲಕ್ಷ್ಮೀರ್ಮೇ ನಶ್ಯತಾಂ ತ್ವಾಂ ವೃಣೇ ೧
ಆದಿತ್ಯವರ್ಣೇ ತಪಸೋಽಧಿ ಜಾತೋ  ವನಸ್ಪತಿಸ್ತವ ವೃಕ್ಷೋಽಥ ಬಿಲ್ವಃ ।
ತಸ್ಯ ಫಲಾನಿ ತಪಸಾ ನುದಂತು  ಮಾಯಾಂತರಾಯಾಶ್ಚ ಬಾಹ್ಯಾ ಅಲಕ್ಷ್ಮೀಃ ॥
ಉಪೈತು ಮಾಂ ದೇವಸಖಃ  ಕೀರ್ತಿಶ್ಚ ಮಣಿನಾ ಸಹ ।
ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಽಸ್ಮಿನ್  ಕೀರ್ತಿಮೃದ್ಧಿಂ ದದಾತು ಮೇ ।
ಕ್ಷುತ್ಪಿಪಾಸಾಮಲಾಂ ಜ್ಯೇಷ್ಠಾ—ಮಲಕ್ಷ್ಮೀಂ ನಾಶಯಾಮ್ಯಹಮ್ ।
ಅಭೂತಿಮಸಮೃದ್ಧಿಂ ಚ  ಸರ್ವಾಂ ನಿರ್ಣುದ ಮೇ ಗೃಹಾತ್ ॥
ಗಂಧದ್ವಾರಾಂ ದುರಾಧರ್ಷಾಂ  ನಿತ್ಯಪುಷ್ಟಾಂ ಕರೀಷಿಣೀಮ್ ।
ಈಶ್ವರೀಂ ಸರ್ವಭೂತಾನಾಂ  ತಾಮಿಹೋಪ ಹ್ವಯೇ ಶ್ರಿಯಮ್ ॥
ಮನಸಃಕಾಮಮಾಕೂತಂ  ವಾಚಃ ಸತ್ಯಮಶೀಮಹಿ ।
ಪಶೂನಾಂ ರೂಪಮನ್ನಸ್ಯ  ಮಯಿ ಶ್ರೀಃ ಶ್ರಯತಾಂ ಯಶಃ ೨
ಕರ್ದಮೇನ ಪ್ರಜಾಭೂತಾ  ಮಯಿ ಸಂಭವ ಕರ್ದಮ ।
ಶ್ರಿಯಂ ವಾಸಯ ಮೇ ಕುಲೇ  ಮಾತರಂ ಪದ್ಮಮಾಲಿನೀಮ್ ॥

ಆಪಃ ಸೃಜಂತು ಸ್ನಿಗ್ಧಾನಿ ಚಿಕ್ಲೀತ ವಸ ಮೇ ಗೃಹೇ ॥
ನಿ ಚ ದೇವೀಂ ಮಾತರಂ ಶ್ರಿಯಂ ವಾಸಯ ಮೇ ಕುಲೇ ॥
ಆರ್ದ್ರಾಂ ಪುಷ್ಕರಿಣೀಂ ಯಷ್ಟಿಂ ಸುವರ್ಣಾಂ ಹೇಮಮಾಲಿನೀಮ್ ।
ಸೂರ್ಯಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆ ವಹ ॥
ಆರ್ದ್ರಾಂ ಯಃ ಕರಿಣೀಂ ಯಷ್ಟಿಂ ಪಿಂಗಲಾಂ ಪದ್ಮಮಾಲಿನೀಮ್ ।
ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥
ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಮ್ ।
ಯಸ್ಯಾಂ ಹಿರಣ್ಯಂ ಪ್ರಭೂತಂ ಗಾವೋ
ದಾಸ್ಯೋಽಶ್ವಾನ್ ವಿಂದೇಯಂ ಪುರುಷಾನಹಮ್ ॥ ೩ ॥

ಫಲಸ್ತುತಿ

ಯಃ ಶುಚಿಃ ಪ್ರಯತೋ ಭೂತ್ವಾ ಜುಹುಯಾದಾಜ್ಯಮನ್ವಹಮ್ ।
ಶ್ರಿಯಃ ಪಂಚದಶರ್ಚಂ ಚ ಶ್ರೀ ಕಾಮಃ ಸತತಂ ಜಪೇತ್ ॥
ಅಶ್ವದಾಯೀ ಗೋದಾಯೀ ಧನದಾಯೀ ಮಹಾಧನೇ ।
ಧನಂ ಮೇ ಜುಷತಾಂ ದೇವಿ ಸರ್ವಕಾಮಾಂಶ್ಚ ದೇಹಿ ಮೇ ॥
ಪುತ್ರಪೌತ್ರಧನಂ ಧಾನ್ಯಂ ಹಸ್ತ್ಯಶ್ವಾದಿ ಗವೇರಥಮ್ ।
ಪ್ರಜಾನಾಂ ಭವಸೀ ಮಾತಾ ಆಯುಷ್ಮಂತಂ ಕರೋತು ಮಾಮ್ ॥
ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ ।
ಭವಂತಿ ಕೃತಪುಣ್ಯಾನಾಂ ಭಕ್ತಾನಾಂ ಶ್ರೀ ಸೂಕ್ತಂ ಜಪೇತ್ ॥
ಚಂದ್ರಾಭಾಂ ಲಕ್ಷ್ಮೀಮೀಶಾನಾಂ ಸೂರ್ಯಾಭಾಂ ಶ್ರಿಯಮೈಶ್ವರೀಮ್ ।
ಚಂದ್ರಸೂರ್ಯಾಗ್ನಿವರ್ಣಾಭಾಂ ಶ್ರೀಮಹಾಲಕ್ಷ್ಮೀಮುಪಾಸ್ಮಹೇ ।
ಧನಮಗ್ನಿರ್ಧನಂ ವಾಯು—ರ್ಧನಂ ಸೂರ್ಯೋ ಧನಂ ವಸುಃ ।
ಧನಮಿಂದ್ರೋ ಬೃಹಸ್ಪತಿ—ರ್ವರುಣಂ ಧನಮಶ್ನು ತೇ ॥
ವೈನತೇಯ ಸೋಮಂ ಪಿಬ ಸೋಮಂ ಪಿಬತು ವೃತ್ರಹಾ ।
ಸೋಮಂ ಧನಸ್ಯ ಸೋಮಿನೋ ಮಹ್ಯಂ ದದಾತು ಸೋಮಿನಃ ॥
ವರ್ಷಂತುತೇ ವಿಭಾವರಿ—ದಿವೋ ಅಭ್ರಸ್ಯ ವಿದ್ಯುತಃ ।
ರೋಹಂತು ಸರ್ವಬೀಜಾ—ನ್ಯವ ಬ್ರಹ್ಮ ದ್ವಿಷೋಜಹಿ ॥
ಪದ್ಮಾನ(ಸ)ನೇ ಪದ್ಮಊರು ಪದ್ಮಾಕ್ಷೀ ಪದ್ಮಸಂಭವೇ ।
ತನ್ಮೇ ಭಜಸಿ ಪದ್ಮಾಕ್ಷಿ ಯೇನ ಸೌಖ್ಯಂ ಲಭಾಮ್ಯಹಮ್ ॥
ಪದ್ಮಪ್ರಿಯೇ ಪದ್ಮಿನಿ ಪದ್ಮಹಸ್ತೇ ಪದ್ಮಾಲಯೇ ಪದ್ಮದಳಾಯತಾಕ್ಷಿ ।
ವಿಶ್ವಪ್ರಿಯೇ ವಿಷ್ಣುಮನೋಽನುಕೂಲೇ ತ್ವತ್ಪಾದಪದ್ಮಂ ಮಯಿ ಸನ್ನಿಧತ್ಸ್ವ ॥
ಮಹಾದೇವೀ (ಲಕ್ಷ್ಮೀ) ಚ ವಿದ್ಮಹೇ ವಿಷ್ಣುಪತ್ನೀ ಚ ಧೀಮಹಿ ।
ತನ್ನೋ ಲಕ್ಷ್ಮೀಃ ಪ್ರಚೋದಯಾತ್ ॥



ಸರಸಿಜನಿಲಯೇ ಸರೋಜಹಸ್ತೇ ಧವಲತರಾಂಶುಕಗಂಧಮಾಲ್ಯಶೋಭೇ ।
ಭಗವತಿ ಹರಿವಲ್ಲಭೇ ಮನೋಜ್ಞೇ ತ್ರಿಭುವನ ಭೂತಿಕಾರಿ ಪ್ರಸೀದ ಮಹ್ಯಂ ॥
ಯಾಸಾ ಪದ್ಮಾಸನಸ್ಥಾ ವಿಪುಲ—ಕಟಿತಟೀ ಪದ್ಮಪತ್ರಾಯತಾಕ್ಷೀ ।
ಗಂಭೀರಾವರ್ತನಾಭಿಸ್ತನಭರ—ನಮಿತಾ ಶುಭ್ರವಸ್ತ್ರೋತ್ತರೀಯಾ ॥
ಲಕ್ಷ್ಮೀರ್ದಿವ್ಯೈರ್ಗಜೇಂದ್ರೈರ್ಮಣಿಗಣ-
ಖಚಿತೈಃ ಸ್ನಾಪಿತಾ ಹೇಮಕುಂಭೈರ್ನಿತ್ಯಂ
ಸಾ ಪದ್ಮಹಸ್ತಾ ಮಮ ವಸತು ಗೃಹೇ ಸರ್ವಮಾಂಗಲ್ಯಯುಕ್ತಾ ॥
ಸರ್ವಮಂಗಲಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತು ತೇ ॥

---

## ಅಂಭ್ರಣೀಸೂಕ್ತ

ಹರಿಃ ಓಂ ॥ ಅಹಂ ರುದ್ರೇಭಿರ್ವಸುಭಿಶ್ಚರಾಮ್ಯಹಮಾದಿತ್ಯೈರುತ ವಿಶ್ವದೇವೈಃ ।
ಅಹಂ ಮಿತ್ರಾವರುಣೋಭಾ ಬಿಭರ್ಮ್ಯಹಮಿಂದ್ರಾಗ್ನೀ ಅಹಮಶ್ವಿನೋಭಾ ॥ ೧
ಅಹಂ ಸೋಮಮಾಹನಸಂ ಬಿಭರ್ಮ್ಯಹಂ ತ್ವಷ್ಟಾರಮುತಪೂಷಣಂ ಭಗಮ್ ।
ಅಹಂ ದಧಾಮಿ ದ್ರವಿಣಂ ಹವಿಷ್ಮತೇ ಸುಪ್ರಾವ್ಯೇಽಯಜಮಾನಾಯ ಸುನ್ವತೇ । ೨
ಅಹಂ ರಾಷ್ಟ್ರೀ ಸಂಗಮನೀ ವಸೂನಾಂ ಚಿಕಿತುಷೀ ಪ್ರಥಮಾ ಯಜ್ಞಿಯಾನಾಮ್ ।
ತಾಂ ಮಾ ದೇವಾ ವ್ಯದಧುಃ ಪುರುತ್ರಾ ಭೂರಿಸ್ಥಾತ್ರಾಂ ಭೂರ್ಯಾವೇಶಯಂತೀಂ ॥ ೩
ಮಯಾ ಸೋ ಅನ್ನಮತ್ತಿ ಯೋ ವಿಪಶ್ಯತಿ
ಯಃ ಪ್ರಾಣಿತಿ ಯ ಈಂ ಶೃಣೋತ್ಯುಕ್ತಮ್ ।
ಅಮಂತವೋ ಮಾಂ ತ ಉಪ ಕ್ಷಿಯಂತಿ ಶ್ರುಧಿ ಶ್ರುತ ಶ್ರದ್ಧಿವಂ ತೇ ವದಾಮಿ ॥ ೪
ಅಹಮೇವ ಸ್ವಯಮಿದಂ ವದಾಮಿ ಜುಷ್ಟಂ ದೇವೇಭಿರುತ ಮಾನುಷೇಭಿಃ ।
ಯಂ ಕಾಮಯೇ ತಂತಮುಗ್ರಂ ಕೃಣೋಮಿ
ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಮ್ ॥ ೫
ಅಹಂ ರುದ್ರಾಯ ಧನುರಾ ತನೋಮಿ ಬ್ರಹ್ಮದ್ವಿಷೇ ಶರವೇ ಹಂತವಾ ಉ ।
ಅಹಂ ಜನಾಯ ಸಮದಂ ಕೃಣೋಮ್ಯಹಂ ದ್ಯಾವಾಪೃಥಿವೀ ಆ ವಿವೇಶ ॥ ೬
ಅಹಂ ಸುವೇ ಪಿತರಮಸ್ಯ ಮೂರ್ಧನ್ಮಮ ಯೋನಿರಪ್ಸ್ವಂತಃ ಸಮುದ್ರೇ ।
ತತೋ ವಿ ತಿಷ್ಠೇ ಭುವನಾನು ವಿಶ್ವೋತಾಮೂಂ ದ್ಯಾಂ ವರ್ಷ್ಮಣೋಪ ಸ್ಪೃಶಾಮಿ ॥
ಅಹಮೇವ ವಾತ ಇವ ಪ್ರ ವಾಮ್ಯಾರಭಮಾಣಾ ಭುವನಾನಿ ವಿಶ್ವಾ ।
ಪರೋ ದಿವಾ ಪರ ಏನಾ ಪೃಥಿವ್ಯೈತಾವತೀ ಮಹಿನಾ ಸಂ ಬಭೂವ ೮

---